"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

17ನೇ ನವೆಂಬರ್ 2017
ಶುಕ್ರವಾರ

**ವಿಷಯಾನುಕ್ರಮಾಣಿಕೆ**

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

3917 – ಲ್ಯಾಪ್‌ಟಾಪ್ ಖರೀದಿಸಿರುವ ಬಗ್ಗೆ– ಶ್ರೀ ರಘುನಾಥರಾವ್ ಮಲ್ಕಾಪೂರೆ

4036 – ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಪಡಿಸುವ ಬಗ್ಗೆ.
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

4118 – ಬಸ್‌ಗಳಲ್ಲಿ ಅನೈತಿಕ ಚಟುವಟಿಕೆಯನ್ನು ನಿಯಂತ್ರಿಸುವ ಬಗ್ಗೆ
– ಡಾ:ಜಯಮಾಲ ರಾಮಚಂದ್ರ

3875 – ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯ ಬಗ್ಗೆ
– ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)

4090 – ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನದ ಬಗ್ಗೆ.
– ಶ್ರೀ ರಾಮಚಂದ್ರಗೌಡ

4124 – ಚರ್ಚುಗಳ ನವೀಕರಣ ಮತ್ತು ರಿಪೇರಿಗಾಗಿ– ಶ್ರೀ ಆರ್.ಧರ್ಮಸೇನ

4044 – 1995ರ ಪೂರ್ವದಲ್ಲಿನ ಖಾಸಗಿ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ– ಶ್ರೀ ಕೆ.ಟಿ. ಶ್ರೀಕಂಠೇಗೌಡ

4131 – ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.
– ಶ್ರೀ ಬಸವರಾಜ ಶಿವಲಿಂಗ ಹೊರಟ್ಟಿ

4144 – ಗುತ್ತಿಗೆ ನೌಕರರ ಸೌಲಭ್ಯಗಳ ಬಗ್ಗೆ– ಶ್ರೀ ಎಂ.ನಾರಾಯಣಸ್ವಾಮಿ

3914 – ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಕೊಠಡಿಗಳ ದುರಸ್ತಿ ಬಗ್ಗೆ.
– ಶ್ರೀ ಬಸವರಾಜ ಪಾಟೀಲ್ ಇಟಗಿ

4295 – ಡೀಮ್ಡ್ ವಿಶ್ವವಿದ್ಯಾಲಯದ ಕುರಿತು– ಶ್ರೀ ರಮೇಶ್ ಬಾಬು

4140 – ಗುತ್ತಿಗೆ ಆಧಾರದ ಮೇಲೆ ನಿವೃತ್ತಿ ಹೊಂದಿದವರಿಗೆ ಕಾಲ್ಪನಿಕ ವೇತನ ಬಡ್ತಿ ನೀಡಿರುವ ಬಗ್ಗೆ. – ಶ್ರೀ ಅಮರನಾಥ ಪಾಟೀಲ್

3864 – ರಾಜ್ಯದಲ್ಲಿನ ಪ್ರಾಥಮಿಕ ಶಾಲಾ ಮಹಿಳಾ ಶಿಕ್ಷಕರ ಕುರಿತು.
– ಶ್ರೀಮತಿ ತಾರಾಅನೂರಾಧ

3865 – 2013-14 ರಿಂದ 2016-17ರವರೆಗೆ ಶುದ್ಧ ಕುಡಿಯುವ ನೀರಿನ ಬಗ್ಗೆ.
– ಶ್ರೀ ಸೋಮಣ್ಣ ಮ.ಬೇವಿನಮರದ

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

2. **ಪ್ರಕಟಣೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**೩. ಸಭಾಪತಿಯವರ ಅನುಮತಿ ಮೇರೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಬಗ್ಗೆ.**

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಆ) ರಾಜ್ಯ ಸರ್ಕಾರದ ಪಿಂಚಣಿ ಯೋಜನೆ ಕುರಿತು**

– ಶ್ರೀ ರಮೇಶ್ ಬಾಬು

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಇ) ಜಿಲ್ಲಾ ಮತ್ತು ತಾಲ್ಲೂಕು ವಿಭಜನೆ ಘೋಷಣೆ ಮಾಡುವಾಗ ಸಾರ್ವಜನಿಕ ಅಭಿಪ್ರಾಯ ಆಲಿಸುವ ಕುರಿತು.**

– ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಈ) ಸಾಲ ಮರುಪಾವತಿ ಅವಧಿ ವಿಸ್ತರಣೆ ಕುರಿತು**

– ಶ್ರೀಮತಿ ಮೋಟಮ್ಮ

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಉ) ಅತಿಥಿ ಉಪನ್ಯಾಸಕರುಗಳ ವೇತನ ಪಾವತಿ ಕುರಿತು**

– ಶ್ರೀ ಎನ್.ಅಪ್ಪಾಜಿಗೌಡ

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**4. ಸಚಿವರ ಹೇಳಿಕೆಗಳು**

**ಅ) ರಾಜ್ಯದ ಸುಮಾರು 6022 ಗ್ರಾಮ ಪಂಚಾಯತ್‌ಗಳಲ್ಲಿ ಡಾಟಾ ಎಂಟ್ರಿ ಆಪರೇಟ್ ನೇಮಕಾತಿ ಬಗ್ಗೆ.**

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಆ) ‘ಪದ್ಮಾವತಿ’ ಎಂಬ ಹಿಂದಿ ಚಲನಚಿತ್ರ ಬಿಡುಗಡೆ ವಿರೋಧಿಸಿ ಪ್ರತಿಭಟನೆ ನಡೆಯುತ್ತಿರುವ ಬಗ್ಗೆ.**

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**ಇ) ಸ್ನಾತಕೋತ್ತರ ಕೇಂದ್ರ ಧಾರವಾಡದಲ್ಲಿ ಬೋಧಕ ಮತ್ತು ಬೋಧಕೇತರರನ್ನು ಖಾಯಂ ಆಗಿ ನೇಮಿಸಿಕೊಂಡು ಪ್ರೊಬೇಷನರಿ ಅವಧಿ ಡಿಕ್ಲೇರ್ ಮಾಡದಿರುವ ಬಗ್ಗೆ.**

– ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)

**5.ವರದಿಗಳನ್ನೊಪ್ಪಿಸುವುದು.**

**6. ಅರ್ಜಿಗಳನ್ನೊಪ್ಪಿಸುವುದು**

<><><>

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1049)17-11-2017 11.00 ಡಿಎಸ್-ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

***ಶುಕ್ರವಾರ, 17ನೇ ನವೆಂಬರ್ 2017***

***ಸದನವು ಬೆಳಗಾವಿಯ ಸುವರ್ಣ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ***

***ಬೆಳಗ್ಗೆ 11 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು.***

***ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು***

***ಪೀಠದಲ್ಲಿ ಉಪಸ್ಥಿತರಿದ್ದರು.***

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಚುಕ್ಕೆ ಪ್ರಶ್ನೆ ಸಂಖ್ಯೆ: 3899**

(ಮಾನ್ಯ ಸದಸ್ಯರಾದ ಸಿ.ಆರ್.ಮನೋಹರ್‌ರವರು ಸದನದಲ್ಲಿ ಗೈರು ಹಾಜರಾಗಿದ್ದರು)

**ಚುಕ್ಕೆ ಪ್ರಶ್ನೆ ಸಂಖ್ಯೆ: 3917**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999ರ ಪ್ರಕಾರ ಟೆಂಡರನ್ನು ಕರೆಯಲು ತೀರ್ಮಾನಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಕಳೆದ ಬಾರಿ ಅಂದರೆ, 2016-17ನೇ ಸಾಲಿನಲ್ಲಿ ಖರೀದಿ ಮಾಡಿರುವಂತಹ ಲ್ಯಾಪ್‌ಟಾಪ್‌ಗಳು ವಿತರಣೆಯಾಗಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1050/17-11-2017/11-10/bkp-gr

**ಶ್ರೀ ರಘುನಾಥ ರಾವ್ ಮಲ್ಕಾಪೂರೆ(ಮುಂದು)**

ಎರಡನೆಯದಾಗಿ, ಇದನ್ನು ಯಾವ ಮಾನದಂಡದ ಮೇಲೆ ವಿತರಿಸಲಾಗಿದೆ ಎಂದು ಕೇಳಿದ್ದೇನೆ. ವಾರ್ಷಿಕ ವರಮಾನ ರೂ. 2.50 ಲಕ್ಷಕ್ಕಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ.,/ಟಿ.ಎಸ್.ಪಿ., ಯೋಜನೆಯಡಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿದೆ ಎಂದು ಹೇಳಿದ್ದಾರೆ.

ಮೂರನೆಯದಾಗಿ, ಈವರೆಗೆ ಈ ಇಲಾಖೆಗಳು ಎಷ್ಟು ಲ್ಯಾಪ್‌ಟಾಪ್‌ಗಳನ್ನು ಖರೀದಿಸಿವೆ, ಪ್ರತಿಯೊಂದು ಲ್ಯಾಪ್‌ಟಾಪ್ ಖರೀದಿಗೆ ತಗುಲಿದ ವೆಚ್ಚವೆಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರಿಸುತ್ತಾ, ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗಳಿಗೆ ಅಗತ್ಯವಿದ್ದ ಒಟ್ಟು 31,742 ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಇ-ಟೆಂಡರ್ ಆಹ್ವಾನಿಸಿ, ಟೆಂಡರ್‌ನಲ್ಲಿ ಅತೀ ಕಡಿಮೆ ಬಿಡ್ ಮಾಡಿದ ಮೆ: ಏಸರ್ ಇಂಡಿಯಾ ಪ್ರೈ.ಲಿ., ಸಂಸ್ಥೆಯಿಂದ ಪ್ರತಿಯೊಂದು ಲ್ಯಾಪ್‌ಟಾಪ್‌ನ ದರ ರೂ. 14,490/- (ಎಲ್ಲಾ ತೆರಿಗೆಗಳು ಸೇರಿ)ರಂತೆ ಕಾಲೇಜು ಶಿಕ್ಷಣ ಇಲಾಖೆಗೆ 24,404 ಲ್ಯಾಪ್‌ಟಾಪ್‌ಗಳು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗೆ 7,338 ಲ್ಯಾಪ್‌ಟಾಪ್‌ಗಳು ಸೇರಿದಂತೆ ಒಟ್ಟು 31,742 ಲ್ಯಾಪ್‌ಟಾಪ್‌ಗಳನ್ನು ರಾಜ್ಯದ ವಿವಿಧ ಕಾಲೇಜುಗಳಿಗೆ ಸರಬರಾಜು ಮಾಡಲು ದಿನಾಂಕ: 03-10-2017 ರಂದು ಖರೀದಿ ಆದೇಶ ನೀಡಲಾಗಿದೆ. ಈ ಲ್ಯಾಪ್‌ಟಾಪ್‌ನ ಕಾನ್ಫಿಗರೇಶನ್ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಆ ಪ್ರಶ್ನೆಯ ವಿಚಾರ ಬೇಡ. ಏಕೆಂದರೆ, ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದೆಲ್ಲವನ್ನು ಓದಲಾಗಿದೆ. ಅದನ್ನು ಬಿಟ್ಟು ನಿಮ್ಮ ಉಪ ಪ್ರಶ್ನೆ ಏನೆಂದು ಕೇಳಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೂ ಇಲ್ಲ. ನನ್ನ ಈ ಪ್ರಶ್ನೆಗೆ ಪೂರಕವಾಗಿ ಕೇಳುವುದಾದರೆ ಕಳೆದ ಬಾರಿ ಏನು ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಿದ್ದರು, ಅದು ಒಂದೂ ಸಹ ವಿತರಣೆಯಾಗಿರುವುದಿಲ್ಲವೆನ್ನುವುದು ಒಂದು ವಿಚಾರ. ಎರಡನೆಯದಾಗಿ, ಈ ಬಾರಿ 1,50,000 ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಲಿಕ್ಕೆ ಹೊರಟಿದ್ದಾರೆ. ಈ ಬಗ್ಗೆ ಪತ್ರಿಕೆಗಳ ಮೂಲಕ ನನಗೆ ಬಂದ ಮಾಹಿತಿ ಪ್ರಕಾರ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಅಂದರೆ, ಶ್ರೀಯುತ ಅಜಯ್ ನಾಗಭೂಷಣ್ ಎನ್ನುವವರು ಇಲಾಖೆಯ ಮೇಲೆ ಆರೋಪ ಮಾಡಿದ್ದಾರೆ. ಕಳೆದ ಬಾರಿ ಖರೀದಿ ಮಾಡಿದ ರೇಟ್‌ಗಿಂತ ಟೆಂಡರ್ ಅಂದರೆ ಗ್ಲೋಬಲ್ ಟೆಂಡರ್ ಕರೆಯಲಾರದೆ ಈ ಅವಶ್ಯಕತೆಗಳನ್ನು 3-4 ಭಾಗದಲ್ಲಿ ವಿಂಗಡಣೆ ಮಾಡಿ ಕೊಟೇಷನ್ ಮೂಲಕ ಪ್ರತಿಯೊಂದು ಲ್ಯಾಪ್‌ಟಾಪ್‌ಗೆ ರೂ.10,000 ಗಳ ಹೆಚ್ಚಿನ ದರದಲ್ಲಿ ಖರೀದಿ ಮಾಡಿದ್ದಾರೆ. ಅಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

೩೦೦ ಕೋಟಿ ರೂಪಾಯಿಗಳ ಖರೀದಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರದ ಹಗರಣ ನಡೆಯಲಿಕ್ಕೆ ಇಲಾಖೆ ಈಗಾಗಲೇ ಅನುಮೋದನೆ ಕೊಟ್ಟಿದೆ ಎನ್ನುವಂತಹ ಮಾತನ್ನು ಅಲ್ಲಿನ ಆಯುಕ್ತರು ಸರ್ಕಾರದ ಮೇಲೆ, ಇಲಾಖೆಯ ಮೇಲೆ ಆರೋಪ ಮಾಡಿದ್ದಾರೆ. ಇದರಲ್ಲಿ ಸಚಿವರು ಸಹ ಭಾಗಿಯಾಗಿದ್ದಾರೆಂದವರು ಹೇಳಿದ್ದಾರೆ. ಆದರೆ, ನಾವೇನೂ ನಿಮ್ಮ ಬಗ್ಗೆ ಸಂಶಯ ಪಡುತ್ತಿರಲಿಲ್ಲ. ಏಕೆಂದರೆ, ಮಾನ್ಯ ಸಚಿವರ ಮೇಲೆ ಅಪಾರವಾದಂತಹ ಗೌರವ ನಮಗಿದೆ. ಆದರೆ, ಆರೋಪ ಮಾಡಿರುವಂತಹ ಮತ್ತು ಚೆನ್ನಾಗಿ ಕೆಲಸ ಮಾಡುತ್ತಿದ್ದಂತಹ ಆಯುಕ್ತರನ್ನು ಬೇರೆ ಕಡೆ ವರ್ಗಾವಣೆ ಮಾಡಿದ್ದಾರೆ.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನೆಂದು ಕೇಳಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಹಾಗಾದರೆ, ಇದರ ಸತ್ಯಾಂಶ ಏನು? ಈ ೩೦೦ ಕೋಟಿ ರೂಪಾಯಿಗಳಲ್ಲಿ ಆ ಆಯುಕ್ತರು ಹೇಳಿರುವ ಪ್ರಕಾರ ಇಲಾಖೆಯಿಂದ ಏನಾದರೂ ಅವ್ಯವಹಾರ ಆಗಿದೆಯೇ ಎನ್ನುವುದರ ವಿವರವನ್ನು ಮಾನ್ಯ ಸಚಿವರು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಕೇಳಿದಂತಹ ಮಾನ್ಯ ಸದಸ್ಯರಾದ ಶ್ರೀಯುತ ರಘುನಾಥ ರಾವ್ ಮಲ್ಕಾಪೂರೆ ಯವರನ್ನು ನಾನು ಮೊದಲು ನನ್ನ ಪರವಾಗಿ ಮತ್ತು ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಅವರಿಗೆ ಇದರ ಬಗ್ಗೆ ಏನಾದರೂ ಹೇಳಿದ್ದೀರಾ? ಮ್ಯಾಚ್ ಫಿಕ್ಸಿಂಗ್ ಆಗಿದೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ನಾನು ಏನೂ ಅವರಿಗೆ ಹೇಳಿಲ್ಲ. ಮ್ಯಾಚ್ ಫಿಕ್ಸಿಂಗ್ ಏನೂ ಆಗಿಲ್ಲ. ಮ್ಯಾಚ್ ಫಿಕ್ಸಿಂಗ್ ಆಗಿದ್ದರೆ ನಾನೇ ಹೇಳಿಬಿಡುತ್ತಿದ್ದೆ. ನಾನು ಏತಕ್ಕೆ ಅವರನ್ನು ಅಭಿನಂದಿಸುತ್ತಿದ್ದೇನೆಂದು ಕೇಳಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಈ ಬಗ್ಗೆ ಕೆಲವರು ಕೇಳಿದರು. ಮ್ಯಾಚ್ ಫಿಕ್ಸಿಂಗ್ ಆಗಿದ್ದರೆ ಮಾನ್ಯ ಸಚಿವರು ಉತ್ತರವನ್ನೇ ಕೊಡುತ್ತಿರಲಿಲ್ಲವೆಂದು ನಾನವರಿಗೆ ಹೇಳಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಒಂದು ಕಡೆ ಅಭಿನಂದನೆಯನ್ನು ಸಲ್ಲಿಸುತ್ತೀರಿ. ಇನ್ನೊಂದು ಕಡೆ ಮ್ಯಾಚ್ ಫಿಕ್ಸಿಂಗ್ ಆಗಿಲ್ಲವೆಂದು ಹೇಳುತ್ತೀರಿ.

**ಶ್ರೀ ಬಸವರಾಜ ರಾಯರೆಡ್ಡಿ:-** ನಾನು ಅವರು ಹೇಳಿದ್ದಕ್ಕೆ ಹೇಳಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಕೆ.ಎಸ್.ಈಶ್ವರಪ್ಪ:- ಅವರು ಹೇಳಿದ್ದಕ್ಕೆ ನಾನೂ ಹೇಳುತ್ತಿರುವುದಾಗಿದೆ. ಇಲ್ಲಿ ತುಂಬಾ ಸ್ಪಷ್ಟವಾಗಿ . . .

**ಶ್ರೀ ಬಸವರಾಜ ರಾಯರೆಡ್ಡಿ**:- ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ. ನಾನು ಈ ವಿಚಾರವನ್ನು ಏತಕ್ಕೆ ಹೇಳಿದೆನೆಂದರೆ ವಿಷಯಗಳನ್ನು ತಿಳಿದುಕೊಳ್ಳದೆ, ಪತ್ರಿಕೆಯಲ್ಲಿ ಯಾರ್‍ಯಾರೋ ಏನೇನೋ ಮಾತನಾಡುತ್ತಾರೆ, ಆರೋಪಗಳನ್ನು ಮಾಡುತ್ತಾರೆ, ಆರೋಪಗಳನ್ನು ಮಾಡುವಂತಹ ಸಂದರ್ಭಗಳಲ್ಲಿ ಆ ವಿಷಯದಲ್ಲಿ ಏನಿದೆ, ಅದನ್ನೆಲ್ಲಾ ತಿಳಿದುಕೊಳ್ಳಬೇಕು. ಈಗ ಶ್ರೀಯುತ ರಘುನಾಥ ರಾವ್ ಮಲ್ಕಾಪೂರೆಯವರು ಆಯುಕ್ತರು ಹೇಳಿರುವುದನ್ನು ಹೇಳಿದ್ದಾರೆ. ನಾನು ಅದರ ಬಗ್ಗೆ ವಿವರಣೆಯನ್ನು ಕೊಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ವಿಷಯಗಳಿವೆ. ಮಾನ್ಯ ಸದಸ್ಯರು ಎರಡು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. 2016-17ನೇ ಸಾಲಿನಲ್ಲಿ ಸರ್ಕಾರಿ ಕಾಲೇಜು ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಓದುತ್ತಿರುವಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ಕೊಡಬೇಕೆನ್ನುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ತೆಗೆದುಕೊಂಡ ಮೇಲೆ ನಾನಾ ಕಾರಣಗಳಿಂದ ಟೆಂಡರ್ ಮಾಡುವುದು ವಿಳಂಬವಾಯಿತು. 2-3 ಬಾರಿ ಟೆಂಡರ್ ಆಯಿತು. ಹೀಗಾಗಿ, ಸರ್ಕಾರಕ್ಕೆ ಈ ಕೆಲಸವನ್ನು ಮಾಡಲಿಕ್ಕೆ ಆಗಿರಲಿಲ್ಲ. ಅಂದರೆ ಟೆಂಡರ್ ಕರೆಯುವುದು ವಿಳಂಬವಾಯಿತು. ನನ್ನ ಅಥವಾ ನಮ್ಮ ಸರ್ಕಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಎಂದು ನಾನು ಹೇಳುವುದಿಲ್ಲ. ಪ್ರಾಮಾಣಿಕವಾಗಿ ದಯಮಾಡಿ ನೀವು ಅದನ್ನು ಹೋಗಿ ನೋಡಲೇಬೇಕು. ಇ-ಟೆಂಡರ್ ಕರೆದಾಗ ಮೆ: ಏಸರ್ ಇಂಡಿಯಾ ಪ್ರೈ.ಲಿ. ಸಂಸ್ಥೆಯವರು ಕಡಿಮೆ ಬಿಡ್ ಮಾಡಿದ್ದಾರೆ. They were the lowest bidders. ರೂ.14,490 ಏನಿದೆ, ಆ ಹಣಕ್ಕೆ ಎಲ್ಲಾ ಕಾಲೇಜುಗಳಿಗೆ ಲ್ಯಾಪ್‌ಟಾಪ್‌ಗಳು ಬಂದು ಬಿಟ್ಟಿವೆ. ಪ್ರತಿಯೊಂದು ಲ್ಯಾಪ್‌ಟಾಪ್‌ನ ಕ್ವಾಲಿಟಿಯನ್ನು ಟೆಸ್ಟ್ ಮಾಡಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ. ಅದಕ್ಕಾಗಿ ಈ ತಿಂಗಳಿನಲ್ಲಿ ಆ ಲ್ಯಾಪ್‌ಟಾಪ್‌ಗಳು ವಿತರಣೆಯಾಗುತ್ತವೆ.

ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಮನವಿ ಮಾಡುವುದೇನೆಂದರೆ ದಯಮಾಡಿ ನಾವು ಕೊಟ್ಟಿರುವಂತಹ ಆ ಲ್ಯಾಪ್‌ಟಾಪ್ ನೋಡಿ. ಹೊರಗಡೆ it costs more than Rs.20,000/-. I am talking about the M.R.P., itself. Fortunately, ಟೆಂಡರ್‌ನಲ್ಲಿ ನಮಗೆ 14,490 ರೂಪಾಯಿಗಳಿಗೆ ಒಂದು ಲ್ಯಾಪ್‌ಟಾಪ್ ಸಿಕ್ಕಿಬಿಟ್ಟಿದೆ. ಇದರಿಂದ, ಸರ್ಕಾರಕ್ಕೆ ಸಾಕಷ್ಟು ಹಣ ಉಳಿತಾಯವಾಗಿದೆ. ಅವರು ಈ ವಿಚಾರದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೆಂಡರ್ ಕ್ಯಾನ್ಸಲ್ ಮಾಡಿಸಿಕೊಳ್ಳಲಿಕ್ಕೆ ಬಹಳ ಪ್ರಯತ್ನ ಮಾಡಿದರು. ಸರ್, ನಾವು ಹೇಗೋ ತಪ್ಪು ಮಾಡಿಬಿಟ್ಟಿದ್ದೇವೆ, ಟೆಂಡರ್ ಕ್ಯಾನ್ಸಲ್ ಮಾಡಿ ಎಂದು ಕೇಳಿದರು. Nothing doing, this is a tender, ನೀವು ಮಾಡಲೇ ಬೇಕೆಂದಾಗ ಈಗ ಅವರು ಲ್ಯಾಪ್‌ಟಾಪ್‌ಗಳನ್ನು ಒದಗಿಸಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರು ಯಾರಿದ್ದೀರಿ, ಅಲ್ಲಿ ಹೋಗಿ ಕ್ವಾಲಿಟಿ ಚೆಕ್ ಮಾಡಿಸಿ. One of the best quality laptops we have given. ಇದರಲ್ಲಿ ಯಾವುದೇ ಅವ್ಯವಹಾರವಾಗಿಲ್ಲ. ಇದನ್ನು ಡಿಸೆಂಬರ್ ಅಂತ್ಯದೊಳಗಾಗಿ ಪ್ರತಿಯೊಂದರ ಕ್ವಾಲಿಟಿಯನ್ನು ಚೆಕ್ ಮಾಡಿಸಿ ಕಾಲೇಜುಗಳಿಗೆ ಕೊಡಿಸುತ್ತೇವೆ. ಇದು ಒಂದು ವಿಚಾರ. ಈ ವಿಚಾರದಲ್ಲಿ ಏತಕ್ಕೆ ವಿಳಂಬವಾಯಿತು ಎನ್ನುವುದರ ಬಗ್ಗೆಯೂ ನಾನು ಹೇಳಿದ್ದೇನೆ.

ಎರಡನೆಯದಾಗಿ, ಬಹಳ ಗಂಭೀರವಾದ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರು ಪ್ರಸ್ತಾಪ ಮಾಡಿದ್ದಾರೆ. 2017-18ನೇ ಪ್ರಸಕ್ತ ಸಾಲಿನಲ್ಲಿ ನಾವು ಲ್ಯಾಪ್‌ಟಾಪ್ ಕೊಡಬೇಕೆಂದು ಏನು ತೀರ್ಮಾನ ಮಾಡಿದ್ದೆವು, ಅದನ್ನು ನಮ್ಮ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಹೇಳಿದ್ದಾರೆ. ಕಳೆದ ವರ್ಷ ನಾವು ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಕೊಟ್ಟಿದ್ದೇವೆ, ಈ ವರ್ಷ ಸಾಮಾನ್ಯ ವರ್ಗದವರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತ ವರ್ಗದವರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು, ಹೀಗೆ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಅಂದರೆ ಯಾರು ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ವರ್ಷದಲ್ಲಿ ಅಂದರೆ, ಪ್ರಥಮ ವರ್ಷದ ಬಿ.ಎ., ಬಿಕಾಂ., ಬಿಎಸ್ಸಿ., ಪ್ರಥಮ ವರ್ಷದ ಇಂಜಿನೀಯರಿಂಗ್, ಮೆಡಿಕಲ್ ನಲ್ಲಿ ಓದುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಉಚಿತವಾಗಿ ಲ್ಯಾಪ್‌ಟಾಪ್ ಕೊಡಬೇಕೆನ್ನುವ ಪ್ರಸ್ತಾವನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಆಯವ್ಯಯದಲ್ಲಿ ಮಾಡಿದ್ದರು.

ಮಾನ್ಯ ಸಭಾಪತಿಯವರೇ, ನಾನು ಜೂನ್ ತಿಂಗಳಿನಲ್ಲಿ ಇದರ ಬಗ್ಗೆ ಯಾವ ರೀತಿಯ ಲ್ಯಾಪ್‌ಟಾಪ್ ಕೊಡಬೇಕು, ಯಾವ configuration ಇರಬೇಕೆಂದು ಕೇಳಿದ್ದೆ. ಏಕೆಂದರೆ, ಇದನ್ನು ಇಂಜಿನೀಯರಿಂಗ್ ವಿದ್ಯಾರ್ಥಿಗಳಿಗೆ, ಮೆಡಿಕಲ್ ವಿದ್ಯಾರ್ಥಿಗಳಿಗೆ ಹಾಗೂ ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ಕೊಡುತ್ತಿರುವ ಕಾರಣ ಈ ಸಂಬಂಧ Technical Experts Committee headed by the Principal Secretary, Higher Education Department, ಮಾಡಲಾಯಿತು. ಅಮೇಲೆ ಅಲ್ಲಿ E-Governance Department ಇದೆ. ಬೇರೆ ಬೇರೆ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಸೇರಿ ಅದರ configuration ಯಾವ ರೀತಿಯಲ್ಲಿ ಇರಬೇಕೆಂದು ಹೇಳಿ ಅವರುಗಳು, ತಜ್ಞರು ಆಯ್ಕೆ ಮಾಡಿದಂತಹದ್ದರಲ್ಲಿ ನಾವು ತೀರ್ಮಾನವನ್ನು

ಮಾಡಿದ್ದೇವೆ. ಮಾಡಿದ ಮೇಲೆ ಅದರ ಟೆಂಡರ್ ಕರೆಯಬೇಕು. ಟೆಂಡರ್ ಯಾವ ರೀತಿಯಲ್ಲಿ ಕರೆಯಬೇಕೆಂದು ಹೇಳ ಅದಕ್ಕೂ ಒಂದು ಕಮಿಟಿ ಮಾಡಲಾಯಿತು. It is headed by the Commissioner of Collegiate Education. ನೀವು ಯಾರ ಹೆಸರು ಪ್ರಸ್ತಾಪ ಮಾಡಿದಿರಲ್ಲಾ, ಅವರ ಅಧ್ಯಕ್ಷತೆಯಲ್ಲಿ ಮಾಡಲಾಯಿತು. ಅಲ್ಲಿ ಯಾರ್ಯಾರು ಸದಸ್ಯರು ಎಂದರೆ, Director, Technical Education Department ಮತ್ತು ಬೇರೆ ಬೇರೆ ಇಲಾಖೆಯ ಸದಸ್ಯರುಗಳು ಇದ್ದಾರೆ. ಅವರು ತಮ್ಮ ಶಿಫಾರಸ್ಸಿನಲ್ಲಿ ಏನು ಮಾಡಿದ್ದಾರೆಂದು ಅವರೇ ನೀಡಿರುವ ಇಲಾಖೆಯ ಶಿಫಾರಸ್ಸಿನ ಪತ್ರವನ್ನು ನೋಡಿ.

(ಈ ಹಂತದಲ್ಲಿ ಇಲಾಖೆಯ ಶಿಫಾರಸ್ಸಿನ ಪತ್ರದ ಪ್ರತಿಯನ್ನು ಮಾನ್ಯ ಸಚಿವರು ಸದನಕ್ಕೆ ತೋರಿಸಿದರು) ಅವರು ಏನು ಹೇಳುತ್ತಾರೆಂದರೆ, ನೀವು ತ್ವರಿತವಾಗಿ ಇದನ್ನು ಕೊಡಬೇಕೆಂದರೆ ವಿಭಾಗವಾರು ಟೆಂಡರ್ ಕರೆಯಿರಿ 1,50,000 ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಲು ಒಂದೇ ವಿಭಾಗದಲ್ಲಿ ಟೆಂಡರ್ ಕರೆದರೆ ಆಗಲಿಕ್ಕಿಲ್ಲ. ಯಾರು ಅದರಲ್ಲಿ ಕಡಿಮೆ ಬಿಡ್ ಮಾಡುತ್ತಾರೆ, 4 ವಿಭಾಗವಾರು ಟೆಂಡರ್ ಕರೆದರೂ ಸಹ ಅಲ್ಲಿ ಕಡಿಮೆ ಬಿಡ್ ಅನ್ನು insist ಮಾಡಬೇಕು. ಮತ್ತೆ, 4 ವಿಭಾಗದಲ್ಲಿಯೂ ಸಹ ಎಲ್ಲರೂ ಟೆಂಡರ್ ಹಾಕಬಹುದು ಎನ್ನುವಂತಹ ಶಿಫಾರಸ್ಸನ್ನು ಮಾಡಿದರು. ನೀವು ಯಾರ ಹೆಸರನ್ನು ಹೇಳಿದಿರಿ, ಅವರದ್ದೇ ಈ ಶಿಫಾರಸ್ಸು. ಬೇಕಾದರೆ ಈ ಪ್ರತಿಯನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಅವರದ್ದೇ ಸಹಿ ಇದೆ. ನಂತರ ಇದನ್ನು ಟೆಂಡರ್ ಕರೆಯುವ ವಿಚಾರ ಬಂತು. ಇವತ್ತಿನವರೆವಿಗೂ ಟೆಂಡರ್ ಕರೆದಿಲ್ಲ.

**ಸಭಾಪತಿಯವರು:-** ಮತ್ತೆ, ಇದರ ಸಮಸ್ಯೆ ಏನು?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಸಮಸ್ಯೆ ಏನೆಂದು ಹೇಳುತ್ತೇನೆ. ಇಲ್ಲಿ ಏನಾಗುತ್ತಿದೆ ಎಂದರೆ ನಮ್ಮ ಕಾರ್ಯದರ್ಶಿಯವರು ನನಗೆ ಕಡತವನ್ನು ಕಳಿಸಿದರು. ಒಂದೇ ಟೆಂಡರ್ ಕರೆದರೆ ಉತ್ತಮವಾಗುತ್ತದೆಯೇ ನೋಡಿ ಎಂದು ಕೇಳಿದರು. But, I upheld the Commissioner's suggestion. ಅಮೇಲೆ ಆಯುಕ್ತರು ಟೆಂಡರ್ ಕರೆಯಲಿಲ್ಲ. ನೀವು ಯಾರ ಹೆಸರನ್ನು ಹೇಳಿದಿರಿ, ಅವರೇ ಟೆಂಡರ್ ಕರೆಯಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರ ಹೆಸರನ್ನು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸದಸ್ಯರು ಅಜಯ್ ನಾಗಭೂಷಣ ಎಂದು ಹೇಳಿದರಲ್ಲಾ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರ ಹೆಸರನ್ನು ಹೇಳಲಿಕ್ಕೆ ನಿಮಗೇನು ತೊಂದರೆ? ಯಾರ ಹೆಸರನ್ನು ಹೇಳಿದರಲ್ಲಾ, ಯಾರ ಹೆಸರನ್ನು ಹೇಳಿದರಲ್ಲಾ ಎಂದೇ ಹೇಳುತ್ತಿದ್ದೀರಿ. ಅವರ ಹೆಸರನ್ನು ನೀವು ಹೇಳಿದರೆ ಇವರ ಬಾಯಿಯಲ್ಲಿ ಏನಾದರೂ ಆಗುತ್ತದೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಅವರ ಹೆಸರನ್ನು ಹೇಳಲಿಕ್ಕೆ ನನಗೇನು ಹೆದರಿಕೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರ ಹೆಸರನ್ನು ಹೇಳಿದರಲ್ಲಾ, ಅವರ ಹೆಸರನ್ನು ಹೇಳಿದರಲ್ಲಾ ಎನ್ನುವುದಕ್ಕೆ ಬದಲಾಗಿ ಅವರ ಹೆಸರನ್ನು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, as a Government, ಒಬ್ಬ ಮಂತ್ರಿಯಾಗಿ ಅನಾವಶ್ಯಕವಾಗಿ ನೀವು ಯಾರ ಹೆಸರನ್ನು ಹೇಳಿದರಲ್ಲಾ ಅವರೇ ಕಮಿಷನರ್ ಇದ್ದಂತಹ ಸಂದರ್ಭದಲ್ಲಿ . . .

**ಶ್ರೀ ವಿ.ಎಸ್.ಉಗ್ರಪ್ಪ:-** ಅವರ ಹೆಸರನ್ನು ಹೇಳುವ ಬದಲು ಅವರ ಹುದ್ದೆಯನ್ನು ಹೇಳಿದರೆ ಸಾಕಾಗುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ನಾನು ಅದನ್ನೇ ಹೇಳಿದೆ. ಮಾನ್ಯ ಸಭಾಪತಿಯವರೇ, ನಾನು ಒಬ್ಬ ಮಂತ್ರಿಯಾಗಿ ಸರಿಯಾಗಿಯೇ ಹೇಳಿದ್ದೇನೆ. ಅವರು ಹೇಳಿದ ಹೆಸರಿನ ವ್ಯಕ್ತಿ ಅಜಯ್ ನಾಗಭೂಷಣ್ ರವರು ರೆಕಮಂಡ್ ಮಾಡಿದ್ದಾಗಿದೆ.

ಮುಂದು. .

(1051)17.11.2017/11.20/ಎಸ್‌ವಿ-ಎಂಡಿ

**ಶ್ರೀ ಬಸವರಾಜ ರಾಯರೆಡ್ಡಿ (ಮುಂದು):-**

ಅದನ್ನು ನಾನು ಎತ್ತಿ ಹಿಡಿದಿದ್ದೇನೆ. ಆಯುಕ್ತರು ತಪ್ಪೇನೂ ಮಾಡಿರುವುದಿಲ್ಲ. ಇದು ಟೆಂಡರ್. ಇಂದಿನವರೆವಿಗೂ ನಮ್ಮ ಇಲಾಖೆಯ ಆಯುಕ್ತರು ಟೆಂಡರ್ ಅನ್ನು ಕರೆದಿರುವುದಿಲ್ಲ. ಈಗಾಗಲೇ ಆರು ತಿಂಗಳ ಕಾಲ ವಿಳಂಬವಾಗಿದೆ. ಅದಕ್ಕಾಗಿ ಆದಷ್ಟು ಶೀಘ್ರವಾಗಿ ಕಾನೂನಿನ ಪ್ರಕಾರ ಟೆಂಡರ್ ಕರೆದು ವಿತರಣೆ ಮಾಡಿ ಎಂದು ಹೇಳಿದ್ದೇನೆ. ಇದನ್ನು ಇಲಾಖೆಗೆ ಹೊಸದಾಗಿ ಬಂದಿರುವ ಆಯುಕ್ತರು ಪರಿಶೀಲನೆ ಮಾಡುತ್ತಿದ್ದಾರೆ. ಏಕೆಂದರೆ ಅವರು ಅಧಿಕಾರ ತೆಗೆದುಕೊಂಡು ಈಗ ಒಂದು ವಾರವಾಗಿದೆಯಷ್ಟೆ. ಅವರು ಅದನ್ನು ಓದಿ ನಿಯಮಾವಳಿಗಳ ಪ್ರಕಾರ ಟೆಂಡರ್ ನಾಲ್ಕು ಡಿವಿಷನ್‌ವಾರು ಕರೆದು lowest bidder ಯಾರಿರುತ್ತಾರೆಯೋ ಅವರಿಗೆ ಟೆಂಡರ್ ಅನ್ನು ನೀಡಲಾಗುತ್ತದೆ. ನಮ್ಮ ಕಡತವನ್ನು ತೆಗೆಸಿ ನೋಡಿ. ನಾವು ಯಾರಿಗಾದರೂ ಸಣ್ಣ ಸಣ್ಣ ವ್ಯಕ್ತಿಗಳಿಗೆ ಕೊಡಿ ಎಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿರುವುದಿಲ್ಲ. Pentium-3 Equal Processor ಇದೆಯೋ ಆ ಕಂಪನಿಗಳ main dealers ಇದರಲ್ಲಿ ಭಾಗವಹಿಸಬೇಕು. ಇದ್ಯಾವುದನ್ನೂ ನೋಡದೆ ಯಾರಿಗೋ ಕೊಟ್ಟಿದ್ದಾರೆ, 10,000/- ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ ಎಂದು ಆರೋಪ ಮಾಡುತ್ತಿದ್ದಾರೆ. You show me in the file. 10,000/- ರೂಪಾಯಿಗಳು ಜಾಸ್ತಿ ಕೊಡುವುದಕ್ಕೆ ಶಿಫಾರಸ್ಸನ್ನು ಮಂತ್ರಿ ಏನಾದರೂ ಮಾಡಿದ್ದರೆ ಅಥವಾ ನಮ್ಮ ಕಾರ್ಯದರ್ಶಿಗಳು ಮಾಡಿದ್ದರೆ, I will quit in one second.

**ಸಭಾಪತಿಯವರು:-** ಮಾನ್ಯ ರಾಯರಡ್ಡಿಯವರೇ, ಈಗ ಅದರ ಪ್ರಶ್ನೆ ಬರುವುದಿಲ್ಲ. ಅದರ ಚರ್ಚೆ ಬೇಡ. ನೀವು ಟೆಂಡರ್ ಕರೆದ ಮೇಲೆ ಮಾತ್ರ ಚರ್ಚೆ. ದರ ಹೆಚ್ಚೋ ಅಥವಾ ಕಡಿಮೆಯೋ ಟೆಂಡರ್ ಅನ್ನೇ ಕರೆದಿರುವುದಿಲ್ಲವಲ್ಲವೆ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅದು ಹಾಗಲ್ಲ. ಕಳೆದ ವರ್ಷಕ್ಕಿಂತ ರೂ.10,000/- ಹೆಚ್ಚಿಗೆ ಕೊಡಲಾಗುತ್ತಿದೆ ಎಂದು ಹೇಳುವುದಾದರೆ, we have not quoted the rate. ನಿಮಗೆ ಬೇಕಾದರೆ ಸಂಬಂಧಪಟ್ಟ ಕಡತವನ್ನು ನಿಮ್ಮ ಕೊಠಡಿಗೇ ಬಂದು ತೋರಿಸುತ್ತೇನೆ. ಅನವಶ್ಯಕವಾಗಿ ಪತ್ರಿಕೆಯಲ್ಲಿ ಯಾರೋ ಏನೋ ಬರೆದಿದ್ದಾರೆಂದು ಅರ್ಥಂಬರ್ಥ ತಿಳಿದುಕೊಂಡು ದಯವಿಟ್ಟು ಮಾತನಾಡಬಾರದು. 300 ಕೋಟಿ ಲೂಟಿ ಎಂದು ಬರೆದಿರುತ್ತಾರೆ. ನಮ್ಮ budgetary provision ಇರುವುದೇ 199 ಕೋಟಿಗಳು. Not even one rupee is released to our department. ಅಂದರೆ ನಮ್ಮ ಇಲಾಖೆಗೆ ಹಣಕಾಸು ಇಲಾಖೆಯಿಂದ ಹಣವೇ ಬಿಡುಗಡೆಯಾಗಿರುವುದಿಲ್ಲ. ಟೆಂಡರ್ ಕರೆಯಲಾಗದೆ ಹಣ ಹೇಗೆ ಕೊಡುತ್ತಾರೆ. ಅದು ಬಿಟ್ಟು ಈಗಲೇ 300 ಕೋಟಿ ರೂಪಾಯಿ ಲೂಟಿ ಹೊಡೆದಿದ್ದಾರೆಂದರೆ ಇದು ಯಾರದೋ ಮುಖಕ್ಕೆ ಮಸಿ ಬಳಿದಂತಲ್ಲವೆ? ಗುಣಮಟ್ಟದ laptopಗಳನ್ನೇ ಕೊಡುತ್ತೇವೆ. ನಮ್ಮ ಸರ್ಕಾರ ಯಾವುದೇ ಮುಲಾಜಿಲ್ಲದೆ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ನೋಡುತ್ತೇವೆ. ದಯಮಾಡಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಕಲ್ಲು ಹಾಕಬೇಡಿ, ಇದು ನನ್ನ ಕಳಕಳಿಯ ಮನವಿ.

**ಸಭಾಪತಿಯವರು:-** ಟೆಂಡರ್ ಕರೆದಿರುವುದಿಲ್ಲ ಎಂದರೆ ಮುಂದೆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದು ಪ್ರಶ್ನೋತ್ತರ ಅವಧಿ. ಏನು ನಿಮ್ಮ ಪ್ರಶ್ನೆ ಮಾನ್ಯ ಮಲ್ಕಾಪೂರೆಯವರೆ?

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, With due respect ಹೇಳುತ್ತಿದ್ದೇನೆ. ಈ ಆರೋಪವನ್ನು ಯಾರೋ ಬೀದಿಯಲ್ಲಿ ಹೋಗುವ ದಾಸಯ್ಯ ಮಾಡಿದ್ದಲ್ಲ ಅಥವಾ ನಾನು ರಘುನಾಥರಾವ್ ಮಲ್ಕಾಪೂರೆ ಮಾಡುತ್ತಿರುವ ಆರೋಪವಲ್ಲ. ಸನ್ಮಾನ್ಯ ಸಚಿವರು ಇಲಾಖೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಈ ಕಾರ್ಯಕ್ರಮವನ್ನು ಜಾರಿ ಮಾಡುವುದಕ್ಕೆ ಯಾರನ್ನು ಮೇಲಧಿಕಾರಿಯನ್ನಾಗಿ ಮಾಡಿದರೋ ಅದೇ ಅಧಿಕಾರಿ ಹೇಳಿದ್ದಾರೆ...

**ಶ್ರೀ ಬಸವರಾಜ ರಾಯರಡ್ಡಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಬಳಿ ಇರುವುದು ಅವರ ಪತ್ರವೇ ಅಥವಾ ಪತ್ರಿಕಾ ತುಣುಕೇ?

**ಶ್ರೀ ರಘುನಾಥರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುವಾಗ ನಾವು ಸುಮ್ಮನೆ ಕೇಳಿದ್ದೇವೆ. ಈಗ ಅವರೂ ಸಹ ನಮ್ಮ ಮಾತನ್ನು ತಾಳ್ಮೆಯಿಂದ ಆಲಿಸಬೇಕು. ಪತ್ರವನ್ನು ಕೊಡುವುದಕ್ಕೆ ನಾನೇನು ಮಂತ್ರಿಯಲ್ಲ. ನನ್ನ ಬಳಿಯಿರುವ ಮಾಹಿತಿಯ ಪ್ರಕಾರ ಹೇಳುತ್ತಿದ್ದೇನೆ.

ಶ್ರೀ ಅಜಯ ನಾಗಭೂಷಣ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು ಈ ರೀತಿ ಹೇಳಿರುತ್ತಾರೆ:

“ಈ ವರ್ಷ 2016-17ನೇ ಸಾಲಿನ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅಲ್ಲದೆ ಎಲ್ಲಾ ಜಾತಿಯ ವಿದ್ಯಾರ್ಥಿಗಳಿಗೆ ಕೊಡುತ್ತೇವೆ. ಇದಕ್ಕಾಗಿ ಒಂದೂವರೆ ಲಕ್ಷ laptop ಗಳನ್ನು ಖರೀದಿಸಲು ಇಲಾಖೆಯು ಮುಂದಾಗಿದೆ. ಗುಣಮಟ್ಟದ laptop ಗಳನ್ನು ಖರೀದಿಸಲು ಹಿಂದಿನ ವರ್ಷಕ್ಕಿಂತಲೂ ರೂ.10,000/- ಹೆಚ್ಚಿನ ದರವನ್ನು ನಿಗದಿ ಪಡಿಸಲಾಗುತ್ತಿದೆ. ಅಲ್ಲದೆ ಒಂದೂವರೆ ಲಕ್ಷ laptop ಗಳು KTPP (The Karnataka Transparency in Public Procurement *Act)* ಅನ್ವಯ ಒಂದೇ ಟೆಂಡರ್ ಕರೆಯುವ ಬದಲಾಗಿ ನಾಲ್ಕು ತುಂಡು ಗುತ್ತಿಗೆ ಮಾಡುವುದಕ್ಕಾಗಿ ಉಪ ಕಾರ್ಯದರ್ಶಿಯವರು ಕಡತವನ್ನು ಮಂಡಿಸಿದ್ದು ಖಾಸಗಿ ವ್ಯಕ್ತಿಗೆ ಸೇರಿದ ಸಂಸ್ಥೆಯಿಂದ ಖರೀದಿಸುವ ಪ್ರಸ್ತಾಪ ಇದೆ ಎಂದು ವಿವರಿಸಲಾಗಿದೆ. ಈ ರೀತಿ ತುಂಡು ಗುತ್ತಿಗೆಗಳನ್ನು ಮಾಡುವುದರಿಂದ laptop company ಗಳು ದೊಡ್ಡ ಸಂಖ್ಯೆಯಲ್ಲಿ ಖರೀದಿಸುವಾಗ ನೀಡಿರುವ ಶೇ.50ರಷ್ಟು ರಿಯಾಯಿತಿಯೂ ಸಹ ಸರ್ಕಾರಕ್ಕೆ ತಪ್ಪಿ ಹೋಗಲಿದೆ. ಸರ್ಕಾರಕ್ಕೆ ಆಗಬಹುದಾದ ಅನುಕೂಲಕ್ಕಿಂತ ಹೆಚ್ಚು ವೆಚ್ಚವಾಗಬಹುದಾದ ಪ್ರಕ್ರಿಯೆ ನಡೆಯುವಂತೆ ಕೆಲವು ಶಕ್ತಿಗಳು ಒತ್ತಡವನ್ನು ಹೇರುತ್ತಿವೆ. ಇದನ್ನು ಒಪ್ಪದಿರುವುದಕ್ಕೆ ಮಾನಸಿಕ ಕಿರುಕುಳ ನೀಡಿ ವ್ಯರ್ಥ ಆರೋಪ ಮಾಡಿದ್ದಾರೆ.”

2016-17ನೇ ಸಾಲಿನಲ್ಲಿ ಒಳ್ಳೆಯ ಗುಣಮಟ್ಟದ laptop ಗಳನ್ನು ಸುಮಾರು ರೂ.14,000/-ಗಳಿಗೆ ಖರೀದಿಸಿ ಮಾದರಿಯಾಗಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಸರ್ಕಾರ ಮಾದರಿ ಕೆಲಸ ಮಾಡಿದೆ ಎಂದು ನಾನು ಪ್ರಶಂಸೆ ಮಾಡುತ್ತೇನೆ. ಕಳೆದ ವರ್ಷ ಖರೀದಿ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಂತಹ laptop ಗಳು ಮತ್ತು ಈ ವರ್ಷ ಇಲಾಖೆಯಲ್ಲಿ ನಡೆದಿರುವ ಪ್ರಕ್ರಿಯೆ ತುಂಡುಗುತ್ತಿಗೆ ಆಧಾರದ ಮೇರೆಗೆ ನಾಲ್ಕು ಭಾಗಗಳಾಗಿ ಖರೀದಿ ಮಾಡಬೇಕಾಗಿರುವುದರಿಂದ ಸದನ ಸಮಿತಿಗೆ ಒಪ್ಪಿಸಿ ಆಳವಾದ ಅಧ್ಯಯನವನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಟೆಂಡರ್ ಅನ್ನೇ ಕರೆದಿಲ್ಲವೆಂದು ಹೇಳುತ್ತಿದ್ದಾರೆ. ಅದರ ಮೇಲೆ ನಾವು ಏನು ಚರ್ಚೆಯನ್ನು ಮಾಡುವುದು?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈಗಾಗಲೇ 6 ತಿಂಗಳುಗಳು ಕಳೆದು ಹೋಯಿತು. ಮಕ್ಕಳಿಗೆ ಪರೀಕ್ಷೆ ಬರುತ್ತಿದೆ. ಇಂತಹ ಸಂದರ್ಭದಲ್ಲಿ ನಿಮ್ಮ ಆಯುಕ್ತರು ಏನು ಹೇಳಿದರು, ನೀವೇನು ಮಾಡಿದಿರಿ, ಎಷ್ಟು ದುಡ್ಡು ತಿಂದಿದ್ದೀರಿ ಎಂದು ನಾನಂತೂ ಆಪಾದನೆ ಮಾಡಲು ಬರುವುದಿಲ್ಲ. ನಾನು ಹೇಳುವುದೇನೆಂದರೆ ಮಕ್ಕಳಿಗೆ laptop ಸಿಗುವುದಿಲ್ಲ. ಸಚಿವರು ಸಂಬಂಧಪಟ್ಟ ಕಡತವನ್ನು ತಮ್ಮ ಕಛೇರಿಯಲ್ಲಿ ತೋರಿಸುತ್ತೇನೆ ಎಂದು ಹೇಳುತ್ತಿದ್ದಾರೆ. ನೀವು ಇಷ್ಟೆಲ್ಲಾ ಹೇಳಿದ ಮೇಲೆ ನೇರ ಆರೋಪ ಮಾಡುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಸಚಿವರ ಇಲಾಖೆಯ ಆಯುಕ್ತರೇ ಹೇಳಿಕೆಯನ್ನು ಕೊಟ್ಟಿರುವಂತಹ ಸಂದರ್ಭದಲ್ಲಿ ಅನುಮಾನ ಮೂಡುತ್ತದೆಯಲ್ಲವೆ? ಅದಕ್ಕೆ ದಯಮಾಡಿ ಒಂದು ಸದನ ಸಮಿತಿಯನ್ನು ರಚಿಸಿ. ಬೇರೆ ಯಾರಾದರೂ ಹೇಳಿದ್ದರೆ ನಾವು ಖಂಡಿತಾ ಒತ್ತಾಯ ಮಾಡುತ್ತಿರಲಿಲ್ಲ. ಸಚಿವರ ಇಲಾಖೆಯ ಅಧಿಕಾರಿಯೇ ಹೇಳಿರಬೇಕಾದರೆ ಏನು ಮಾಡುತ್ತೀರಿ? ಒಂದು ತನಿಖೆಯನ್ನು ಮಾಡಲಿ. ಅವರು ಹೇಳಿರುವುದು ಸುಳ್ಳಾದರೆ ಅವರ ಮೇಲೆ ಕ್ರಮ ಕೈಗೊಳ್ಳಲಿ. ಸದನ ಸಮಿತಿಯೊಂದನ್ನು ಮಾಡಿದರೆ ಅವರು ಹೇಳಿರುವುದು ತಪ್ಪೋ ಸರಿಯೋ ಎಂಬುದು ತಿಳಿಯುತ್ತದೆ. ತಪ್ಪಾಗಿದ್ದರೆ ಅವರ ಬಗ್ಗೆ ಕ್ರಮ ಕೈಗೊಳ್ಳಿ. ಅವರು ಹೇಳಿರುವುದು ಸತ್ಯವಾದರೆ ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ಒಂದು ಸದನ ಸಮಿತಿಯನ್ನು ಮಾಡಿ. ನಾವು ಬೇರೆ ಇನ್ನೇನೂ ಕೇಳುತ್ತಿಲ್ಲ. ನಾನು ನೇರವಾಗಿ ಆರೋಪವನ್ನು ಮಾಡುತ್ತಿಲ್ಲವೆಂದು ಮತ್ತೊಮ್ಮೆ ಹೇಳುತ್ತಿದ್ದೇನೆ. ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದು ಎನ್ನುವ ದೃಷ್ಟಿಯಿಂದ 15 ದಿನಗಳಲ್ಲಿ ಇದಕ್ಕೊಂದು ರೂಪವನ್ನು ತನ್ನಿ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಮಂತ್ರಿಗಳು ಹೇಳಿದ ಹಾಗೆ ಇನ್ನೂ ಟೆಂಡರ್ ಆಗಿರುವುದಿಲ್ಲ. ಆದ್ದರಿಂದ ಸದನ ಸಮಿತಿ ರಚನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಹಾಗೇನಾದರೂ ಮಾನ್ಯ ಸದಸ್ಯರು ಸಾಕ್ಷ್ಯಾಧಾರಗಳನ್ನು ನೀಡಿದರೆ ಆಗಲೇ ಹೇಳಿದಂತೆ ಮಾನ್ಯ ಸಚಿವರು ಪದತ್ಯಾಗ ಮಾಡಲಿಕ್ಕೆ ಸಿದ್ಧರಿದ್ದಾರೆ.

**ಶ್ರೀ ಐವನ್ ಡಿ'ಸೋಜ (ಸರ್ಕಾರಿ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ತನಿಖೆಯನ್ನು ನಡೆಸಲು ಒಪ್ಪಿರುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ರಚಿಸುವ ಅವಶ್ಯಕತೆ ಇರುವುದಿಲ್ಲ. ಖಂಡಿತವಾಗಿಯೂ ನಾವು ಒಪ್ಪುವುದಿಲ್ಲ. ಅದೇ ಆಯುಕ್ತರೇ ನಾಲ್ಕು phase wise ಮಾಡಬೇಕೆಂದು ಬರೆದುಕೊಟ್ಟಿದ್ದಾರೆ. ಟೆಂಡರ್ ಆಗದೇ ಇರುವುದರಿಂದ ಇದಕ್ಕೆ ಸದನ ಸಮಿತಿ ಅವಶ್ಯಕವಿರುವುದಿಲ್ಲ ಎಂದು ಸರ್ಕಾರದ ಪರವಾಗಿ ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಸಚಿವರು)**:- ಮಾನ್ಯ ಸಭಾಪತಿಯವರೇ, ಟೆಂಡರ್ ಆಗಿರುವುದಿಲ್ಲ. ಖರೀದಿ ಕೂಡ ಆಗಿರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಇದು ನನ್ನ ವೈಯಕ್ತಿಕ ಕೆಲಸವೂ ಅಲ್ಲ. ಮಂತ್ರಿಗಳದ್ದು ಖಾಸಗಿ ಕೆಲಸವೂ ಅಲ್ಲ. ಇದು ನಮ್ಮಿಬ್ಬರ partnership ಅಲ್ಲ. ಸರ್ಕಾರದ ಹಣ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡುತ್ತಿರುವ ಮಾಹಿತಿ ತಪ್ಪು. ಈ ವರ್ಷಕ್ಕೆ ಟೆಂಡರ್ ಆಗಿಲ್ಲ. ಕಳೆದ ವರ್ಷದಲ್ಲಿ ಸುಮಾರು ರೂ.40 ಕೋಟಿಗಳಿಗೆ ಟೆಂಡರ್ ಆಗಿ ರೂ.35 ಕೋಟಿ ಪೇಮೆಂಟ್ ಕೂಡ ಆಗಿದೆ. ಇದರ ಬಗ್ಗೆ ನನಗೆ ಲಿಖಿತವಾದ ಉತ್ತರ ಕೂಡ ಕೊಟ್ಟಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ರಮೇಶ್ ಅವರೇ, ಅದು ಹೋದ ವರ್ಷ ನೀಡಿರುವಂತಹ ಉತ್ತರ ಆಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಚಿವರೇ, ಅವರಿಗೆ ಮಾತನಾಡಲು ಬಿಡಿ. ಅವರ ಬಾಯನ್ನು ಮುಚ್ಚಿಸುವುದೇಕೆ? ನಡೆದಿರುವಂತಹ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಬಾಯಿ ಮುಚ್ಚಿಸಿಬಿಡುವುದೇ? ಅವರಿಗೆ ಮಾತನಾಡಲು ಬಿಡಿ.

**ಶ್ರೀ ಎಂ.ಆರ್. ಸೀತಾರಾಂ**:- ಮಾನ್ಯ ಈಶ್ವರಪ್ಪನವರೇ, ಏಕೆ ಕೂಗಾಡುತ್ತಿದ್ದೀರಿ? ನಿಮಗಿಂತಲೂ ಜೋರಾಗಿ ಮಾತನಾಡಲು ನನಗೂ ಬರುತ್ತದೆ. ಮಾನ್ಯ ರಮೇಶ್ ಬಾಬು ಅವರು ಹೇಳುತ್ತಿರುವುದು ಹೋದ ವರ್ಷದ ಮಾಹಿತಿಯಾಗಿದೆ. ಮಾನ್ಯ ಮಲ್ಕಾಪೂರೆಯವರು ಕೇಳಿರುವುದು ಈ ವರ್ಷದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾನಾಯಕರೇ, ಅವರು ಮಾತನಾಡಲು ಬಿಡಿ. ಅವರು ಹೇಳುವುದನ್ನು ನೀವೂ ಕೇಳಿಸಿಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬು ಅವರ ಧ್ವನಿ ಚೆನ್ನಾಗಿದೆ. ಆದರೆ ಇವತ್ತು ನೀವೆಲ್ಲಾ ಎಷ್ಟು ಗಲಾಟೆ ಮಾಡಿದಿರೆಂದರೆ ಅವರ ಧ್ವನಿಯೇ ನನಗೆ ಕೇಳಿಸಲಿಲ್ಲ. ಅದೇನು ಹೇಳುತ್ತೀರೋ ಬೇಗ ಹೇಳಿ ಮುಗಿಸಿ.

(...ಮುಂದು)

(1052)17.11.2017/11.30/ಕೆ.ಜಿ-ಎಂಡಿ

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜ್ಯದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ laptop ಗಳನ್ನು ವಿತರಿಸಿರುವುದು ನಿಜವೇ ಎಂಬುದಾಗಿ ಪ್ರಶ್ನೆ ಕೇಳಿದ್ದಾರೆ. ಆದರೆ, ಅವರು ಈ ವರ್ಷದ ಮಾಹಿತಿ ಬಗ್ಗೆ ಕೇಳುತ್ತಿದ್ದಾರೆಯೇ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿಲ್ಲ. ಕಳೆದ ವರ್ಷ laptop ಗಳನ್ನು ಸರಬರಾಜು ಮಾಡಲು ಟೆಂಡರ್ ಮಾಡಿರುವುದು ನಿಜ, laptop ಗಳನ್ನು ವಿತರಿಸಿರುವುದು ನಿಜ. ಸುಮಾರು 30 ರಿಂದ 32 ಕೋಟಿ ರೂಪಾಯಿಗಳ ಪೇಮೆಂಟ್ ಮಾಡಿರುವುದು ಸಹ ನಿಜ. ಇನ್ನು 12 ಕೋಟಿ ರೂಪಾಯಿಗಳು ಬಾಕಿ ಇದೆ. ನಾನು ಸುಮಾರು ಮೂರು ತಿಂಗಳ ಮುಂಚೆ ಲಿಖಿತವಾಗಿ ಇಲಾಖೆಗೆ ಕೊಟ್ಟಿರುವ ಪತ್ರಕ್ಕೆ ಅವರು ಲಿಖಿತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಪತ್ರವನ್ನು ಕೊಟ್ಟ ಮೇಲೆ, ಆ payment ಅನ್ನು ನಿಲ್ಲಿಸಿದ್ದಾರೆ. ಏಕೆಂದರೆ, specification ಪ್ರಕಾರ, laptop ಗಳನ್ನು ಸರಬರಾಜು ಮಾಡಿಲ್ಲ. ಬೆಲೆಗಳು ಜಾಸ್ತಿ ಇದೆ, ಈ ಕಾರಣಕ್ಕೆ ಅದನ್ನು ತಡೆಹಿಡಿದಿದ್ದಾರೆ. ಇವತ್ತು ಸಹ ಮಾನ್ಯ ಮಲ್ಕಾಪೂರೆಯವರಿಗೆ ಕೊಟ್ಟಿರುವಂತಹ ಉತ್ತರದಲ್ಲಿ ಒಂದು annexure ಅನ್ನು enclose ಮಾಡಿದ್ದಾರೆ. ಅದರಲ್ಲಿ ಯಾವ ದಿನಾಂಕ, ಯಾವತ್ತು ಎಂಬುದು ಇಲ್ಲ. ಇದು ಜೆರಾಕ್ಸ್ ಪ್ರತಿ ಆಗಿದೆ. ಅದನ್ನು ಯಾರು ಬೇಕಾದರೂ ಕೊಡಬಹುದು. ಸರ್ಕಾರ ಒಂದು annexure ಅನ್ನು ನೀಡಿದಾಗ, ಅದಕ್ಕೆ ಒಂದು ದಿನಾಂಕ ಬೇಕು ಅಲ್ಲವೇ? ಯಾವುದೋ ಒಂದು 10 ವರ್ಷದ್ದು ಅಥವಾ 6 ತಿಂಗಳ ಹಿಂದಿನದ್ದನ್ನು ತಂದು ಕೊಟ್ಟುಬಿಟ್ಟರೆ ಹೇಗೆ ಇದು? ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಸರಿ ಇಲ್ಲ. ಟೆಂಡರ್‌ನಲ್ಲಿ ಎರಡು ತರಹ ಇದೆ. ಕಳೆದ ವರ್ಷ ಟೆಂಡರ್ ಆಗಿರುವುದು ನಿಜ. ಟೆಂಡರ್‌ನಲ್ಲಿ ಅವ್ಯವಹಾರ ಆಗಿರುವುದು ನಿಜ. laptop ಗಳನ್ನು ಸರಬರಾಜು ಮಾಡದೆಯೇ laptop ಗಳಿಗೆ ಬಿಲ್ಲು ಪಾವತಿ ಮಾಡಿದ್ದಾರೆ. ಇನ್ನೂ 12 ಕೋಟಿ ರೂಪಾಯಿ ಬಾಕಿ ಇದೆ. ಈ ವರ್ಷದ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಜೆಟ್ ಪ್ರಕಾರ 190 ಕೋಟಿ ರೂಪಾಯಿ laptop ಗಳನ್ನು ಕೊಡುವುದಕ್ಕೆ ಏನಿದೆ. ಅದರ ಬಗ್ಗೆ ಇನ್ನು ಟೆಂಡರ್ ಆಗಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕಳೆದ ವರ್ಷದ ಟೆಂಡರ್ ಆಗಿರುವುದು ನಿಜ. ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ, ಸದನ ಸಮಿತಿಯನ್ನು ರಚನೆ ಮಾಡಬೇಕು. ಈಗ ಸಚಿವರೆ ಒಪ್ಪಿಕೊಳ್ಳುತ್ತಿದ್ದಾರೆ. 'Technical experts ನೀಡಿರುವ ಅಭಿಪ್ರಾಯವನ್ನು ನೀವು ಶಾಸಕರು ಬನ್ನಿ ಎಂದು ಮಾನ್ಯ ಸಚಿವರೇ ಹೇಳುತ್ತಿದ್ದಾರೆ. ಅದಕ್ಕೆ ಸಮಿತಿಯನ್ನು ಏಕೆ ಬೇಡ ಎಂದು ಹೇಳುತ್ತೀರಿ? ನೀವು ಸದನ ಸಮಿತಿಯನ್ನು ಮಾಡಿ. ನಾವು ಹೋಗುತ್ತೇವೆ. ಮಾನ್ಯ ಸಚಿವರೇ, ಈಗ ಶಾಸಕರು ಬನ್ನಿ specification ಏನಿದೆ ಎಂದು ಪರಿಶೀಲನೆ ಮಾಡಿ ಎಂದು ಹೇಳಿದ್ದಾರೆ. ಆದ್ದರಿಂದ, ದಯಮಾಡಿ ಒಂದು ಸದನ ಸಮಿತಿಯನ್ನು ರಚನೆ ಮಾಡಿ. ಇದರಲ್ಲಿ ಏನಿದೆ ಎಂದು ಹೊರಗಡೆ ಬರಬೇಕು; ಇದು transparent ಆಗಿರಬೇಕು.

**ಶ್ರೀ ಕೆ.ಬಿ.ಶಾಣಪ್ಪ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಒಂದು ಸದನ ಸಮಿತಿಯನ್ನು ಮಾಡುವುದಕ್ಕೆ ಅವರಿಗೆ ಏನು ತೊಂದರೆ ಇದೆ? ದಯವಿಟ್ಟು ಒಂದು ಸದನ ಸಮಿತಿಯನ್ನು ರಚನೆ ಮಾಡಿ. Let them submit a report within a month or two.

(ಗೊಂದಲ)

**ಸಭಾಪತಿಯವರು**:- ಮಾನ್ಯ ಸದಸ್ಯರೇ, ನಾನು ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಅವರು ಏನು ಹೇಳುತ್ತಾರೆ ಅದನ್ನು ಕೇಳುತ್ತೇನೆ.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಅವರು ಸರಿ ಇದ್ದರೇ, ಸದನ ಸಮಿತಿಯನ್ನು ಮಾಡುವುದಕ್ಕೆ ತೊಂದರೆ ಏನಿದೆ?

(ಗೊಂದಲ)

**ಶ್ರೀ ರಘುನಾಥ ರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ಶಾಸಕರು ಬಂದು ಪರೀಕ್ಷೆ ಮಾಡಿ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅದಕ್ಕೆ ಸದನ ಸಮಿತಿಯನ್ನು ರಚನೆ ಮಾಡಿದರೆ ಪರೀಕ್ಷೆ ಆಗುತ್ತದೆ. ಸದನ ಸಮತಿಯನ್ನು ರಚನೆ ಮಾಡಲು ಅವರಿಗೆ ತೊಂದರೆ ಏನಿದೆ? ಮಾನ್ಯ ಸಚಿವರು ಒಳ್ಳೆಯವರು. ಇದರಿಂದ ಅವರ ವಿರುದ್ಧ ಇರುವಂತಹ ಆರೋಪ ಸಹ ದೂರವಾಗಿ ಅವರು ಆರೋಪ ಮುಕ್ತರಾಗುತ್ತಾರೆ. ಅದಕ್ಕೆ ತಾವು ಹೇಳಿ. ತಾವು ಹೇಳಲಿಲ್ಲವೆಂದರೆ, ನಾವು ಸದನ ಬಾವಿಗೆ ಇಳಿದು ಧರಣಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:**- ಮಾನ್ಯ ಸದಸ್ಯರೇ, ನಾನು ಮಾಡುವುದಕ್ಕೆ ಬರುವುದಿಲ್ಲ. ಅವರು ಏನು ಹೇಳುತ್ತಾರೆ ಅದನ್ನು ಕೇಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಸ್ವಲ್ಪ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರು ಏನು ಹೇಳುತ್ತಾರೆ. ಅದನ್ನು ಕೇಳೋಣ.

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):**- ಮಾನ್ಯ ಸದಸ್ಯರೇ, ಮಾನ್ಯ ಸಚಿವರು, ಸದನ ಸಮಿತಿಗೆ ಸ್ವಾಗತ ಮಾಡುತ್ತೇವೆಂದು ಹೇಳುತ್ತಿದ್ದಾರೆ.

**ಸಭಾಪತಿಯವರು:**- ಮಾನ್ಯ ಸಚಿವರು ಹೇಳಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):**- ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

(ಗೊಂದಲ)

**ಸಭಾಪತಿಯವರು:**- ಮಾನ್ಯ ಹೊರಟ್ಟಿಯವರೇ, ಅವರು ಒಪ್ಪಿದ ಮೇಲೆ ಮುಗಿದು ಹೋಯಿತು. ಅದು ಸದನ ಸಮಿತಿಯಲ್ಲಿ ಚರ್ಚೆ ಆಗಲಿ.

**ಶ್ರೀ ಬಸವರಾಜಶಿವಲಿಂಗಪ್ಪ ಹೊರಟ್ಟಿ:**- ಮಾನ್ಯ ಸಭಾಪತಿಯವರೇ, ಸದನ ಸಮಿತಿ ಮಾಡುವುದಕ್ಕಿಂತ ಪೂರ್ವದಲ್ಲಿ ಅವರು ಅದನ್ನು ನೋಡಬೇಕು ಅಲ್ಲವೇ?

**ಸಭಾಪತಿಯವರು:**- ಮಾನ್ಯ ಹೊರಟ್ಟಿಯವರೇ, ಈಗ ಅವರು ಒಪ್ಪಿದ್ದಾರೆ. ಸರ್ಕಾರ ಒಪ್ಪಿದ ಮೇಲೆ, ಇದರಲ್ಲಿ ನನ್ನದು ಏನಿದೆ?

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):**- ಮಾನ್ಯ ಸಭಾಪತಿಯವರೇ, ನನಗೆ ಏನು ತೊಂದರೆ ಇಲ್ಲ. ಮಾಡಲಿ.

(ಗೊಂದಲ)

**ಸಭಾಪತಿಯವರು:**- ಮಾನ್ಯ ಸಚಿವರೇ, ಸದನ ಸಮಿತಿ ಬೇಡ ಎನ್ನುವುದಾದರೆ, ತಾವು ಮಾತನಾಡಿ. ಸದನ ಸಮಿತಿ ಬೇಕು ಎನ್ನುವುದಾದರೆ, ಮುಗಿದು ಹೋಯಿತು. Demand was there from the opposition. ಸರ್ಕಾರ ಒಪ್ಪಿದ ಮೇಲೆ ಮುಗಿದು ಹೋಯಿತು.

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):**- ಮಾನ್ಯ ಸಭಾಪತಿಯವರೇ, ಮಾನ್ಯ ಮಲ್ಕಾಪೂರೆಯವರು ಎತ್ತಿರುವಂತಹ ಪ್ರಶ್ನೆಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರಾದ ರಮೇಶ್‌ಬಾಬುರವರು ವ್ಯಕ್ತ ಮಾಡಿರುವಂತಹ ಹಲವಾರು ವಿಚಾರಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಶಿಕ್ಷಣ ಸಚಿವರು ತಾವು ಸದಸ ಸಮಿತಿ ಮಾಡುತ್ತೇವೆ ಎಂದರೆ, ನನ್ನದು ಏನು ತಕರಾರು ಇಲ್ಲವೆಂದು ಹೇಳಿದ್ದಾರೆ. ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನೂ ಈ ವರ್ಷದ ಟೆಂಡರ್ ಕರೆದಿಲ್ಲ, ಚರ್ಚೆಯು ಸಹ ಈ ವರ್ಷದ್ದು ಅಲ್ಲವೇ, ಮಲ್ಕಾಪೂರೆಯವರೇ..

(ಗೊಂದಲ)

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, I am not binding only for this year.

(ಗೊಂದಲ)

**ಶ್ರೀ ಹೆಚ್.ಕೆ.ಪಾಟೀಲ:-** ಮಾನ್ಯ ಸಭಾಪತಿಯವರೇ, ಈ ವರ್ಷದ ಬಗ್ಗೆ ಅಜಯ್ ನಾಗಭೂಷಣ್ ರವರ ಪತ್ರವನ್ನು ಮಾನ್ಯ ಮಲ್ಕಾಪೂರೆಯವರು refer ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರೇ ಎರಡು ವರ್ಷದ್ದು ಎಂದು ಒಪ್ಪಿಕೊಂಡಿದ್ದಾರೆ. ನೀವು ಬೇಡ ಎಂದರೆ, ನಾನು ಏನು ಹೇಳಲಿ? ನಾನು ಈ ವಿಷಯಕ್ಕೆ ನಿಜಕ್ಕೂ ಅವರನ್ನು appreciate ಮಾಡುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ:-** ಮಾನ್ಯ ಸಭಾಪತಿಯವರೇ, ಅವರು ಒಪ್ಪಿಕೊಂಡಿದ್ದಾರೆ. ಅಲ್ಲಿ ಟೆಂಡರ್ ಕರೆಯದೆ ಇರುವಂತಹ ಪ್ರಕರಣದಲ್ಲಿ ನಾವು ಏಕಾಏಕಿ ಸದನ ಸಮಿತಿಯನ್ನು ರಚನೆ ಮಾಡಿದರೆ, ಎಲ್ಲಿಯೋ ಒಂದು ಕಡೆ ತಪ್ಪಾಗುತ್ತದೆ ಎಂದು ನನಗೆ ಅನಿಸುತ್ತದೆ. ಆದ್ದರಿಂದ ದಯಮಾಡಿ ತಾವು ಇದನ್ನು ಗಮನಿಸಬೇಕು.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಕೇಳುತ್ತಿರುವುದು ಕಳೆದ ವರ್ಷದ್ದು.

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಸದಸ್ಯರು ಒಟ್ಟಿಗೆ ಮಾತನಾಡಿದರೆ ಹೇಗೆ?

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎಲ್ಲರೂ ಒಟ್ಟಿಗೆ ಮಾತನಾಡಿದರೆ, ಏನೂ ಪ್ರಯೋಜನ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಸದನ ಸಮಿತಿಗೆ ಒಪ್ಪಿದ ನಂತರ he has accepted it. Let us keep quite now.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು)** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ fair ಆಗಿ ಅವರು accept ಮಾಡಿದ್ದಾರೆ ಎನ್ನತಕ್ಕಂಥ ಪ್ರಶ್ನೆ... ಮಾನ್ಯ ಶಾಣಪ್ಪನವರೆ, ಇಲ್ಲಿ ಹೇಳುತ್ತೇನೆ. ಮಾನ್ಯ ಸಚಿವರು ಬಹಳ ಬದ್ಧತೆಯಿಂದ ತಮ್ಮ statement ಅನ್ನು ಮಾಡಿದ್ದಾರೆ. ಇದರಲ್ಲಿ ಅವ್ಯವಹಾರ ಆಗಿದ್ದರೆ, ನಾನು ಒಂದು second ನಲ್ಲಿ quit ಮಾಡುತ್ತೇನೆ ಎಂದು ಹೇಳಿದ ಮೇಲೆ...

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,.

(ಗೊಂದಲ)

**ಶ್ರೀ ಶರಣಪ್ಪ ಮಟ್ಟೂರ:-** ಒಂದು ನಿಮಿಷ ಕೇಳಿ...ಶ್ರೀಕಂಠೇಗೌಡರವರೇ ಸ್ವಲ್ಪ ಅರ್ಥಮಾಡಿಕೊಂಡು ಮಾತನಾಡಿ. ಅರ್ಥ ಮಾಡಿ ಕೊಳ್ಳಿ. Please, try to understand the logic of his statement. Don't argue baselessly.

**ಸಭಾಪತಿಯವರು:-** ಮಟ್ಟೂರವರೇ, ಆಯಿತು ಬಿಡಿ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, Specification ಪ್ರಕಾರ, laptop ಕೊಟ್ಟಿಲ್ಲ. ಅವರು ಪಾರದರ್ಶಕವಾಗಿದ್ದಾರೆ. ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅದಕ್ಕೆ ಇವರು ಏಕೆ ಅಡ್ಡ ಬರುತ್ತಿದ್ದಾರೆ? ಅವರು ಸದನದ ದಿಕ್ಕು ತಪ್ಪಿಸುವುದು ಬೇಡ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ಸಾಕು. ದಯವಿಟ್ಟು ಎಲ್ಲರೂ ಕುಳಿತು ಕೊಳ್ಳಿ. ಇದನ್ನು ಮುಗಿಸೋಣ ದಯವಿಟ್ಟು ಎಲ್ಲರೂ ಕುಳಿತು ಕೊಳ್ಳಿ. ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಿದರೆ, ಇದು ಕಡತಕ್ಕೆ ಹೋಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ನಾನು ಹೇಳುತ್ತೇನೆ. ಕುಳಿತುಕೊಳ್ಳಿ. ಈ ಪ್ರಶ್ನೆಗೆ ವಿರೋಧ ಪಕ್ಷದ ನಾಯಕರ ಜೊತೆಗೆ ಕೆಲವು ಸದಸ್ಯರು ಸಹ ಸೇರಿಕೊಂಡು ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡುವುದು ಒಳ್ಳೆಯದು, ಮಾಡಿ ಎಂದು ಕೇಳಿದ್ದಾರೆ. ಸದನ ಸಮಿತಿಯನ್ನು ಮಾಡುವುದಕ್ಕೆ ಸರ್ಕಾರದ ಅಭ್ಯಂತರ ಇರುವುದಿಲ್ಲವೆಂದು ಹೇಳಿರುವಂತಹ ಹಿನ್ನೆಲೆಯಲ್ಲಿ, ಒಂದು ಸದನ ಸಮಿತಿಯನ್ನು ಮಾಡೋಣ. Terms of Reference ಅನ್ನು ನಾನು ಕಳುಹಿಸಿ ಕೊಡುತ್ತೇನೆ. ಮುಂದಿನ ಪ್ರಶ್ನೆ ಮಾನ್ಯ ಕವಟಗಿಮಠ ರವರದ್ದು.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ತಾವು ಒಂದು ಬಾರಿ ruling ಕೊಟ್ಟ ಮೇಲೆ, ಮತ್ತೆ ಚರ್ಚೆ ಬೇಡ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಸಿ.ಎಂ.ಇಬ್ರಾಹಿಂ ರವರು ಹೇಳಿದಂತೆ..

(ಗೊಂದಲ)

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾರೋ ಒಬ್ಬ ಅಧಿಕಾರಿ ಹೇಳಿದ್ದಾರೆಂದು, ಇದನ್ನು ತಾವು ಮಾಡುವುದು ಸರಿಯಲ್ಲ. ಇದನ್ನು ಆರು ತಿಂಗಳು ಮಾಡಬಾರದು, 10 ದಿವಸಗಳಲ್ಲಿ ಮುಗಿಸಬೇಕು.

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ತನಿಖೆಗೆ 15-20 ದಿನಗಳಷ್ಟು ಕಾಲಾವಕಾಶವನ್ನು ಮಾತ್ರ ಮಾಡಿಕೊಡಬೇಕಾಗಿರುತ್ತದೆ. ಅಷ್ಟರಲ್ಲಿ ಅವರು ತನಿಖೆ ಮಾಡಿ ವರದಿ ಕೊಡಲಿ.

(ಗೊಂದಲ)

**ಸಭಾಪತಿಯವರು:-** ಇಂತಹ ವಿಚಾರಗಳಲ್ಲಿ ನಾನು ಯಾವಾಗಲೂ 15 ದಿವಸಗಳಷ್ಟು ಕಾಲಕಾಶವನ್ನು ಮಾತ್ರವೇ ಕೊಡುವುದು. ಇವತ್ತೇ ಮಾಡಿ, ಅವರು ವರದಿ ಕೊಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವ ವಿಚಾರಕ್ಕೆ ತನಿಖೆಯಾಗಬೇಕು? ಇದರಲ್ಲಿ ಯಾವುದಾದರೂ ಪೇಮೆಂಟ್ ಆಗಿದೆಯಾ? ಯಾವುದಾದರೂ laptop ಅನ್ನು receive ಮಾಡಿದ್ದಾರೆಯೇ? ಲ್ಯಾಪ್‌ಟಾಪ್‌ಗಳ ವಿತರಣೆಯಲ್ಲಿ ಈಗಾಗಲೇ 6 ತಿಂಗಳು ವಿಳಂಬವಾಗಿದೆ ಎಂದು ಹೇಳುತ್ತಿದ್ದಾರೆ. ಆ ರೀತಿ ವಿಳಂಬವಾಗುವುದಕ್ಕೆ ಯಾರು ಕಾರಣ? ಅದರ ಬಗ್ಗೆ ಸಹ ಸರ್ಕಾರ ಹೇಳಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:-** ಅದನ್ನು ನೋಡುತ್ತಾರೆ. ಆಯಿತು. ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ರೀತಿ ಸದನ ಸಮಿತಿಯನ್ನು ರಚನೆ ಮಾಡಿ ಇದನ್ನು ಇನ್ನೂ 6 ವರ್ಷಗಳ ಕಾಲ ತಳ್ಳುತ್ತೀರಾ? ಯಾವ ವಿಚಾರಕ್ಕೆ ಸದನ ಸಮಿತಿ ರಚನೆ ಆಗಬೇಕು?

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು ದಯವಿಟ್ಟು ಕುಳಿತುಕೊಳ್ಳಿ. ನೀವು ಈ ರೀತಿ ಕೂಗಾಡಿದರೆ, ಒಬ್ಬರಿಗಿಂತ ಹೆಚ್ಚು ಮಾತನಾಡಿದರೆ ಯಾವುದು ಕಡತಕ್ಕೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸುಮ್ಮನೆ ಹುಚ್ಚು ಹುಚ್ಚಾಗಿ ಸದನ ಸಮಿತಿಯನ್ನು ರಚನೆ ಮಾಡಿ ಎಂದರೆ ಹೇಗೆ? ಇದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ.

**ಸಭಾಪತಿಯವರು:-** ನನ್ನ ಪರವಾಗಿ ನೀವೇಕೆ ಮಾತನಾಡುತ್ತೀರಿ? I am competent to defend myself. ಮಾನ್ಯ ಸಚಿವರು ಟೆಂಡರ್ ಕರೆದಿಲ್ಲವೆಂದು ಹೇಳಿದ ಮೇಲೆ ಮುಗಿಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಬಸವರಾಜ ರಾಯರೆಡ್ಡಿ**:– ಮಾನ್ಯ ಸಭಾಪತಿಯವರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು**:– ಸಾಕು ಇನ್ನೇನು ಮಾತನಾಡುತ್ತೀರಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:– ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟಿದ್ದೀರಿ.

**ಸಭಾಪತಿಯವರು**:– ಸಚಿವರು ಒಪ್ಪಿದ ಮೇಲೆ ನಾನು ruling ಕೊಟ್ಟಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:– ಮಾನ್ಯ ಸಭಾಪತಿಯವರೇ, ತಾವು ruling ಕೊಟ್ಟ ಮೇಲೆ, whether it is right or wrong the matter is closed. ನಂತರ ಅದರ ಮೇಲೆ ಮಾತನಾಡುವ ಅವಕಶ್ಯಕತೆ ಇಲ್ಲ.

**ಸಭಾಪತಿಯವರು**:– ಆದ್ದರಿಂದ, ನಾನು ಮುಂದಿನ ಪ್ರಶ್ನೆಗೆ ಸದಸ್ಯರ ಹೆಸರನ್ನು ಕರೆದಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:– ಮಾನ್ಯ ಸಭಾಪತಿಯವರೇ, ತಾವು ಸದನ ಸಮಿತಿ ರಚಿಸಲು ಸರ್ಕಾರ ಒಪ್ಪಿದೆ ಎಂದು ಹೇಳಿದ ಮೇಲೆ ಮುಗಿಯಿತು. Don’t discuss about this.

**ಸಭಾಪತಿಯವರು**:– ಆ ವಿಷಯ ಮುಗಿಯಿತು, ಮುಂದಿನ ವಿಷಯಕ್ಕೆ ಹೋಗೋಣ.

**ಶ್ರೀ ಬಸವರಾಜ ರಾಯರೆಡ್ಡಿ**:– ಮಾನ್ಯ ಸಭಾಪತಿಯವರೇ, ನಾನು ನಿಮ್ಮ ಮಾತಿಗೆ ಆಕ್ಷೇಪಣೆ ಮಾಡುತ್ತಿಲ್ಲ. Let me clarify it. ನಾನು ಮಂತ್ರಿಯಾಗಿ ಮಾತನಾಡುವುದು ಬೇಡವೇ?

**ಶ್ರೀ ವಿ.ಎಸ್.ಉಗ್ರಪ್ಪ**:– ಕಳೆದ ವರ್ಷ ಟೆಂಡರ್ ಕರೆಯಲಾಗಿದೆಯೇ ಅಥವಾ ದುಡ್ಡು ಕೊಟ್ಟಿದ್ದಾರೆಯೇ? ಏನು ಇಲ್ಲದೇ ಸದನ ಸಮಿತಿ ರಚಿಸಬೇಕು ಎಂದರೆ ಹೇಗೆ?

**ಸಭಾಪತಿಯವರು**:– ಮಾನ್ಯ ಉಗ್ರಪ್ಪನವರೇ, ನೀವು ಸರ್ಕಾರದ ಪರವಾಗಿ ಮಾತನಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಒಬ್ಬರಿಗಿಂತ ಹೆಚ್ಚು ಜನರು ಮಾತನಾಡುತ್ತಿರುವುದರಿಂದ ಇದು ಯಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಟ್ಟ ನಂತರ ಮುಗಿಯಿತು.

(ಗೊಂದಲ)

(ಮುಂದು...)

(1053)17.11.2017-11.40-ಎಂವಿ-ಎಕೆ

**ಸಭಾಪತಿಯವರು:-** ಮತ್ತೆ ಅದೇ ವಿಷಯನ್ನು ಏಕೆ ಚರ್ಚೆ ಮಾಡುತ್ತೀರಾ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, Point of Order ಇದು ಎಲ್ಲಾ ಮುಗಿದಿದೆ.

**ಸಭಾಪತಿಯವರು:-** ಸದನ ನಡೆಸುವುದು ಬೇಡವೆ? ನಾನು ಯಾವುದನ್ನು ಸಹ allow ಮಾಡುವುದಿಲ್ಲ. ಆ ವಿಷಯ ಮುಗಿದು ಹೋಗಿದೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಹೌದು, ಆ ಪ್ರಶ್ನೆ ಮುಗಿದಿದೆ, ಮುಂದಿನ ಪ್ರಶ್ನೆಗೆ ಹೋಗಿ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವೇ ಒಪ್ಪಿದ್ದೀರಿ. ಅದನ್ನು ನಾನು ದಾಖಲಿಸಿದ್ದೇನೆ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಚಿವರೆ, ತಾವು ಒಪ್ಪಿಕೊಂಡಿದ್ದೀರಿ, ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ನೀಡಿ ಎಂದು ಮಾನ್ಯ ಸಭಾಪತಿಯವರನ್ನು ಕೇಳಿಕೊಳ್ಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸಿಗಬಾರದೆಂದು, ಸದನ ಸಮಿತಿ ಸಮಯವನ್ನು ಆರು ತಿಂಗಳು ತೆಗೆದುಕೊಂಡರೆ ಹೇಗೆ?

**ಸಭಾಪತಿಯವರು:-** ಸದನ ಸಮಿತಿ ಹದಿನೈದು ದಿವಸಗಳಲ್ಲಿ ತನ್ನ ವರದಿಯನ್ನು ಕೊಡುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸದನ ಸಮಿತಿಗೆ ಒಂದು ತಿಂಗಳ ಸಮಯಾವಕಾಶವನ್ನು ನೀಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶವನ್ನು ನೀಡಿ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠೇಗೌಡರೆ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡುವುದು ಬೇಡವೆ?

**(ಗೊಂದಲ)**

**Sri BASAVARAJ RAYAREDDY:** Sir, allow me to speak.

**ಸಭಾಪತಿಯವರು:-** ನೀವು ಹೇಳಿದ್ದೀರಿ, ಮತ್ತೆ ಏಕೆ ಚರ್ಚೆ ಮಾಡುತ್ತೀರಾ, ಈಗ ಏನನ್ನು ಮಾತನಾಡುತ್ತೀರಾ, ಇದರ ಬಗ್ಗೆ ಚರ್ಚೆ ಇಲ್ಲ. ನೀವು ಹೇಳಿದ ಮೇಲೆ ನಾನು ಹೇಳಿರುವುದು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಎದ್ದು ನಿಂತು ಹೇಳಬೇಕು ಅಲ್ಲವೆ. ಸಭಾನಾಯಕರು ಹೇಳಿದ ಮೇಲೆ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ನೀಡಿ.

**ಸಭಾಪತಿಯವರು:-** ತಾವು ಸದನ ಸಮಿತಿಯನ್ನು ಮಾಡಿ ಎಂದು ಹೇಳಿದ್ದೀರಿ. ನಿಮ್ಮ ಪರವಾಗಿ ಸಭಾನಾಯಕರು ಎದ್ದು ನಿಂತು ಸದನ ಸಮಿತಿಯನ್ನು ಮಾಡಿ ಎಂದು ಹೇಳಿದರು. ಅವರು ಒಪ್ಪಿದ್ದಾರೆ ಅದರ ಪ್ರಕಾರ ಸದನ ಸಮಿತಿಯನ್ನು ಮಾಡೋಣ ಎಂದು ಹೇಳಿದ್ದೇನೆ. ಈಗ ಸದನ ಸಮಿತಿ ಬೇಕೋ ಅಥವಾ ಬೇಡವೋ ಎಂದು ಎರಡು ಪದಗಳಲ್ಲಿ ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅದಕ್ಕೋಸ್ಕರ ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ತಾವು ಮಾತನಾಡುವುದು ಬೇಡ. No discussion.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನೀವೇ ಬೇಡವೆಂದರೆ, ನೀವು ಹೀಗೆ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೇ, ರೂಲಿಂಗ್ ಕೊಟ್ಟ ಮೇಲೆ ಅಲ್ಲ ಇನ್ನೇನಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ನೀವು ಏನು ಸಮಯವನ್ನು ನಿಗದಿಪಡಿಸಿದ್ದೀರಿ, ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ, ಆದರೆ ಅದನ್ನು ತ್ವರಿತವಾಗಿ ಮಾಡದೇ ಇದ್ದರೆ ಏನಾಗುತ್ತದೆ.

**ಸಭಾಪತಿಯವರು**:- ಇಲ್ಲ, ತ್ವರಿತವಾಗಿ ಮಾಡಲಿ ಎಂದು ಹದಿನೈದು ದಿವಸಗಳ ಸಮಯಾವಕಾಶವನ್ನು ನೀಡಿರುವುದು.

**ಶ್ರೀ ಸಿ.ಎಂ.ಇಬ್ರಾಹಿಂ**:- ಮಾನ್ಯ ಸಭಾಪತಿಯವರೇ, ಒಂದು ವಾರದಲ್ಲಿ ಆಗಬೇಕು.

**(ಗೊಂದಲ)**

**Sri C.M. IBRAHIM:** You can't dictate the terms. …*(Interruptions)* You can't dictate the terms.

**(ಗೊಂದಲ)**

**ಸಭಾಪತಿಯವರು**:- ಇನ್ನೂ ಒಂದು ವಾರ ಸದನ ಇರುತ್ತದೆ. ಇದು ತ್ವರಿತವಾಗಿ ಆಗಬೇಕು ಅದನ್ನು ಮಾಡೋಣ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿ, ನಾನು ಇದಕ್ಕೆ ಸಂಬಂಧಪಟ್ಟ ಮಂತ್ರಿ.

**ಸಭಾಪತಿಯವರು**:- ಮಾನ್ಯ ಸಚಿವರೆ, ಮತ್ತೆ ಏಕೆ ಮಾತನಾಡುತ್ತೀರಿ, ನೀವು ಮಾತನಾಡುವುದಕ್ಕೆ ಮಾನ್ಯ ಸದಸ್ಯರು ಬಿಡುತ್ತಾರೆಯೇ? ನಾನು ಸದನ ನಡೆಸುವುದು ಬೇಡವೆ?

**(ಗೊಂದಲ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಹೋದ ವರ್ಷದ ಲ್ಯಾಪ್‌ಟಾಪ್ ಅನ್ನು ಇನ್ನು ಕೊಟ್ಟಿಲ್ಲ.

**ಸಭಾಪತಿಯವರು**:- ಮಾನ್ಯ ಸಚಿವರೆ, ಒಂದು ನಿಮಿಷ ಕುಳಿತುಕೊಳ್ಳಿ. ನಾನು ಅವರ ಬಗ್ಗೆ ವಿಷಯ ಮುಗಿಯುವಾಗ ಒಂದು ಮಾತನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ನಾನು ಮಾತನಾಡುವಾಗಲೂ ಮಾತನಾಡುತ್ತೀರಾ, ಈಗ ನಾನು ಮಾತನಾಡುತ್ತಿದ್ದೇನೆ ತಾವು ದಯಮಾಡಿ ಸುಮ್ಮನಿರಿ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಲವಾರು ಸದಸ್ಯರು ಸದನ ಸಮಿತಿಯನ್ನು ಮಾಡಬೇಕೆಂದು ತಮ್ಮ ಬೇಡಿಕೆಯನ್ನು ಇಟ್ಟಾಗ. ಗೌರವಾನ್ವಿತ ಸಚಿವರು ನನ್ನದೇನೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭ್ಯಂತರವಿಲ್ಲ ಎಂದು ಹೇಳಿದರು. ಸರ್ಕಾರದ ಪರವಾಗಿ ಸಭಾನಾಯಕರು ಎದ್ದು ನಿಂತು ಸದನ ಸಮಿತಿಯನ್ನು ಮಾಡಿ ಎಂದು ಹೇಳಿದರು. ನಾವೆಲ್ಲರೂ ಒಂದು ವಿಷಯವನ್ನು ಗಮನಿಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಂಭೀರವಾಗಿರುವಂತಹ ವಿಷಯವನ್ನು ಸದನದಲ್ಲಿ ಎತ್ತಿದ್ದಾರೆ. ಅಂದರೆ ಮಕ್ಕಳಿಗೆ ಕೊಡುವಂತಹ ಲ್ಯಾಪ್‌ಟಾಪ್ ತಡವಾಗಬಾರದೆಂದು.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಲ್ಯಾಪ್‌ಟಾಪ್ ಕೊಡುವುದು ತಡವಾಗಬಾರದೆಂದು ನಾನು ಸಹ ಹೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ ರವರು ಸಹ ಹೇಳಿದರು. ಈ ರೀತಿ ಹೇಳಿದ ಹಿನ್ನೆಲೆಯಲ್ಲಿ, ಸದನ ಇನ್ನು ಒಂದು ವಾರ ನಡೆಯುತ್ತದೆ. ಹಾಗಾಗಿ ಅದನ್ನು ನಾನು ನೆನಪಿಟ್ಟುಕೊಂಡು ಕಾನೂನು ಪ್ರಕಾರ rules and regulations ಪ್ರಕಾರ ಇವೊತ್ತೇ ಈ ಸದನ ಸಮಿತಿಯನ್ನು ನಾನು ರಚನೆ ಮಾಡುತ್ತೇನೆ. ಆದರೆ, ಅದು ಹದಿನೈದು ದಿವಸಗಳ ಒಳಗಡೆ ತನ್ನ ವರದಿಯನ್ನು ಕೊಡಬೇಕು ಎಂದು ನಾನು ತಿಳಿಸಿದ್ದೇನೆ. ಆ ಹದಿನೈದು ದಿವಸವನ್ನು ಏಕೆ ಕೊಟ್ಟಿದ್ದೇನೆ ಎಂದರೆ ಈ ವಾರ ಅದಕ್ಕೆ ಸಂಬಂಧಪಟ್ಟಂತೆ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಕಾರಣ, ಸದನ ನಡೆಯುತ್ತಿರುತ್ತದೆ. ಆದುದರಿಂದ ಮುಂದಿನ ಒಂದು ವಾರದವರೆಗೆ ಕಾಲಾವಕಾಶವನ್ನು ಕೊಟ್ಟಿದ್ದೇನೆ. ಇಂದು ಸಂಜೆ ಸದನ ಮುಗಿದ ತಕ್ಷಣ ನಾನು ಸದನ ಸಮಿತಿಯನ್ನು ರಚನೆ ಮಾಡಿ, ಅದರ ಮಾಹಿತಿಯನ್ನು ಮಾನ್ಯ ಸಭಾನಾಯಕರಿಗೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅವರಿಗೆ Terms of Reference ಹೇಳಿ.

**ಸಭಾಪತಿಯವರು:-** ಆಯಿತು, ಅದು ಬೇಡ, ಅದನ್ನು ನಾನು ಮಾಡುತ್ತೇನೆ. ಅದನ್ನು ನೀವು ಹೇಳಬಾರದು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, Terms of Reference ಮಾಡುವುದಕ್ಕೆ ಮಾನ್ಯ ಸಭಾಪತಿಯವರು ಇದ್ದಾರೆ.

**ಸಭಾಪತಿಯವರು:-** ನನ್ನ ಮೇಲೆ ನಂಬಿಕೆ ಇಲ್ಲವೆ. ಸಾಕು ಬಿಡಿ. ಮಾನ್ಯ ಸದಸ್ಯರುಗಳು ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಬಿಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ನಾನು ಬೇರೆ ವಿಚಾರದ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರು ಓದಿರುವುದು ಯಾವುದೋ ಒಂದು ಪತ್ರಿಕೆಯಲ್ಲಿ ಬರೆದಿರುವಂಥದ್ದು. ಅವರು ಏನನ್ನು ಹೇಳುತ್ತಿದ್ದಾರೆ ಎಂದರೆ ಈ ರೀತಿ ಬಂದಿದೆ ನೀವು ಯಾವ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೆಂದು. ಅವರು ಆ ತರಹದ ಪತ್ರ ಬರೆದಿದ್ದಾರೆಂದು ನನಗೆ ಏನು ಗೊತ್ತು. ಬಂದಿರುವಂತಹ ಪತ್ರವನ್ನು ಹಾಜರುಪಡಿಸಬೇಕಲ್ಲವೆ? ಈ ರೀತಿಯಾಗಿದೆ ಎಂದು ಪತ್ರಿಕೆಯಲ್ಲಿ ಬಂದಿರುವಂಥದ್ದನ್ನು ಅವರು ಓದುತ್ತಿದ್ದಾರೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಹಾಗಾದರೆ ಪತ್ರಿಕೆಯವರಿಗೆ ಏನು ಬದ್ಧತೆ ಇಲ್ಲವೆ.

**Sri BASAVARAJ RAYAREDDY:** Allow me to speak. ಅದು ಅವರ ಪತ್ರವೆ? ಅದು ಅವರ ಪತ್ರವಲ್ಲ.

**ಶ್ರೀ ಟಿ.ಎ.ಶರವಣ**:- ಮಾನ್ಯ ಸಭಾಪತಿಯವರೇ, ಎಲ್ಲಾ ಸದನ ಸಮಿತಿಯಲ್ಲಿ ಚರ್ಚೆ ಆಗುತ್ತದೆ ಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಆ ಪತ್ರದ ಪ್ರತಿ ಅವರ ಬಳಿ ಇದೆಯೆ? ಶ್ರೀ ಅಜಯ್ ನಾಗಭೂಷಣ್ ಆ ರೀತಿಯ ಪತ್ರವನ್ನು ಬರೆದಿದ್ದರೆ ಅದರ ಬಗ್ಗೆ ಮುಖ್ಯಕಾರ್ಯದರ್ಶಿಯವರು ಅದರ ತನಿಖೆ ಮಾಡುತ್ತಾರೆ. ಆಗ ಅದು ನನ್ನ ಗಮನಕ್ಕೆ ಬರುತ್ತದೆ. ಆ ತರಹದ ಪತ್ರಗಳು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ನಾನು ಸ್ಪಷ್ಟಪಡಿಸಬೇಕಾಗಿತ್ತು. ನೀವು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ನಿಮಿಷ ಇರಿ, ನೀವು ಹೇಳಿರುವುದನ್ನು ನಾನು ಸರಿಯಿಲ್ಲವೆಂದು ಹೇಳಿಲ್ಲ. ಪ್ರಾಮಾಣಿಕವಾಗಿ ಮತ್ತು ಪಾರದರ್ಶಕವಾಗಿ ಆಗಬೇಕು ಎನ್ನುವುದು ನನ್ನ ಉದ್ದೇಶ. ಸದಸ್ಯರು ಪತ್ರಿಕೆಯಲ್ಲಿ ಇರುವುದನ್ನು ಓದಿರುವುದು ಅದು ಪತ್ರವಲ್ಲ, ಪತ್ರಿಕೆಯಲ್ಲಿ ಬರೆದಿರುವುದನ್ನು ಯಥಾವತಾಗಿ ಓದಿದ್ದಾರೆ. ಅಧಿಕಾರಿ ಬರೆದಿರುವ ಪತ್ರದ ಪ್ರತಿ ಮಾನ್ಯ ಸದಸ್ಯರ ಬಳಿ ಇದ್ದರೆ ದಯಮಾಡಿ ಸದನಕ್ಕೆ ನೀಡಲಿ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆಯವರು ಆ ಪ್ರತಿಯನ್ನು ಸದನ ಸಮಿತಿಗೆ ನೀಡಲಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಅಧಿಕಾರಿಯ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ, ನಂತರ ಅದರ ವಿಚಾರ ಮಾಡುತ್ತೇವೆ. Thank you.

**ಸಭಾಪತಿಯವರು**:- ಸಾಕು ಬಿಡಿ. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರದ್ದು.

**ಚುಕ್ಕೆ ಪ್ರಶ್ನೆ ಸಂಖ್ಯೆ: 4036**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಕ್ಕರೆ ಸಚಿವರು ಉತ್ತರವನ್ನು ಕೊಡಬೇಕಾಗಿತ್ತು, ಆದರೆ ಮಾನ್ಯ ಹಿರಿಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

**ಸಭಾಪತಿಯವರು**:- ನಿಮಗೆ ಸದನ ನಡೆಸಬಾರದು ಎಂದು ಇದ್ದರೆ, ಈ ತರಹ ಎಲ್ಲಾ side talk ಮಾಡಿ. Please, don't test my patience.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸುದೀರ್ಘವಾದಂತಹ ಉತ್ತರನ್ನು ಕೊಟ್ಟಿದ್ದಾರೆ. ಬೆಳಗಾವಿ ಸಕ್ಕರೆ ಜಿಲ್ಲೆ. ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಕಬ್ಬನ್ನು ಬೆಳೆಯುವಂತಹ ಸಕ್ಕರೆ ನಾಡು. ಸದನ ನಡೆಯುವಂತಹ ಸಂದರ್ಭದಲ್ಲಿ ನಾನು ಕೇಳಿರುವಂತಹ ಪ್ರಶ್ನೆ ರಾಜ್ಯದಲ್ಲಿನ ರೈತರ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಲು ಸರ್ಕಾರ ವಿಫಲವಾಗಿರುವ ಹಿನ್ನೆಲೆಯಲ್ಲಿ ಹಾಗೂ ಕಾರ್ಖಾನೆಗಳು ರೈತರ ಕಬ್ಬಿನ ಬಾಕಿ ಹಣ ಪಾವತಿಸಲು ವಿಳಂಬ ಮಾಡುತ್ತಿರುವುದರಿಂದ, ರೈತರು ಕಬ್ಬು ಬೆಳೆಯಲು ಹಿಂದೇಟು ಹಾಕುತ್ತಿದ್ದಾರೆ ಎನ್ನುವಂತಹ ವಿಚಾರವನ್ನು ನಾನು ಸರ್ಕಾರಕ್ಕೆ ಕೇಳಿದ್ದೇನೆ. ಅವರು ಸುದೀರ್ಘವಾದಂತಹ ಉತ್ತರವನ್ನು ನೀಡಿ, ಬಾಕಿ ಉಳಿಸಿಕೊಂಡಿರತಕ್ಕಂಥ ಕಾರ್ಖಾನೆಗಳ ವಿಚಾರವಾಗಿ ತಮ್ಮ ಮಾಹಿತಿಯನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಕೊಟ್ಟಿರತಕ್ಕಂಥ ಮಾಹಿತಿ 74.24 ಕೋಟಿ ರೂಪಾಯಿ ಹಣ ಬಾಕಿ ಇದೆ ಎಂದು ಕೊಟ್ಟಿದ್ದೀರಿ. ದಯವಿಟ್ಟು ತಾವು ಗಮನಿಸಬೇಕು. ನನ್ನಲ್ಲಿ ಇರುವಂತಹ ಮಾಹಿತಿಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನನ್ನಲ್ಲಿ ಇರುವಂತಹ ಮಾಹಿತಿ ಪ್ರಕಾರ ಒಟ್ಟು 2013-14ರಲ್ಲಿ 44.84 ಕೋಟಿ ರೂಪಾಯಿ. 2014-15ರಲ್ಲಿ 0.45 ಕೋಟಿ ರೂಪಾಯಿಗಳು. 2015-16ರಲ್ಲಿ 27.61 ಕೋಟಿ ರೂಪಾಯಿ. 2016-17ರಲ್ಲಿ 1.34 ಕೋಟಿ ರೂಪಾಯಿಗಳು. 2017-18ರಲ್ಲಿ 217.05 ಕೋಟಿ ರೂಪಾಯಿಗಳು. So, as on today, the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

total amount pending to be paid to the farmers is Rs.291 crores. ಈ ಒಂದು ಸುವರ್ಣ ವಿಧಾನ ಸೌಧ ಆದ ನಂತರ ಬೆಳಗಾವಿಯಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ರೈತರ ಬಾಕಿಯನ್ನು ಪಾವತಿ ಮಾಡಿ, ಸರ್ಕಾರ ಸದನವನ್ನು ನಡೆಸುವುದಕ್ಕೆ ಬರುತ್ತಿದೆ ಎನ್ನುವಂತಹ ಅಪೇಕ್ಷೆ ರೈತರಿಗೆ ಇತ್ತು. ಆದರೆ ಸರ್ಕಾರ ಇವತ್ತಿನ ದಿವಸ 291 ಕೋಟಿ ರೂಪಾಯಿಗಳಷ್ಟು ಹಣವನ್ನು ಬಾಕಿ ಉಳಿಸಿಕೊಂಡು, ಬೆಳಗಾವಿಯಲ್ಲಿ ಸದನವನ್ನು ನಡೆಸುತ್ತಿದೆ. ಇವೊತ್ತು ರೈತರು ಚಳುವಳಿಯನ್ನು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆ ಮತ್ತು ರೈತರು ಆಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ.

**(ಮುಂದು...)**

(1054)17.11.2017-11.50-ಎಲ್‌ಎಲ್-ಎಕೆ

**(ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ):- (ಮುಂದುವರೆದಿದ್ದು...)**

ಇವತ್ತಿನ ದಿವಸ ಕೊಡತಕ್ಕಂತಹ ಬಾಕಿ 291 ಕೋಟಿ ರೂಪಾಯಿಗಳು. ನನ್ನಲ್ಲಿರುವ ಒಂದು ಮಾಹಿತಿ ಎಂದರೆ, 8 ಸಕ್ಕರೆ ಕಾರ್ಖಾನೆಗಳಿಂದ ಹಿಂದಿನ ಸಾಲಿಗೆ ಅಂದರೆ, 2016-17 ನೇ ಇಸವಿಗಿಂತಲೂ ಹಿಂದೆ 74 ಕೋಟಿ ರೂಪಾಯಿಗಳ ಬಾಕಿ ಇತ್ತು. ಈ ವರ್ಷ 219 ಕೋಟಿ ರೂಪಾಯಿಗಳ ಹಣ ಬಾಕಿ ಇದೆ. ದಯವಿಟ್ಟು ಮಾನ್ಯ ಸಚಿವರು ಈ ವಿಚಾರದ ಮೇಲೆ ಬೆಳಕು ಚೆಲ್ಲಬೇಕು. ಜೊತೆಗೆ ರೈತರ ಬಾಕಿ ಹಣವನ್ನು ಸರ್ಕಾರ ಯಾವ ಕಾಲಮಿತಿಯೊಳಗೆ ಕೊಡಿಸುತ್ತದೆ ಎನ್ನುವುದನ್ನು ತಿಳಿಸಬೇಕು?

**ಸಭಾಪತಿಯವರು:-** ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಬಿಡಿ. ಅವರು ಉತ್ತರ ಹೇಳುವುದು ಬೇಡವೇ?

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ರೈತರ ಕಬ್ಬು ಬೆಳೆಯ ಬಾಕಿ ಹಣ 291 ಕೋಟಿ ರೂಪಾಯಿಗಳು ಇದೆ, 74 ಕೋಟಿ ರೂಪಾಯಿಗಳು ಅಲ್ಲ ಎಂಬ ಅನುಮಾನವನ್ನು ವ್ಯಕ್ತ ಮಾಡುತ್ತಿದ್ದಾರೆ. ಈ ಬಗ್ಗೆ ಕರ್ನಾಟಕ ಕಬ್ಬು(ಖರೀದಿ ಮತ್ತು ಸರಬರಾಜು ನಿಯಂತ್ರಣ) ಕಾಯ್ದೆ 2013 ತಿದ್ದುಪಡಿ 2014 ರ ನಿರ್ದೇಶನದಂತೆ, ರೈತರಿಗೆ ಕಬ್ಬು ಬೆಳೆಯ ಬಾಕಿ ಹಣ ಇನ್ನೂ ಎಷ್ಟು ಇದೆ, ಅದನ್ನು ಯಾವ್ಯಾವ ಬಾಬ್ತಿನಲ್ಲಿ ಕೊಡಬೇಕು ಎಂಬುದನ್ನು ಅಫಿಡವಿಟ್(ಪ್ರಮಾಣ ಪತ್ರ) ಮುಖಾಂತರ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಿದ್ದೇವೆ. ಸದರಿ ಸೂಚನೆ ಮೇರೆಗೆ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಸಂಪೂರ್ಣ ಪಾವತಿ ಮಾಡಿರತಕ್ಕಂಥದ್ದರ ಬಗ್ಗೆ ಅವರು ನಮಗೆ ಪ್ರಮಾಣಪತ್ರವನ್ನು ಸಲ್ಲಿಸಿದ್ದಾರೆ. ಆ ಪ್ರಮಾಣಪತ್ರದ ಪ್ರಕಾರ 74 ಕೋಟಿ ರೂಪಾಯಿಗಳ ಹಣ ಬಾಕಿಯಿದೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸದಸ್ಯರು 291 ಕೋಟಿ ರೂಪಾಯಿಗಳು ಬಾಕಿ ಇದೆಯೆಂದು ಹೇಳಿದ್ದಾರೆ. ಸದರಿ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಅಥವಾ ಮಾನ್ಯ ಸದಸ್ಯರೇ ಯಾವ ಕಾರ್ಖಾನೆ ಆ ರೀತಿ ಬಾಕಿ ಹಣ ಇಟ್ಟುಕೊಂಡು ಸರ್ಕಾರಕ್ಕೆ ತಪ್ಪು ಪ್ರಮಾಣಪತ್ರ ನೀಡಿದ್ದಾರೆ ಎನ್ನುವುದರ ಮಾಹಿತಿ ನೀಡಿದರೆ ಕರ್ನಾಟಕ ಕಬ್ಬು(ಖರೀದಿ ಮತ್ತು ಸರಬರಾಜು ನಿಯಂತ್ರಣ) ಕಾಯ್ದೆ 2013 ತಿದ್ದುಪಡಿ 2014 ರ ಪ್ರಕಾರ ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಆ ರೀತಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಮಾಹಿತಿಯಲ್ಲಿ 2016-17 ರವರೆಗೆ 74 ಕೋಟಿ ರೂಪಾಯಿ ಬಾಕಿ ಇದೆಯೆಂದು ಮಾಹಿತಿಯನ್ನು ನೀಡಿದ್ದಾರೆ. ಆದರೆ, ನಾನು ಈಗ ಕೊಟ್ಟಿರುವಂತಹ ಮಾಹಿತಿ 2017-18 ನೇ ಸಾಲಿಗೆ 217 ಕೋಟಿ ಬಾಕಿ ಇದೆ. ಅಫಿಡೆವಿಟ್ ಕೊಟ್ಟಿದ್ದಾರೆ ಎನ್ನತಕ್ಕಂತಹ ಮಾಹಿತಿಯನ್ನು ಮಾನ್ಯ ಸಚಿವರು ಸದನಕ್ಕೆ ಕೊಟ್ಟಿದ್ದಾರೆ. ಆದರೆ, ನನ್ನಲ್ಲಿರತಕ್ಕಂತಹ ಒಟ್ಟು ಮಾಹಿತಿ ಎಂದರೆ ಇವತ್ತಿನ ದಿವಸ ಬೆಳಗಾವಿಯಲ್ಲಿರತಕ್ಕಂತಹ Sugar Institute ನ ನಿರ್ದೇಶಕರು ಈ ಸದನದಲ್ಲಿ ಹಾಜರಿದ್ದಾರೆ. ಮಾನ್ಯ ಸಚಿವರು ದಯಮಾಡಿ ಅವರಿಂದ ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡು ನನ್ನ ಪ್ರಶ್ನೆಗೆ ಉತ್ತರ ನೀಡಬೇಕು. ಇಲ್ಲವಾದರೆ, ನನ್ನಲ್ಲಿರುವ ಮಾಹಿತಿಯನ್ನು ನಾನು ಮಾನ್ಯ ಸಚಿವರ ಜೊತೆ ಹಂಚಿಕೊಳ್ಳುತ್ತೇನೆ. ಆದರೆ, ಬೆಳಗಾವಿಯಲ್ಲಿ ಸದನ ನಡೆಯುವಂತಹ ಸಂದರ್ಭದಲ್ಲಿ ಈ ರೀತಿ ತಪ್ಪು ಮಾಹಿತಿ ಕೊಡತಕ್ಕಂತಹ ಕೆಲಸ ಆಗಬಾರದು. ಯಾವ ಸಕ್ಕರೆ ಕಾರ್ಖಾನೆಗಳು ರೈತರ ಬಾಕಿ ಉಳಿಸಿಕೊಂಡಿದೆ ಅದನ್ನು ತಿಳಿಸಬೇಕು. F.R.P. (Fair and Remunerative Price) ಎಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿಗದಿಪಡಿಸಿರುವಂತಹ ದರವನ್ನು ರೈತರಿಗೆ ಸಂದಾಯ ಮಾಡುವಲ್ಲಿ ಸರ್ಕಾರ ವಿಳಂಬ ಮಾಡಬಾರದು. ಆ ಒಂದು ಸಕ್ಕರೆ ಕಾರ್ಖಾನೆಗಳು ತಮ್ಮ ಬಾಕಿಯನ್ನು ಕಾಲಮಿತಿಯೊಳಗೆ ಕೊಡಬೇಕು. ಇಲ್ಲಿ ಏನಾಗಿದೆಯೆಂದರೆ, ಈ ವರ್ಷ crushing season ಪ್ರಾರಂಭವಾಗಿದೆ. ಕಳೆದ 3 ವರ್ಷ ನಾವು ಬರಗಾಲ ಪರಿಸ್ಥಿತಿಯನ್ನು ಎದುರಿಸಿದ್ದೇವೆ. ಈ ವರ್ಷ ಪ್ರಾರಂಭವಾದರೂ ಸಹ ಹಳೆಯ ಬಾಕಿಯನ್ನು ಕೊಟ್ಟಿರುವುದಿಲ್ಲ.

**ಸಭಾಪತಿಯವರು**:- ಈ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉತ್ಸಾಹಿ ಸದಸ್ಯರು ಜೊತೆಗೆ ಕಬ್ಬು ಬೆಳೆಗಾರರು ಹೌದು. ಸರ್ಕಾರಿ ಸಕ್ಕರೆ ಕಾರ್ಖಾನೆಗಳ ಜೊತೆಗೆ ಸಾಕಷ್ಟು ಒಡನಾಟ ಇಟ್ಟುಕೊಂಡವರು, ನಿರ್ದೇಶಕರು ಆಗಿರುವಂತಹವರು ಹೌದು. ಅಧ್ಯಕ್ಷರು ಆಗಿದ್ದರೋ ಅಥವಾ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಲ್ಲವೋ ಅದು ನನಗೆ ಗೊತ್ತಿಲ್ಲ. ನಾನು ಒಂದು ವಿಚಾರವನ್ನು ಮಾನ್ಯ ಸದಸ್ಯರಿಗೆ ಕೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈಗ 2017-18 ನೇ ವರ್ಷ ನಡೆಯುತ್ತಿದೆ, ಸೆಪ್ಟೆಂಬರ್ ತಿಂಗಳಿನಲ್ಲಿ ಕಬ್ಬು ಬೆಳೆ crushing ಪ್ರಾರಂಭವಾಗಿದೆ. ಸೆಪ್ಟೆಂಬರ್ 17 ರಿಂದ ಈಚೆಗೆ ಏನು crushing ಪ್ರಾರಂಭ ಮಾಡಿದ್ದೇವೆ, ಸಹಜವಾಗಿ ಇರುವಂತಹ 74 ಕೋಟಿ ರೂಪಾಯಿಗಳು ಇದು ಹಳೆಯ ಬಾಕಿ. It will not include the pending amount pertaining to the year 2017-18. ಏಕೆಂದರೆ, 2017-18 ವರ್ಷದಲ್ಲಿ ನಾವು ಸೆಪ್ಟೆಂಬರ್‌ನಲ್ಲಿ ಕಬ್ಬು ಬೆಳೆಯ crushing ಪ್ರಾರಂಭ ಮಾಡಿದ್ದೇವೆ. ಅಕ್ಟೋಬರ್, ನವೆಂಬರ್ ತಿಂಗಳು ಕಳೆದಿದೆ. ಕೇವಲ 15 ದಿನಗಳಲ್ಲಿ ಕಬ್ಬು ಬೆಳೆಯ ಬಾಕಿ ಹಣವನ್ನು ಯಾವ ಸಕ್ಕರೆ ಕಾರ್ಖಾನೆಯವರು ಕೊಡುತ್ತಾರೆ? ಆದುದರಿಂದ, ದಯಮಾಡಿ, 291 ಕೋಟಿ ರೂಪಾಯಿಗಳು, 15 ದಿವಸದಿಂದ 1 1/2 ತಿಂಗಳಲ್ಲಿ ವ್ಯತ್ಯಾಸವೆಂದರೆ ಅದನ್ನು ತಪ್ಪು ಅಂಕಿ-ಅಂಶ ಎಂದು ಹಿಡಿಯಬಾರದು. 2016-17 ರವರೆಗೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದರು ಅಲ್ಲಿಯವರೆಗೂ ಕಬ್ಬು ಬೆಳೆಗಾರರ ಬಾಕಿ ಇರುವಂತಹ ಹಣದ ಅಂಕಿ-ಅಂಶಗಳ ಬಗ್ಗೆ ಮಾಹಿತಿ ನೀಡಿದ್ದೇವೆ. ಆದಾಗ್ಯೂ, ಒಂದು ವೇಳೆ ಮಾನ್ಯ ಸದಸ್ಯರು ಏನು ವಿಷಯ ಹೇಳುತ್ತಿದ್ದಾರೆ, ಅದರ ಬಗ್ಗೆ ಅನುಮಾನ ಇದ್ದರೆ ಇಂತಹ ಸಕ್ಕರೆ ಕಾರ್ಖಾನೆಯವರು ಬಾಕಿ ಕೊಟ್ಟಿಲ್ಲವೆಂಬ ಮಾಹಿತಿಯನ್ನು ಕೊಟ್ಟು ಕಳುಹಿಸಿದರೆ ಕರ್ನಾಟಕ ಕಬ್ಬು(ಖರೀದಿ ಮತ್ತು ಸರಬರಾಜು ನಿಯಂತ್ರಣ) ಕಾಯ್ದೆ 2013 ತಿದ್ದುಪಡಿ 2014 ರನ್ವಯ ಮುಂದಿನ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಡಾ|| ಜಯಮಾಲ ರಾಮಚಂದ್ರರವರದ್ದು.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಸಭಾಪತಿಯವರು:-** ಎಷ್ಟು ಸಮಯ ಬೇಕು ತಮಗೆ? ಒಂದು ಪ್ರಶ್ನೆಗೆ ಹದಿನೈದು ಉಪ ಪ್ರಶ್ನೆ ಕೇಳಬೇಕೇ? ಈ ರೀತಿಯಾದರೆ ಸಂಜೆ 5 ಗಂಟೆ ಸಮಯ ಆಗುತ್ತದೆ. ಆದುದರಿಂದ, ತಾವು ಪ್ರಶ್ನೆ ಕೇಳುವುದು ಸಾಕು.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಒಂದು ಸಣ್ಣ ಸ್ಪಷ್ಟೀಕರಣ ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರಲ್ಲವೇ?

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಸರ್ಕಾರ ಸಕ್ಕರೆ ಸಂಸ್ಥೆಯನ್ನು ಸನ್ಮಾನ್ಯ ಎಸ್. ನಿಜಲಿಂಗಪ್ಪನವರ ಹೆಸರಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿದ್ದಾರೆ.

**ಸಭಾಪತಿಯವರು**:- ಆ ವಿಷಯಕ್ಕೂ ತಮ್ಮ ಪ್ರಶ್ನೆಗೂ ಏನು ಸಂಬಂಧವಿದೆ?

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಸಕ್ಕರೆ ಕಾರ್ಖಾನೆಗಳು, ಸಕ್ಕರೆ ಸಂಸ್ಥೆಗೆ ಪ್ರತಿ ಟನ್‌ಗೆ 1 ರೂಪಾಯಿ ಕೊಡಬೇಕಾಗಿರುವಂತಹ ಹಣವನ್ನು ಕೊಡುತ್ತಿಲ್ಲ. ಮಹಾರಾಷ್ಟ್ರದಲ್ಲಿರುವ Vasantdada Sugar Institute ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ. ಬೆಳಗಾವಿಯಲ್ಲಿ ದಿವಂಗತ ಎಸ್.ನಿಜಲಿಂಗಪ್ಪನವರ ಹೆಸರಿನಲ್ಲಿರುವಂತಹ ಸಕ್ಕರೆ ಸಂಸ್ಥೆಗೆ ಬಾಕಿ ಕೊಡತಕ್ಕಂತಹ ಎಲ್ಲಾ ಕಾರ್ಖಾನೆಗಳಿಂದ ಬಾಕಿಯನ್ನು ಕೊಡಿಸಬೇಕು ಮತ್ತು ಸರ್ಕಾರ ಸಹಿತ ಹೆಚ್ಚಿನ ಅನುದಾನವನ್ನು ಆ ಸಂಸ್ಥೆಗೆ ಕೊಡಬೇಕೆಂದು ಈ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅತ್ಯಂತ ಮಹತ್ವದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರು ಒಬ್ಬ ಅತ್ಯಂತ ಉತ್ಸಾಹಿ ಸದಸ್ಯರು. ಇಂತಹ ಮಹತ್ವದ ವಿಚಾರವನ್ನು ಪ್ರಶ್ನೆಯಲ್ಲಿ ಉಪಪ್ರಶ್ನೆ ಎಂದು ಕೇಳಿದರೆ ಹೇಗೆ? ಉತ್ತರ ಕರ್ನಾಟಕಕ್ಕೆ...

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನಿಯಮ 72 ರಡಿಯಲ್ಲಿಯೂ ಸಹ ನಾನು ಕೇಳಿದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಇದು ಉತ್ತರ ಕರ್ನಾಟಕದ ಒಂದು ಮಹತ್ವದ ಸಂಸ್ಥೆ, ಕಬ್ಬು ಬೆಳೆಗಾರರನ್ನು ಹಾಗೂ ಕಬ್ಬಿನ ಒಟ್ಟು ಎಲ್ಲಾ ಪದರಗಳ ಬಗ್ಗೆ ಸಂಶೋಧನೆ ಮಾಡಬೇಕು, ಮಾರುಕಟ್ಟೆಯಲ್ಲಿ ರೈತರಿಗೆ ಯಾವ ರೀತಿ ಅನುಕೂಲವಾಗಬೇಕು ಎನ್ನುವುದನ್ನು ಗಮನಿಸಬೇಕು. ನಮ್ಮ ಸಕ್ಕರೆ ಕಾರ್ಖಾನೆಗಳೊಳಗೆ ಯಾವ ಬದಲಾವಣೆಗಳಾಗಬೇಕು ಅದೆಲ್ಲವನ್ನು ತಿಳಿಸುವುದಕ್ಕೆ ದಿವಂಗತ ಎಸ್.ನಿಜಲಿಂಗಪ್ಪನವರ ಹೆಸರಿನಲ್ಲಿ ಆ ಸಂಸ್ಥೆ ಪ್ರಾರಂಭ ಮಾಡಿರುವುದು. ಅದರ ಬಗ್ಗೆ ಮಾನ್ಯ ಸಭಾಪತಿಯವರ ಮನವೊಲಿಸಿ, ಅಗತ್ಯವೆನಿಸಿದರೆ ನಾವು ಕೂಡ ಮಾನ್ಯ ಸದಸ್ಯರ ಧ್ವನಿಗೂಡಿಸಿ ನಿಯಮ 330 ರ ಮೇರೆಗೆ ವಿಶೇಷ ಚರ್ಚೆಯಡಿ ಈ ವಿಷಯವನ್ನು ತೆಗೆದುಕೊಂಡು ಬರಲಿ ಆಗ ಸದರಿ ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡೋಣ.

**Sri KAVATAGIMATH MAHANTESH MALLIKARJUN:** Thank you.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 4118**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಇದೊಂದು ಸೂಕ್ಷ್ಮವಾದಂತಹ ಪ್ರಶ್ನೆಯನ್ನು ನಾನು ಮಾನ್ಯ ಸಚಿವರಲ್ಲಿ ಕೇಳಿದ್ದೆನು. Sleeper Coach ಬಸ್ಸುಗಳಲ್ಲಿ ಪರದೆಗಳನ್ನು ನಿರ್ಮಿಸಿ ಅದನ್ನು ದುರ್ಬಳಕೆ ಮಾಡುತ್ತಿದ್ದಾರೆ ಮತ್ತು ಇದರಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಪ್ರಯಾಣಿಕರು ಈ ರೀತಿಯ ಅನೈತಿಕ ಚಟುವಟಿಕೆಗಳು ನಡೆಸುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಮತ್ತು ಈ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಮುಂದುವರೆದು, ಈ ರೀತಿಯ ಪರದೆಗಳನ್ನು ಕಿತ್ತು ಹಾಕುವಂತಹ ಅಥವಾ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಸದರಿ ಬಸ್ಸುಗಳಲ್ಲಿ ಅಳವಡಿಸುವಂತಹ ಕೆಲಸ ಮಾಡುತ್ತಾರೆಯೇ ಎಂಬ ಪ್ರಶ್ನೆ ಕೇಳಿದಾಗ, ಮಾನ್ಯ ಸಚಿವರು ಅದು ಪ್ರಯಾಣಿಕರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ನಾನು ಸದನದ ಗಮನಕ್ಕೆ ತರಬಯಸುವ ವಿಚಾರವೆಂದರೆ, ಉತ್ತರ ಕರ್ನಾಟಕದಿಂದ ಅತೀ ಹೆಚ್ಚು ಹೆಣ್ಣುಮಕ್ಕಳನ್ನು ಮೀರಜ್, ಸಾಂಗ್ಲಿ, ಭೀವಂಡಿ, ಪೂನಾ ಮತ್ತು ಬಾಂಬೆಗೆ trafficking ಆಗುತ್ತಿರುವಂತಹದ್ದು ಬಸ್ಸುಗಳಲ್ಲಿ ಎನ್ನುವಂತಹ ವಿಷಯವನ್ನು 15 ಸಾವಿರ ಪ್ರಕರಣಗಳಲ್ಲಿ ನಾವು ಅಧ್ಯಯನ ಮಾಡಿ, ಆ ಹೆಣ್ಣುಮಕ್ಕಳನ್ನು ಕೇಳಿದಾಗ ಆ ವಿಚಾರ ನಮ್ಮ ಗಮನಕ್ಕೆ ಬಂದಿರುತ್ತದೆ. ಇವತ್ತಿನ ದಿವಸ ಬೇರೆ ಯಾವುದರಲ್ಲಿಯೂ ಕೂಡ ಹೆಣ್ಣುಮಕ್ಕಳನ್ನು ಸಾಗಾಣಿಕೆ ಮಾಡುವುದಕ್ಕಾಗುವುದಿಲ್ಲ. ತಡರಾತ್ರಿ ಹೊರಡುವಂತಹ ಕೊನೆಯ ಬಸ್ಸಿನಲ್ಲಿ ಈ ಹೆಣ್ಣುಮಕ್ಕಳನ್ನು ಸಾಗಾಣಿಕೆ ಮಾಡುತ್ತಾರೆನ್ನುವುದು ಮತ್ತೊಂದು ವಿಷಯ.

**ಸಭಾಪತಿಯವರು:-** ಈಗ ಬಸ್ಸಿನ ವಿಚಾರದ ಬಗ್ಗೆ ಮಾತ್ರ ಮಾತನಾಡಿ.

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ ಬಸ್ಸಿನ ಚಾಲಕರಿಗೆ ಗೊತ್ತಿರುವಂತೆಯೇ ಆ ಬಸ್ಸಿನೊಳಗೆ ದಂಧೆ ನಡೆಯುತ್ತಿದೆ. ಅದರಲ್ಲಿಯೂ ಕೊನೆಯ ಸೀಟಿನಲ್ಲಿ ದಂಧೆ ನಡೆಯುತ್ತದೆ. ಈ ಬಗ್ಗೆ ಬಹಳಷ್ಟು ಜನ ಹೆಣ್ಣುಮಕ್ಕಳು, ಹಲವಾರು ಶಿಕ್ಷಕರು, ಉಪನ್ಯಾಸಕರು ನಮ್ಮ ಬಳಿ ಬಂದು ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ತಡರಾತ್ರಿ ಹೊರಡುವಂತಹ ಕೊನೆಯ ಬಸ್ಸಿನಲ್ಲಿ ನಾವು ಮುಂಬೈಗೆ ಹೋಗುತ್ತೇವೆ, ಪೂನಾಗೆ ಹೋಗುತ್ತೇವೆ ಆಗ ಬಸ್ಸಿನಲ್ಲಿ ನಮಗೆ ಕಷ್ಟವಾಗುತ್ತದೆ ಎನ್ನುವಂತಹ ಮಾತುಗಳನ್ನು ಕೂಡ ಹೇಳಿದ್ದಾರೆ.

(ಮುಂದುವರೆದಿದೆ...)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1055)17.11.2017/12.00/ವೈಎಲ್-ಆರ್‌ಎನ್

ಡಾ:ಜಯಮಾಲ ರಾಮಚಂದ್ರ(ಮುಂದು):-

ನಾನು ಕೂಡ ಕೇಳಿಕೊಂಡಿದ್ದೇನೆ. ಖಾಸಗಿ ತನವೆಂದರೆ...

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನೆಂಬುದನ್ನು ನೇರವಾಗಿ ಕೇಳಿದರೆ ಸರ್ಕಾರದಿಂದ ಆಗುತ್ತದೆಯೋ, ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಹೇಳುತ್ತಾರೆ. ಒಂದು ಪ್ರಶ್ನೆಗೆ ಇಷ್ಟೊಂದು ಸಮಯವನ್ನು ಹೇಗೆ ಕೊಡುವುದು?

**ಡಾ:ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಬಸ್ಸಿನ ಕೊನೆಯ ಜಾಗದಲ್ಲಿ ಸಿ.ಸಿ.ಟಿವಿ ಕ್ಯಾಮರಾಗಳನ್ನು ಅಳವಡಿಸಲು ಇರತಕ್ಕಂಥ ತೊಂದರೆ ಏನು? ಯಾರು ಕೂಡಾ ಒಳಗಡೆ ಏನು ನಡೆಯದೇ ಇದ್ದಾಗ ಪರದೆಯನ್ನು ಅಳವಡಿಸಿದರೆ ಅದು ಖಾಸಗಿತನವಾಗುತ್ತದೆ. Curtains ಅಳವಡಿಸಿದಾಗ ಯಾರಿಗಾದರೂ ಅನುಮಾನ ಬಂದರೆ ತೆಗೆದು ನೋಡಬಹುದು. ಆದರೆ ಎಲ್ಲಿಯೂ ಆ ರೀತಿಯಾಗಿ ತಪಾಸಣೆ ನಡೆಯುವುದಿಲ್ಲ. ಇವತ್ತಿನ ದಿನ ಹೆಣ್ಣುಮಕ್ಕಳೆಲ್ಲರ ವಿಚಾರದಲ್ಲಿ ಈ ರೀತಿ ಮಾಡಿದರೆ ತಪ್ಪಾಗುತ್ತದೆ. ಆದುದರಿಂದ ಪರದೆಯನ್ನು ತೆಗೆಯುವ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಯೋಚಿಸಿ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಡಾ. ಜಯಮಾಲರವರು ಸಾಮಾಜಿಕ ಪಿಡುಗಿನ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ, ನಡೆಯತಕ್ಕಂಥ ಅನೈತಿಕ ಚಟುವಟಿಕೆಗಳನ್ನು ಯಾವ ರೀತಿ ಕಂಡು ಹಿಡಿಯಬೇಕೆನ್ನುವುದು ಪ್ರಶ್ನೆಯಾಗಿದೆ? ಏಕೆಂದರೆ, ಬಸ್ಸಿನಲ್ಲಿ ಓಡಾಡುವ ಎಲ್ಲಾ ಪ್ರಯಾಣಿಕರು ಆ ದಂಧೆಯಲ್ಲಿ ಭಾಗಿಯಾಗಿದ್ದಾರೆಂದು ಹೇಳುವುದು ತಪ್ಪು.

**ಡಾ:ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಬಸ್ಸಿನಲ್ಲಿ ಪ್ರಯಾಣ ಮಾಡುವವರೆಲ್ಲರೂ ದಂಧೆಯಲ್ಲಿ ಭಾಗಿಯಾಗಿದ್ದಾರೆಂದು ಹೇಳುತ್ತಿಲ್ಲ. ಈ ರೀತಿ ತಪ್ಪು ಮಾಹಿತಿಯನ್ನು ಮಾನ್ಯ ಸಚಿವರು ಕೊಡಬಾರದು.

**ಸಭಾಪತಿಯವರು:-** ಮೊದಲು ಮಾನ್ಯ ಸಚಿವರು ಮಾತನಾಡಲಿ. ನಿಮಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ನೀಡಲಾಗಿದೆ ಅಲ್ಲವೇ?

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನನಗೆ ಈ ರೀತಿಯಾದಂತಹ ಯಾವುದೇ ದೂರು ಬಂದಿಲ್ಲ. ಅವರ ಹತ್ತಿರ ಏನಾದರೂ ಇದ್ದರೆ ಕಳುಹಿಸಿಕೊಡಲಿ. ಪರಿಶೀಲನೆ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಬಸ್ಸಿನಲ್ಲಿ ಪರದೆಯನ್ನು ಅಳವಡಿಸಬಾರದೆಂದು ಮಾನ್ಯ ಸದಸ್ಯರಾದ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ:ಜಯಮಾಲ ರಾಮಚಂದ್ರರವರು ಹೇಳುತ್ತಿದ್ದಾರೆ. ಕರ್ನಾಟಕ ಮೋಟಾರು ವಾಹನ ನಿಯಮ–1989 ರ ನಿಯಮ 153–ಎ ಉಪನಿಯಮ 8 ರ ಪ್ರಕಾರ ಸ್ಲೀಪರ್ ಬಸ್ಸುಗಳಿಗೆ ಪರದೆಗಳನ್ನು ಅಳವಡಿಸಬೇಕಾಗುತ್ತದೆ. ಸ್ಲೀಪರ್ ಬಸ್ಸುಗಳಲ್ಲಿ ಪ್ರಯಾಣಿಕರು ಮಲಗಿ ಪ್ರಯಾಣಿಸುವುದರಿಂದ ಅವರ ಖಾಸಗಿತನ (privacy) ಕಾಪಾಡಲು ಪರದೆಗಳನ್ನು ಅಳವಡಿಸಲಾಗಿದೆ. ಬಸ್ಸುಗಳಲ್ಲಿ ಗಂಡ–ಹೆಂಡತಿ ಪ್ರಯಾಣಿಸುತ್ತಿರುತ್ತಾರೆ. ಬೇರೆ ಜನರು ಪ್ರಯಾಣಿಸುತ್ತಿರುತ್ತಾರೆ. ಎಲ್ಲರೂ ಅನೈತಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆಂದು ಪರದೆಯನ್ನು ತೆಗೆದರೆ ನಾವು ಎಲ್ಲಿಗೆ ಹೋಗುವುದು? ಯಾರು ಇದರ ಬಗ್ಗೆ ತಿಳಿಸುತ್ತಾರೆ. ಒಂದೇ ದೃಷ್ಟಿಕೋನದಲ್ಲಿ ಹೇಳುತ್ತಿದ್ದಾರೆ. ಆ ರೀತಿ ದಂಧೆ ನಡೆಯತ್ತಿರತಕ್ಕಂಥದ್ದು ಮಾನ್ಯ ಸದಸ್ಯರ ಗಮನಕ್ಕೆ ಬಂದರೆ, ಖಂಡಿತ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ, ತೆಗೆದುಕೊಳ್ಳುತ್ತೇವೆ. ಬಸ್ಸು ಚಾಲಕ ಮತ್ತು ನಿರ್ವಾಹಕರು ಸೇರಿ ಮಾಡುತ್ತಿದ್ದಾರೆ ಎನ್ನುವುದಾದರೆ ಇಲ್ಲಿಯವರೆಗೂ ಆ ರೀತಿಯ ಯಾವುದೇ ದೂರು ನಮ್ಮ ಹತ್ತಿರ ಬಂದಿಲ್ಲ. ಯಾರದರೂ ದೂರನ್ನು ಕೊಟ್ಟರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ ಈಗಾಗಲೇ 800 ಬಸ್ಸುಗಳಿಗೆ ಸಿ.ಸಿ.ಟಿವಿ ಕ್ಯಾಮರಾಗಳನ್ನು ಅಳವಡಿಸುತ್ತಿದ್ದೇವೆ. ಸ್ಲೀಪರ್ ಕೋಚ್‌ಗಳಿಗೆ ಏಕೆ ಅಳವಡಿಸುವುದಿಲ್ಲವೆಂದರೆ, ಹವಾನಿಯಂತ್ರಿತ ಮತ್ತು ಹವಾನಿಯಂತ್ರಿತವಿಲ್ಲದ ಬಸ್ಸುಗಳಲ್ಲಿ ಪ್ರಯಾಣಿಕರು ನಿದ್ದೆ ಮಾಡಿಕೊಂಡು ಹೋಗುವಾಗ ಇಂತಹ ಯಾವುದೇ ಘಟನೆಗಳು ನಡೆದಿಲ್ಲ. ಏನೋ ಡಾ:ಜಯಮಾಲರವರು ಸಮಿತಿಯ ಅಧ್ಯಕ್ಷರಾಗಿದ್ದರೂ, ಅದರಿಂದಾಗಿ ಅವರಿಗೆ ಆ ರೀತಿ ಏನಾದರೂ ದೂರುಗಳು ಬಂದಿದರೆ ನಮಗೆ ಕಳುಹಿಸಿಕೊಡಲಿ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ಮೋಟಮ್ಮ**:– ಮಾನ್ಯ ಸಭಾಪತಿಯವರೇ, ಗಂಭೀರವಾದಂತಹ ವಿಚಾರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು**:– ದೂರು ಬಂದಿದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರಲ್ಲವೇ?

**ಶ್ರೀಮತಿ ಮೋಟಮ್ಮ**:– ಮಾನ್ಯ ಸಭಾಪತಿಯವರೇ, ದೂರನ್ನು ಕೊಡುವುದಲ್ಲ. ಇಂತಹ ಕೃತ್ಯಗಳು ನಡೆಯುತ್ತಿದೆ.

**ಸಭಾಪತಿಯವರು**:– ಆ ರೀತಿಯಾಗುತ್ತದೆಂದು ಮಾನ್ಯ ಸಚಿವರಿಗೆ ಗೊತ್ತೇ ಇಲ್ಲ.

**ಶ್ರೀ ಹೆಚ್.ಎಂ.ರೇವಣ್ಣ**:– ಮಾನ್ಯ ಸಭಾಪತಿಯವರೇ, ನಾವು ಅದನ್ನು ಕಂಡು ಹಿಡಿಯುವುದು ಹೇಗೆ ಎಂದು ಹೇಳಲಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಮೋಟಮ್ಮ**:- ಮಾನ್ಯ ಸಭಾಪತಿಯವರೇ, ನಡೆಯತಕ್ಕಂಥ ಘಟನೆಯ ಬಗೆಯೇ ಹೇಳುತ್ತಿದ್ದಾರೆ. ಅವರು ಸುಮ್ಮನೇ ಏಕೆ ಹೇಳುತ್ತಾರೆ?

(ಗೊಂದಲ)

**ಸಭಾಪತಿಯವರು**:- ಅದರ ಬಗ್ಗೆ ಮಾನ್ಯ ಸಚಿವರಿಗೆ ದೂರನ್ನು ನೀಡಿದರೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ. ದೂರೇ ಬರದಿದ್ದರೆ ಸಚಿವರು ಏನು ಮಾಡುತ್ತಾರೆ?

**ಶ್ರೀ ಹೆಚ್.ಎಂ.ರೇವಣ್ಣ**:- ಮಾನ್ಯ ಸಭಾಪತಿಯವರೇ, ಮಹಿಳೆಯರಿಗಾಗಿ ಸಿಂಗಲ್ ಸ್ಲೀಪರ್ ಕೋಚ್‌ನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ನಮಗೂ ಮಹಿಳೆಯರ ಬಗ್ಗೆ ಕಾಳಜಿ ಮತ್ತು ಮಹಿಳೆಯರ ರಕ್ಷಣೆ ಬಗ್ಗೆ ನಮಗೂ ಚಿಂತನೆ ಇದೆ. ಬಸ್ಸಿನಲ್ಲಿ ಸಿಂಗಲ್ ಸ್ಲೀಪರ್ ಕೋಚ್‌ನ ವ್ಯವಸ್ಥೆಯನ್ನು ಮಹಿಳೆಯರಿಗಾಗಿಯೇ ಮೀಸಲಿಟ್ಟಿದ್ದೇವೆ. ಅದಲ್ಲದೇ ಎರಡೂ ಸೀಟು ಇರುವಂತಹ ಕಡೆಗೆ ಮಹಿಳೆ ಬಂದರೆ, ಇನ್ನೊಂದು ಮಹಿಳೆಯರಿಗೆ ಕೊಡುವುದು. ಬೇರೆಯವರಿಗೆ ಕೊಡತಕ್ಕಂಥ ವ್ಯವಸ್ಥೆ ಇರುವುದಿಲ್ಲ. ಗಂಡ-ಹೆಂಡತಿ ಬಂದರೆ ಮಾತ್ರ ಎರಡು ಸ್ಲೀಪಿಂಗ್ ಸೀಟನ್ನು ಕೊಡುತ್ತೇವೆ. ಬೇರೆಯವರಿಗೆ ಕೊಟ್ಟು ಕಿರುಕುಳವಾಗಿರುವ ಬಗ್ಗೆ ಮಾನ್ಯ ಸದಸ್ಯರಾದ ಡಾ:ಜಯಮಾಲರವರು ತಿಳಿಸಿದರೆ ಅವರು ಹೇಳಿದ ಹಾಗೆ ಮಾಡುತ್ತೇನೆ.

**ಡಾ:ಜಯಮಾಲ ರಾಮಚಂದ್ರ**:- ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇವೆ. ಸಚಿವರು ಓದಿಕೊಳ್ಳಲಿ. ಸಚಿವರು ಉಡಾಫೆಯ ಉತ್ತರವನ್ನು ಕೊಟ್ಟಿದ್ದಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3875**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನಮ್ಮ ಗ್ರಾಮ ನಮ್ಮ ರಸ್ತೆಯೆಂದು ಗ್ರಾಮೀಣ ಭಾಗದ ಜನರಿಗೆ ಸರ್ವ ಋತು ರಸ್ತೆಯನ್ನು ಮಾಡಬೇಕೆಂದು ನಮ್ಮ ದೇಶದ ಮಾಜಿ ಪ್ರಧಾನಿಯವರಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅದೇ ಮಾದರಿಯಲ್ಲಿ ಕರ್ನಾಟಕ ಸರ್ಕಾರ ಸಹಿತ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯನ್ನು 2009-10ನೇ ಸಾಲಿನಲ್ಲಿ ಜಾರಿಗೆ ತಂದಿದ್ದಾರೆ. ಆದರೆ, ಒಟ್ಟು 2010-11ನೇ ಸಾಲಿನಲ್ಲಿ 17700.56 ಕಿಲೋ ಮೀಟರ್ ಉದ್ದ ರಸ್ತೆ ನಮ್ಮ ರಾಜ್ಯದಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆಯ ಯೋಜನೆಯಡಿ ಆಗಬೇಕಾಗಿತ್ತು. ಮಾನ್ಯ ಸಚಿವರು ಕೊಟ್ಟಂತಹ ಉತ್ತರದಲ್ಲಿ ಅಕ್ಟೋಬರ್ 2015 ರ ಅಂತ್ಯಕ್ಕೆ 12535.12 ಕಿಲೋ ಮೀಟರ್ ಉದ್ದ ರಸ್ತೆಗಳನ್ನು ಮಾಡಲಾಗಿದೆ. ಇನ್ನೂ ರಾಜ್ಯದಲ್ಲಿ 5165.42 ಕಿಲೋ ಮೀಟರ್ ರಸ್ತೆ ನಿರ್ಮಾಣವಾಗಬೇಕಾಗಿದೆ. ಈ ರಸ್ತೆಯನ್ನು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟು ಅವಧಿಯೊಳಗಾಗಿ ಸರ್ಕಾರ ಪೂರ್ಣಗೊಳಿಸುತ್ತದೆ? ಇವತ್ತಿನ ದಿನ ಏನಾಗಿದೆಯೆಂದರೆ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ನಮ್ಮ ದೇಶದಲ್ಲಿ ಬಹಳ ಯಶಸ್ವಿಯಾಗಿದೆ. ಆದರೆ, ನಮ್ಮ ಗ್ರಾಮ, ನಮ್ಮ ರಸ್ತೆ ಯೋಜನೆಯು ಎಲ್ಲೋ ಎಡವಿದೆ. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಒಂದು ಮಾರ್ಗಸೂಚಿ ಇದ್ದು, ಅದೇ ರೀತಿಯಲ್ಲಿ ಅದನ್ನು ತೆಗೆದುಕೊಂಡು, ಇದನ್ನು ಮಾಡಿದ್ದಾರೆಂಬುದನ್ನು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಆದರೆ, ಎಡಗಿರುವುದಕ್ಕೆ ಕಾರಣವೇನು? ಎಡಗಿರುವುದನ್ನು ಸರಿ ಮಾಡಿಕೊಂಡು ಉಳಿದಿರುವಂತಹ 5165.42 ಕಿಲೋ ಮೀಟರನ್ನು ಉದ್ದ ರಸ್ತೆಯನ್ನು ಎಷ್ಟು ದಿವಸದಲ್ಲಿ ಪೂರ್ಣಗೊಳ್ಳಿಸುತ್ತಾರೆಂದು ತಿಳಿಸಬೇಕು.

**ಶ್ರೀ ಎಚ್.ಕೆ.ಪಾಟೀಲ**:- ಮಾನ್ಯ ಸಭಾಪತಿಯವರೇ, ನಮ್ಮ ಬಸನಗೌಡ ಆರ್ ಪಾಟೀಲ್‌ರವರು ಪಂಚಾಯತ್ ರಾಜ್ ಸದನ ಸಮಿತಿಯಲ್ಲಿ ಈ ರಸ್ತೆಗಳ ವಿಚಾರದಲ್ಲಿ ಬಹಳಷ್ಟು ಆಸಕ್ತಿಯನ್ನು ವಹಿಸಿ ಅಧ್ಯಯನವನ್ನು ಮಾಡಿದ್ದಾರೆ ಹಾಗೂ ನಮ್ಮ ಅಧಿಕಾರಿಗಳಿಗೆ ಸಾಕಷ್ಟು ಮಾರ್ಗದರ್ಶನವನ್ನು ನೀಡಿ, ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡುವಾಗ ಬಹಳ ವಿಷಯವನ್ನು ತಿಳಿದುಕೊಂಡಿದ್ದಾರೆ. ಕಳೆದ 2012-13ನೇ ಸಾಲಿನಿಂದ ಇಲ್ಲಿಯವರೆಗೆ ತಮಗೂ ಗೊತ್ತಿರುವ ಹಾಗೆ 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯಡಿ ಕಳೆದ 5 ವರ್ಷಗಳಲ್ಲಿ 10898.58 ಕಿಲೋ ಮೀಟರ್ ಉದ್ದದ ರಸ್ತೆಗಳನ್ನು ನಿರ್ಮಾಣ ಮಾಡಿದ್ದೇವೆ. ಆದರೆ, ಮಾನ್ಯ ಸದಸ್ಯರು ನಾವು ಎಡವಿದ್ದೇವೆ, ವಿಳಂಬ ಮಾಡುತ್ತಿದ್ದೇವೆ ಎನ್ನುವಂತಹ ಆ ಒಂದು ವಿಶೇಷವಾದಂತಹ observation ಮಾಡುತ್ತಿದ್ದಾರೆ. ಆದರೆ ಅದು ವಾಸ್ತವ ಸ್ಥಿತಿಗೆ ಮಾನ್ಯ ಸದಸ್ಯರ ಅಭಿಪ್ರಾಯ ಸರಿ ಹೋಗುವುದಿಲ್ಲ. PMGSY (Pradhan Mantri Gram Sadak Yojana), ನಮ್ಮ ಗ್ರಾಮ ನಮ್ಮ ರಸ್ತೆ ಇವುಗಳನ್ನು ಪ್ರತ್ಯೇಕಪಡಿಸಿಯೇ ಅನುಬಂಧ-1, 2 ಮತ್ತು 3 ರಲ್ಲಿ ಆ ವಿವರಗಳನ್ನು ಕೊಟ್ಟಿದ್ದೇವೆ. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ 2010 ರಿಂದ 2013ನೇ ಸಾಲಿನವರೆಗೂ ಕೇವಲ 3714.00 ಕಿಲೋ ಮೀಟರ್ ರಸ್ತೆಯನ್ನು ಮಾತ್ರ ತೆಗೆದುಕೊಂಡು 12.83 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 2012-13ನೇ ಸಾಲಿನಲ್ಲಿ 5737.77 ಕಿಲೋ ಮೀಟರ್ ರಸ್ತೆಯನ್ನು ಮಾಡಲಾಗುವುದೆಂದು ಘೋಷಣೆ ಮಾಡಿ ರೂ.2413.86 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಭರಿಸಲಾಗಿದೆ. ಆದರೆ, ನಾವು 2013-14, 2014-15, 2015-16 ಮತ್ತು 2016-17ನೇ ಸಾಲುಗಳಲ್ಲಿ 9037.14 ಕಿಲೋ ಮೀಟರ್ ರಸ್ತೆಯನ್ನು ಮಾಡಿ ಮುಗಿಸಿದ್ದೇವೆ. 4401.00 ಕೋಟಿ ರೂಪಾಯಿಗಳನ್ನು ಈಗಾಗಲೇ ವಿನಿಯೋಗ ಮಾಡಿದ್ದೇವೆ ಎನ್ನುವುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ. ಆದಾಗ್ಯೂ ಈ ರಸ್ತೆ ಕೆಲಸ ಎಷ್ಟೇ ಮಾಡಿದರೂ ಹಳ್ಳಿ-ಗಾಡಿನ ಪ್ರದೇಶದಲ್ಲಿ ಕಡಿಮೆಯೇ. ಆದ್ದರಿಂದ ಸನ್ಮಾನ್ಯ ಶ್ರೀ ಈಶ್ವರ್ ಖಂಡ್ರೆ ನೇತೃತ್ವದಲ್ಲಿ ಗ್ರಾಮೀಣ ರಸ್ತೆ ನೀತಿಯನ್ನು ಮಾಡಬೇಕೆಂದು ಮಧ್ಯ ಪ್ರದೇಶ, ಗುಜರಾತ್, ಮಹಾರಾಷ್ಟ್ರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಒಂದೆರಡೂ ರಾಜ್ಯಗಳಿಗೆ ಹೋಗಿ ನೋಡಿಕೊಂಡು ಬಂದು ಒಂದು ನೀತಿಯನ್ನು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಮಂಜೂರಾತಿಯನ್ನು ಪಡೆದಿದ್ದೇವೆ. ಆ ನೀತಿಯಂತೆ ನಮಗೆ ಸುಮಾರು 78.00 ಸಾವಿರ ಕೋಟಿ ರೂಪಾಯಿಗಳು ಬೇಕಾಗಿದೆ. ನಮ್ಮ ಗ್ರಾಮೀಣ ಇಲಾಖೆಯೇ ಇವತ್ತಿನವರೆಗೂ 1 ಲಕ್ಷದ 55 ಸಾವಿರ ಕಿಲೋ ಮೀಟರ್ ರಸ್ತೆಯನ್ನು ನಿರ್ಮಾಣ ಮಾಡುತ್ತಿದ್ದೇವೆ.

(ಮುಂದು) . . .

(1056)/17.11.2017/12.10/ಎಸ್‌ಕೆ-ಆರ್‌ಎನ್

**ಶ್ರೀ ಎಚ್.ಕೆ. ಪಾಟೀಲ್ ಮುಂದು:-**

ನಮಲ್ಲಿರುವಂತಹ ಹಣ ಬಹಳ ಕಡಿಮೆ. ಕೇಂದ್ರ ಸರ್ಕಾರದವರು ಹೆದ್ದಾರಿ ರಸ್ತೆಗಳನ್ನು ಮಾಡುವುದಕ್ಕೆ ಹಣ ಕೊಡುತ್ತಾರೆ. ಆದರೆ, ಗ್ರಾಮೀಣ ರಸ್ತೆಗಳನ್ನು ಮಾಡುವುದಕ್ಕೆ ಹಣ ನೀಡುತ್ತಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ನಮ್ಮ ನೀತಿಯ ಜೊತೆಗೆ ಗ್ರಾಮೀಣ ರಸ್ತೆಗಳನ್ನು ಮಾಡುವುದಕ್ಕೆ ಹಣ ಕೊಡಬೇಕು. ಕನಿಷ್ಟ ಪಕ್ಷ 50:50 ಅನುಪಾತದಷ್ಟು ಹಣ ಕೊಡಬೇಕೆಂದು ಈಗಾಗಲೇ ನಾವು ಒತ್ತಡ ಮಾಡಬೇಕೆಂದು ನಿರ್ಣಯಿಸಿದ್ದೇವೆ. ಈ ಸಂದರ್ಭದಲ್ಲಿ ನಾನು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ನಮ್ಮ ಸರ್ಕಾರದ ಧ್ವನಿಗೆ ಈ ಸದನ ಸಹ ಬೆಂಬಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿಮ್ಮ ಪ್ರಶ್ನೆ ಏನಿದೆ ಎಂಬುದನ್ನು ಕೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೆ, ಅದೇ ಸಮಿತಿಯಲ್ಲಿ ಸದಸ್ಯನಾಗಿ ನಾನು ಕೆಲಸ ಮಾಡುತ್ತಿದ್ದೇನೆಂದು ಮಾನ್ಯ ಸಚಿವರು ಹೇಳಿದರು. ಸಾಕಷ್ಟು ಸಲ PMGSY (Pradhan Mantri Gram Sadak Yojana) guidelines ಅನ್ನು ನಾವು ಪಾಲಿಸುವುದಕ್ಕೆ ಆಗಿಲ್ಲ ಎನ್ನುವುದನ್ನು ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಇಲ್ಲಿ ಗುರಿ ಮುಟ್ಟುವುದಕ್ಕೆ ದೊಡ್ಡ ಸಮಸ್ಯೆ ಏನೆಂದರೆ, ಇಡೀ ರಾಜ್ಯಕ್ಕೆ ಒಂದೇ ಟೆಂಡರ್ ಅಂದರೆ, ಸಿಂಗಲ್ ಟೆಂಡರ್ ಮಾಡುತ್ತಾರೆ. ಪ್ರತಿ ಜಿಲ್ಲೆಯಲ್ಲೂ ಹೊಸ ಯುವ ಗುತ್ತಿಗೆದಾರರು ಇದ್ದಾರೆ. ಈಗಿನ ಸರ್ಕಾರದಲ್ಲಿ ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಇವತ್ತು ಟೆಂಡರ್‌ನಲ್ಲಿಯೂ ಮೀಸಲಾತಿ ಅವಕಾಶವನ್ನು ತಂದಿದ್ದೀರಿ. ಅಂತಹವರಿಗೆ ಸ್ಫೂರ್ತಿ ಮತ್ತು ಬೆಂಬಲ ಕೊಡುವುದಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಟೆಂಡರ್‌ಗಳನ್ನು ಮಾಡಿದರೆ ಸ್ಥಳೀಯ ಜನರಿಗೆ ಅವಕಾಶ ಸಿಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಒಂದೇ ಟೆಂಡರ್ ಬೇಡ ಎಂದು ನೀವು ಹೇಳಿರುವುದು ಸರಿಯಿದೆ. ಈ ವಿಚಾರದಲ್ಲಿ ಸರ್ಕಾರದ ಪಾಲಿಸಿ ಏನಿದೆ ಎಂಬುದನ್ನು ಕೇಳೋಣ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೆ, ಒಂದೇ ಟೆಂಡರ್ ಮಾಡಿದರೆ, ಅವರು ಅದನ್ನು sub-let ಮಾಡಿ ಕಳಪೆ ಕೆಲಸ ಮಾಡುತ್ತಾರೆ. ಅದರ ಬದಲಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಹೊಸ ಹೊಸ ಗುತ್ತಿಗೆದಾರರು ಬಂದಿರುವುದರಿಂದ ಅದನ್ನು ರಾಜ್ಯದಿಂದ ಜಿಲ್ಲೆ ಅಥವಾ ತಾಲ್ಲೂಕಿಗೆ ಇಳಿಸಿದರೆ, ನಿಶ್ಚಿತವಾಗಿಯೂ ನಮ್ಮ ರಾಜ್ಯದ ಜನರಿಗೆ ಅವಕಾಶವಾಗುತ್ತದೆ. ಇಲ್ಲವಾದರೆ ಇವರು ಯಾವುದೋ ರಾಜ್ಯದವರಿಗೆ ಟೆಂಡರ್ ಕೊಡುತ್ತಾರೆ. ಅವರು sub-let ಮಾಡಿ ಕಳಪೆ ಕೆಲಸ ಮಾಡುತ್ತಾರೆ.

**ಸಭಾಪತಿಯವರು**:- ನಿಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಲಿ, ನಿಮ್ಮ ಪ್ರಶ್ನೆಗೆ ಉತ್ತರ ಬೇಡವೇ?

**ಶ್ರೀ ಎಚ್.ಕೆ. ಪಾಟೀಲ್**:-ಮಾನ್ಯ ಸಭಾಪತಿಯವರೆ, ನಾವು ಒಂದೇ ಟೆಂಡರ್ ಕರೆಯುವುದಿಲ್ಲ. ಸುಮಾರು 500-600 ಪ್ಯಾಕೇಜ್‌ಗಳನ್ನು ಮಾಡಿದ್ದೇವೆ. ಪ್ಯಾಕೇಜುಗಳು ಮತ್ತು ಟೆಂಡರ್‌ಗಳನ್ನು ಮಾಡುವಾಗ ಈ PMGSY (Pradhan Mantri Gram Sadak Yojana) ನಿಯಮಾವಳಿಗಳು ಏನಿದೆಯೋ, ಆ ನಿಯಮಾವಳಿಗಳ ಹಿನ್ನಲೆಯನ್ನಿಟ್ಟುಕೊಂಡು ಮಾಡುತ್ತೇವೆ. ಅಷ್ಟೇ ಅಲ್ಲದೆ ನಮ್ಮ NGNR, 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆ ಅನುಷ್ಠಾನ ಮಾಡುವಾಗ ಸಹ ಅದೇ ನಿಯಮಾವಳಿಗಳನ್ನು ನಾವು ಪಾಲನೆ ಮಾಡುತ್ತೇವೆ.

ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಒಂದು ಮಾಹಿತಿಯನ್ನು ಕೊಡುತ್ತೇನೆ. ನಾವು ಈಗ ಒಂದೇ ಟೆಂಡರ್‌ನ್ನು ಮಾಡುತ್ತಿಲ್ಲ. Constituency-wise ಪ್ಯಾಕೇಜ್ ಮಾಡಿದ್ದೇವೆ. General, SCP/TSP ಬೇರೆ ಬೇರೆ ಮಾಡಿದ್ದೇವೆ. ಒಟ್ಟು 446 ಪ್ಯಾಕೇಜ್‌ಗಳನ್ನು NGNR ಯೋಜನೆಗಳಲ್ಲಿ ಮಾಡಿದ್ದೇವೆ.

**ಸಭಾಪತಿಯವರು**:-ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ: 4090**

**(ಉತ್ತರವನ್ನು ಒದಗಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಎಂದು ತಿಳಿಸಲಾಗಿದೆ. ಆಡಳಿತಾತ್ಮಕ ಅನುಮೋದನೆ ನೀಡಿದ ಮಾತ್ರಕ್ಕೆ ಹಣ ಬರುತ್ತದೆಯೆ? 'ಕಲ್ಲು ಹೊಡೆದರೆ, ಮರದಿಂದ ಮಾವಿನಕಾಯಿ ಬೀಳುತ್ತದೆ.' ಆದರೆ, 'ಮಂತ್ರ ಹಾಕಿದರೆ ಮಾವಿನಕಾಯಿ ಬಿಳುತ್ತದೆಯೇ?' ಇಲ್ಲ, ತಾನೇ. ದಿನಾಂಕ: 05-07-2017 ರಲ್ಲಿ 'ಕರೆಂಟ್ ಬಿಲ್ ಕಟ್ಟಲೂ ಹಣವಿಲ್ಲದ ಕನ್ನಡ ವಿಶ್ವವಿದ್ಯಾಲಯ' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿಯೊಂದು ಪತ್ರಿಕೆಯಲ್ಲಿ ಬಂದಿದೆ. ನಾನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಕನ್ನಡ ವಿಶ್ವವಿದ್ಯಾಲಯ ಎಂದರೆ ಅದಕ್ಕೇನು ಹಿಂದೆ ಇಲ್ಲ, ಮುಂದೆ ಇಲ್ಲ; ಅಪ್ಪ ಇಲ್ಲ, ಅಮ್ಮ ಇಲ್ಲ. ಯಾರಿಗೆ ಬೇಕು, ಕನ್ನಡ ವಿಶ್ವವಿದ್ಯಾಲಯ ಎನ್ನುವಂತೆ ಮಾಡಿಬಿಟ್ಟಿದ್ದೀರಿ. ಇದರ ಬಗ್ಗೆ ಆಸಕ್ತಿ ಇಟ್ಟುಕೊಂಡಿದ್ದೀರಾ ಎಂದರೆ, ಅಲ್ಲಿ ಕುಡಿಯುವ ನೀರಿನ ಯೋಜನೆ ಮಾಡುವುದಕ್ಕೆ ಅವಕಾಶವಿಲ್ಲ. ಅಲ್ಲಿ ಒಂದು ಕೊಳವೆ ಬಾವಿ ಕೊರೆಯಿಸುವುದಕ್ಕೆ ಮತ್ತು ವಿದ್ಯುತ್ ಬಿಲ್‌ನ್ನು ಕಟ್ಟುವುದಕ್ಕೆ ಸಹ ಹಣವಿಲ್ಲ. ಬೆಳ್ಳಿ-ಹಬ್ಬಕ್ಕೆ ಕೇಳಿರುವ ಹಣ ಬಜೆಟ್‌ನಲ್ಲಿದೆ, ಆದರೆ ಅದು ಬಿಡುಗಡೆ ಮಾಡಿಲ್ಲ.

**ಸಭಾಪತಿಯವರು**:- ಹಣ ಬಿಡುಗಡೆಯಾಗಿದೆಯೋ, ಇಲ್ಲವೋ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿರುವಂತಹ ಉತ್ತರವನ್ನು ನೋಡಿದರೆ, ಪತ್ರಿಕೆಯಲ್ಲಿ ಈ ವಿಚಾರ ವರದಿಯಾದ ನಂತರ, ಆ ಅನುದಾನವನ್ನು ಬಿಡುಗಡೆ ಮಾಡಿರುವುದು ಸ್ಪಷ್ಟವಾಗುತ್ತಿದೆ. ಇದು ದಿನಾಂಕ 04-07-2017 ಮತ್ತು ದಿನಾಂಕ 24-07-2017 ಹಾಗೂ ದಿನಾಂಕ 09-11-2017 ರಂದು ಹಣ ಬಿಡುಗಡೆ ಮಾಡಿದ್ದೀರಿ. ಬಹುಶಃ ಅಲ್ಲಿಗೆ ಅನುದಾನ ಹೋಗಿರಬಹುದು. ಆದರೆ ನನ್ನ ಪ್ರಶ್ನೆಯೇನೆಂದರೆ ಇವತ್ತಿಗೂ ಕೂಡ ಒಂದು ಬೋರ್‌ವೆಲ್ ತೆಗೆಯುವುದಕ್ಕೂ ಮತ್ತು ವಿದ್ಯುತ್ ಬಿಲ್ ಕಟ್ಟುವುದಕ್ಕೂ ಕೂಡ ಅಲ್ಲಿ ಹಣವಿಲ್ಲ ಎಂದು ಹೇಳುತ್ತಾರೆ. ಇದು ನಿಜವೋ ಅಥವಾ ಸುಳ್ಳೋ ಹೇಳಿ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಬೆಳ್ಳಿ-ಹಬ್ಬಕ್ಕೆ ಕೇಳಿದ 25 ಕೋಟಿ ರೂ. ಹಣದಲ್ಲಿ, ಅದನ್ನು ಕಡಿತ ಮಾಡಿದ್ದಾರೆಂದು ಸುದ್ದಿ ಬಂದಿತ್ತು. ಆ ಹಣವನ್ನು ಕಡಿತ ಮಾಡಿದ್ದೀರೋ, ಇಲ್ಲವೋ ಮತ್ತು ಶಾಶ್ವತ ಕುಡಿಯುವ ನೀರಿನ ಯೋಜನೆ ಪ್ರಸ್ತಾವನೆ ಯಾವ ವರ್ಷದಲ್ಲಿ ಅಯಿತು? ಅದು ಅಲ್ಲಿಗೆ ಇನ್ನೂ ಏಕೆ ಬರಲಿಲ್ಲ. ಇದನ್ನು ಬೇಕಾದರೆ ಮಾನ್ಯ ಸಚಿವರಿಗೆ ಕಳುಹಿಸುತ್ತೇನೆ. ಅವರಿಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇನೆ. ಅವರಿಗೆ ಕೆಲವು clarifications ಬೇಕಾಗಿದೆ. ಪ್ರಸಕ್ತ 2017-18 ನೇ ಸಾಲಿನಲ್ಲಿ ಈಗಾಗಲೇ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ರೂ. 1266 ಲಕ್ಷ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ದಿನಾಂಕ: 04-07-2017, 24-07-2017 ಮತ್ತು ದಿನಾಂಕ 09-11-2017 ಅಂದರೆ ಮೂರು ಕಂತುಗಳಲ್ಲಿ ಒಟ್ಟು 949.50 ಲಕ್ಷಗಳನ್ನು ಬಿಡುಗಡೆ ಮಾಡಿದ್ದೇವೆ. ಹಂಪಿ ವಿಶ್ವವಿದ್ಯಾಲಯ ಸ್ಥಾಪನೆಯಾಗಿ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೆಳ್ಳಿ-ಹಬ್ಬದ ಅಂಗವಾಗಿ ಮಾನ್ಯ ಮುಖ್ಯಮಂತ್ರಿಗಳು ಸುಮಾರು 25.00 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಈ ಆಯವ್ಯಯದಲ್ಲಿ ಒದಗಿಸಿದ್ದಾರೆ. ಅದರ ಜೊತೆಗೆ ಈಗಾಗಲೇ 25 ಕೋಟಿ ರೂಪಾಯಿಗಳನ್ನು ಏನೇನು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರದಲ್ಲಿ ಹಂಪಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಅಲ್ಲಿರುವ ಆಡಳಿತ ಮಂಡಳಿ ಏನು ತೀರ್ಮಾನ ಮಾಡಿದೆ, ಆ ತೀರ್ಮಾನದಂತೆ ಒಟ್ಟು ಏಳು ಕಾಮಗಾರಿಗಳನ್ನು ದಿನಾಂಕ: 30-05-2017 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆ ಪಡೆದು ರೂ.25.00 ಕೋಟಿಗಳನ್ನು ಒದಗಿಸಲಾಗಿದೆ. ಟೆಂಡರ್ ಕರೆಯುವುದು ನಾವಲ್ಲ, ವಿಶ್ವವಿದ್ಯಾಲಯದವರು ಟೆಂಡರ್ ಕರೆಯಬೇಕು.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೆ, ಟೆಂಡರ್ ಕರೆಯಬೇಕೆಂದರೆ ಹಣ ಬರಬೇಕಲ್ಲವೇ

**ಶ್ರೀ ಬಸವರಾಜ ರಾಯರಡ್ಡಿ**:- ಮಾನ್ಯ ಸಭಾಪತಿಯವರೆ, ಟೆಂಡರ್ ಕರೆಯಬೇಕೆಂದರೆ ಅದರ ವಿಧಾನ ಹೇಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. Estimate ಅನ್ನು prepare ಮಾಡಿ, ಅವರು ಯಾವ Agency ಎಂದು ಫಿಕ್ಸ್ ಮಾಡಿ ವಿಶ್ವವಿದ್ಯಾಲಯದವರು ನಮಗೆ ಕಡತವನ್ನು ಕಳುಹಿಸಿ ತಕ್ಷಣವೇ ಮೂರನೇ ಒಂದು ಭಾಗ ಹಣವನ್ನು ಬಿಡುಗಡೆಗೊಳಸಬೇಕೆಂದರೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ. ಆದರೆ ವಿಶ್ವವಿದ್ಯಾಲಯದವರು ಇನ್ನು ಅಂದಾಜು ಪತ್ರವನ್ನು ತಯಾರು ಮಾಡಿ ನಮಗೆ ಕಳುಹಿಸಿಲ್ಲ. ಆಡಳಿತಾತ್ಮಕ ಮಂಜೂರಾತಿ ಕೊಟ್ಟ ನಂತರ ಅವರು design ಇತ್ಯಾದಿಗಳನ್ನೆಲ್ಲಾ ಕಳುಹಿಸಿ ನಮಗೆ ಇಷ್ಟು ಹಣ ಬಿಡುಗಡೆ ಮಾಡಿ ಎಂದು ಕೇಳಿದರೆ ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಏನು ಅನುದಾನವನ್ನು ನಿಗದಿಪಡಿಸಿದ್ದಾರೆ, ಅದರಂತೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಇನ್ನುಳಿದಂತೆ ಕುಡಿಯುವ ನೀರು ಮತ್ತು ಸಣ್ಣಪುಟ್ಟ ಕಾಮಗಾರಿಯ ವಿಚಾರಗಳನ್ನು ಏನು ಹೇಳಿದ್ದೀರಿ, ಆ ವಿಚಾರಗಳ ಬಗ್ಗೆ ಆಯಾಯ ವಿಶ್ವವಿದ್ಯಾಲಯದವರು ಈ ಅಭಿವೃದ್ಧಿ ಅನುದಾನದಲ್ಲಿ ಅವಕಾಶ ಮಾಡಿಕೊಳ್ಳಬೇಕು. ಈ ಅಭಿವೃದ್ಧಿ ಅನುದಾನದಲ್ಲಿ ಅವಕಾಶ ಮಾಡಿಕೊಳ್ಳಲು ಸಾಲುವುದಿಲ್ಲವೆಂದರೆ, ಅದು ಬಹಳ ಅವಶ್ಯಕವಾದಂತಹ ವಿಚಾರವಿದ್ದರೆ, ಅಲ್ಲಿನ ಕುಲಪತಿಯವರು ಮತ್ತು ಆಡಳಿತ ಮಂಡಳಿಯವರು ಆ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ, ಅದನ್ನು ಪರಿಶೀಲನೆ ಮಾಡಿ ನಾವು ಸೂಕ್ತವಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಹಂಪಿ ವಿಶ್ವವಿದ್ಯಾಲಯದ ಕುಲಪತಿಯವರಾದ ಡಾ॥ ಮಲ್ಲಿಕಾ ಎಸ್. ಘಂಟಿಯವರು 'ಹಂಪಿ ಕನ್ನಡ ವಿಶ್ವವಿದ್ಯಾಲಕ್ಕೆ ರಾಜ್ಯ ಸರ್ಕಾರ ಈ ವರ್ಷ 4.5 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕಿತ್ತು. ಈವರೆಗೆ ಬಿಡುಗಡೆಯಾಗಿಲ್ಲ. ಕಳೆದ ಜೂನ್ ತಿಂಗಳ ವಿದ್ಯುತ್ ಶುಲ್ಕ ಪಾವತಿಸಲೂ ಹಣವಿಲ್ಲದಂತಾಗಿದೆ. ವಿಶ್ವವಿದ್ಯಾಲಯ ಅನುದಾನದ ಖಾತೆಯಲ್ಲಿ ಬರೀ 12 ಸಾವಿರ ರೂ. ಮಾತ್ರ ಉಳಿದಿದೆ' ಎಂದು ಹೇಳಿದ್ದಾರೆ. ಅವರೇ ಬೋರ್‌ವೆಲ್ ಕೊರೆಸಿಕೊಳ್ಳಬೇಕೆಂದರೆ, ಆ 12 ಸಾವಿರ ರೂಪಾಯಿಗಳಲ್ಲಿ ಏನು ಮಾಡಲು ಸಾಧ್ಯ. ಅದರಲ್ಲಿ ಅವರು ವಿದ್ಯುತ್ ಬಿಲ್ ಪಾವತಿಸುತ್ತಾರೆಯೋ ಅಥವಾ ಬೋರ್‌ವೆಲ್ ಕೊರೆಸುತ್ತಾರೆಯೋ, ನೀರಿನ ಘಟಕ ಸ್ಥಾಪನೆ ಮಾಡುತಾರೆಯೋ? ಅಷ್ಟು ಹಣದಲ್ಲಿ ಅವರು ಏನು ಮಾಡಲು ಸಾಧ್ಯ ಎಂದು ನೀವೇ ಹೇಳಿ. ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿ, ನೀನು ಮಹಾರಾಜ ಎಂದು ಪೇಟ ಹಾಕಿ ಸಿಂಹಾಸನದ ಮೇಲೆ ಕೂರಿಸಿಬಿಟ್ಟರೆ ಅವರು ಮಹಾರಾಜ ಆಗಿ ಬಿಡುತ್ತಾರೆಯೇ?

(ಮುಂದು...)

(1057)17.11.2017/12.20/ಟಿಸಿಹೆಚ್-ವಿಕೆ

**ಶ್ರೀ ರಾಮಚಂದ್ರ ಗೌಡ (ಮುಂದು)**

ನೀವು ಅವರಿಗೆ ಕೊಡಬೇಕಾಗಿರುವುದನ್ನು ಸಾರಾಸಗಟಾಗಿ ಕೊಟಿದ್ದೀರಾ? ನೋಡಿ, ಕನ್ನಡ ವಿಶ್ವವಿದ್ಯಾನಿಲಯವನ್ನು ನೀವು ಲಘುವಾಗಿ ತೆಗೆದುಕೊಳ್ಳಬೇಡಿ. ನೀವು ಅದನ್ನು ಲಘುವಾಗಿ ಪರಿಗಣಿಸಿದಲ್ಲಿ ನೀವು ಕನ್ನಡವನ್ನು ಉಳಿಸಬೇಕು, ಉಳಿಸಬೇಕು ಎಂದರೆ ಎಲ್ಲಿ ಉಳಿಸುತ್ತೀರಿ? ಕೊಡಲಿ, ಕೊಡಲಿ ಅವರು ಉತ್ತರ ಕೊಡಲಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರ ಕಳಕಳಿಯನ್ನು ನಾನು ಬೆಂಬಲಿಸುತ್ತೇನೆ. ಆದರೆ, ಅವರು ಯಾವುದೋ ಒಂದು ದಿನಪತ್ರಿಕೆಯಲ್ಲಿ ಬಂದಿರುವಂತಹ ವಿಚಾರವನ್ನು ಓದುತ್ತಿದ್ದಾರೆ. ಅದರ ಬದಲಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು, ಸರ್ಕಾರಕ್ಕೆ ಪತ್ರ ಬರೆದಿದ್ದರೆ ಅಥವಾ ತಮಗೆ ಏನಾದರೂ ಒಂದು ಪ್ರತಿಯನ್ನು ಕಳುಹಿಸಿದ್ದರೆ ಆ ಪ್ರತಿಯನ್ನು ನನಗೆ ಕಳುಹಿಸಿಕೊಟ್ಟರೆ, ನಾನು ಅದನ್ನು ಪರಿಶೀಲನೆ ಮಾಡಿ, ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಪ್ರಕಾರ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಪತ್ರಿಕೆಯಲ್ಲಿ ಯಾವುದೋ ವಿಚಾರವನ್ನು ಹೇಳಿರುತ್ತಾರೆ, ಏನೋ ವಿಷಯವನ್ನು ಬರೆದಿರುತ್ತಾರೆ. ಅದನ್ನು ತಾವು ಓದಿದರೆ ಹೇಗೆ? ಮಾನ್ಯ ಸದಸ್ಯರು ಸಚಿವರಾಗಿ ಕೆಲಸ ಮಾಡಿರುವಂತಹವರು. ಅವರಿಂದ ಒಂದು ಪತ್ರ ತರಿಸಿಕೊಂಡು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಕನ್ನಡ ವಿಶ್ವವಿದ್ಯಾನಿಲಯಕ್ಕೆ ಈ ವರ್ಷ 25 ಕೋಟಿ ರೂಪಾಯಿಗಳ ವಿಶೇಷ ಹಣವನ್ನು ನಮ್ಮ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ. ನಾವು ಕನ್ನಡ ಭಾಷೆ ಮತ್ತು ಕನ್ನಡದ ವಿಚಾರದಲ್ಲಿ ನಿಮ್ಮೆಲ್ಲರಿಗಿಂತಲೂ ಅತ್ಯಂತ ಹೆಮ್ಮೆಯಿಂದ ಇದ್ದೇವೆ. ಆದ್ದರಿಂದ ತಾವು ದಯಮಾಡಿ ನಮಗೆ ಸಹಾಯ ಮಾಡಬೇಕಾಗಿರುವುದು ಬಹಳ ಅಗತ್ಯವಾಗಿದೆ. ತಾವು ಅದನ್ನು ತರಿಸಿಕೊಡಿ, ಇಲ್ಲದಿದ್ದರೆ ನಾನೇ ವೈಯಕ್ತಿಕವಾಗಿ ನಾಳೆ ಸೋಮವಾರದಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಅನುಮತಿಯೊಂದಿಗೆ ಒಂದು ಸಭೆಗೆ ಹೋಗುತ್ತಿದ್ದೇನೆ. ಆಗ ಈ ವಿಚಾರವನ್ನು ಅಲ್ಲಿ ಪ್ರಸ್ತಾಪ ಮಾಡಿ, ನೋಡಮ್ಮ, ನಿಮ್ಮ ಶ್ರೀ ರಾಮಚಂದ್ರಗೌಡರವರು ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಸದನದಲ್ಲಿ ಹೇಳಿದ್ದಾರೆ. ಇನ್ನೇನಾದರೂ ನಿಮಗೆ ಸಮಸ್ಯೆಗಳು ಇದ್ದರೆ, ಒಂದು ಪತ್ರವನ್ನು ಕೊಡಿ, ನಾನು ಆ ಮನವಿಯನ್ನು ಪರಿಶೀಲನೆ ಮಾಡಿ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತಿನೊಂದಿಗೆ ತಮಗೆ ಭರವಸೆಯನ್ನು ಕೊಡುತ್ತೇನೆ.

**ಸಭಾಪತಿಯವರು**:- ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 4124**
**(ಉತ್ತರ ಲಗತ್ತಿಸಿದೆ)**

**ಶ್ರೀ ಆರ್.ಧರ್ಮಸೇನ**:- ಮಾನ್ಯ ಸಭಾಪತಿಯವರೇ, ನಾನು ಮೈಸೂರು ಜಿಲ್ಲೆಯಲ್ಲಿ ಚರ್ಚಗಳ ರಿಪೇರಿ ಮತ್ತು ನವೀಕರಣಕ್ಕಾಗಿ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 1 ಕೋಟಿ 60 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಬಿಡುಗಡೆ ಮಾಡಿರುವ ಹಣ ತುಂಬಾ ಕಡಿಮೆಯಾಗಿದೆ ಎಂದು ನನಗೆ ಅನ್ನಿಸುತ್ತಿದೆ. ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತಾ, ನಮ್ಮ ಟಿ.ನರಸೀಪುರ ಪಟ್ಟಣದ ಯೇಸು ಬಾಲರ ಚರ್ಚ್ ನವೀಕರಣಕ್ಕಾಗಿ ಅನುದಾನ ಕೋರಿ, ನಾನು ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಕೊಟ್ಟಿದ್ದೆನು. ಇದು ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲೂ ಕೂಡ ಬರುತ್ತದೆ. ಇದು ತಾಲ್ಲೂಕಿನಲ್ಲಿ ಇರುವುದರಿಂದ, ತಾವು ಸಣ್ಣ ಸಣ್ಣ ಹಳ್ಳಿಗಳಿಗೆಲ್ಲಾ ಸುಮಾರು 40 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಆದರೆ ಈ ಚರ್ಚ್ ತಾಲ್ಲೂಕಿನಲ್ಲಿ ಇರುವಂಥದ್ದು ಮತ್ತು ಸುತ್ತಮುತ್ತಲಿನ ಜನ ಅಲ್ಲಿಗೆ ಬರುತ್ತಿರುತ್ತಾರೆ. ಈ ಚರ್ಚ್ ತುಂಬಾ ಹಳೆಯದಾಗಿದ್ದು, ಚರ್ಚ್‌ನ ರಿಪೇರಿ ಕೆಲಸ ಅಪೂರ್ಣವಾಗಿದೆ. ಇದನ್ನು ಸಂಪೂರ್ಣವಾಗಿ ಅಂದಾಜು ಪಟ್ಟಿ ತಯಾರಿಸಿ, ಯೋಜನೆ ರೂಪಿಸಿ, ನವೀಕರಣ ಮತ್ತು ರಿಪೇರಿ ಕೆಲಸಕ್ಕೆ ಮಾನ್ಯ ಸಚಿವರು ಯಾವುದೋ ಅನುದಾನವನ್ನು ಕೊಡುವುದಲ್ಲ, ಇದಕ್ಕೆ ಪೂರ್ತಿ ಹಣವನ್ನು ಬಿಡುಗಡೆ ಮಾಡಿ, ಅಭಿವೃದ್ಧಿ ಕೆಲಸವನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ನಾವು ಈಗಾಗಲೇ ಚರ್ಚ್‌ಗಳನ್ನು ದುರಸ್ಥಿ ಮಾಡುವುದಕ್ಕೆ ಒಂದು ಮಾನದಂಡವನ್ನು ಮಾಡಿಕೊಂಡಿದ್ದೇವೆ. ಹತ್ತು ವರ್ಷದೊಳಗೆ ಇರುವಂತಹ ಕಟ್ಟಡಕ್ಕೆ ನಾವು ಯಾವುದೇ ಅನುದಾನ ಕೊಡುತ್ತಿಲ್ಲ. 11 ವರ್ಷದಿಂದ 25 ವರ್ಷದವರೆಗೆ ಇರುವ ಚರ್ಚ್‌ಗಳಿಗೆ, 10 ಲಕ್ಷ ರೂಪಾಯಿಗಳವರೆಗೆ ಅನುದಾನವನ್ನು ಕೊಡಬಹುದು ಎಂದು ನಿಗದಿಮಾಡಿ ಮಾಡಿದ್ದೇವೆ. ಮಾನ್ಯ ಸದಸ್ಯರು ಈ ಬಗ್ಗೆ ಪ್ರಸ್ತಾಪ ಕಳುಹಿಸಿದಂತಹ ಸಂದರ್ಭದಲ್ಲಿ ನಾವು ಅದನ್ನು ಪರಿಶೀಲನೆ ಮಾಡಿ ಕೊಡುತ್ತೇವೆ. ಎರಡನೆಯದು, ಬಿಡುಗಡೆ ಮಾಡಿರುವ ಹಣ ಬಹಳ ಕಡಿಮೆ ಎಂದು ಹೇಳಿದರು. ಸರ್ಕಾರ ಆಯವ್ಯಯದಲ್ಲಿ ಕೊಡುವಂತಹ ಹಣವನ್ನು ನಾವು ಇಡೀ ರಾಜ್ಯಕ್ಕೆ ಕೊಡಬೇಕಾಗಿರುತ್ತದೆ. ಇಡೀ ರಾಜ್ಯದಾದ್ಯಂತ 2014-15ರಲ್ಲಿ 149 ಸಂಸ್ಥೆಗಳಿಂದ ಸ್ವೀಕರಿಸಿದಂತಹ 149 ಅರ್ಜಿಗಳಲ್ಲಿ, 125 ಸಂಸ್ಥೆಗಳಿಗೆ ನಾವು ಹಣ ಬಿಡುಗಡೆ ಮಾಡಿದ್ದೇವೆ. ಒಟ್ಟು 16 ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದ್ದೇವೆ. ಅದೇ ರೀತಿ 2016-17ನೇ ಸಾಲಿನಲ್ಲಿ 313 ಅರ್ಜಿಗಳು ಬಂದಿದ್ದು, 188 ಸಂಸ್ಥೆಗಳಿಗೆ ನಾವು 34 ಕೋಟಿ ರೂಪಾಯಿಗಳನ್ನು ಈವರೆವಿಗೂ ಬಿಡುಗಡೆ ಮಾಡಿದ್ದೇವೆ. ಅರ್ಧ ವರ್ಷಕ್ಕೆ 2 ಎರಡು ಕಂತುಗಳಲ್ಲಿ ಬಂದಿರುವಂಥ ಅನುದಾನದಲ್ಲಿ 16 ಕೋಟಿ ರೂಪಾಯಿಗಳನ್ನು ಈವರೆಗೆ ವ್ಯಯ ಮಾಡಿದ್ದೇವೆ. ಅದರಲ್ಲೂ ಮಾನ್ಯ ಸದಸ್ಯರು ಟಿ.ನರಸೀಪುರದ ಚರ್ಚ್ ವಿಚಾರದಲ್ಲಿ ಕೇಳುತ್ತಿದ್ದಾರೆ. ಆ ಕೂಡಲೇ ನಾನು ಮಾನದಂಡಕ್ಕೆ ಅನುಗುಣವಾಗಿ ಪರಿಶೀಲನೆ ಮಾಡಿ, ನಾನು ಮಾಡಿಸಿ ಕೊಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 4044**
**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಆದರೆ ಈ ಉತ್ತರದಿಂದ ನಮಗೇನು ಸಮಾಧಾನ ತಂದಿಲ್ಲ.

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರವರೆ, ತಮ್ಮ ಪ್ರಶ್ನೆ ಕೇಳಿಬಿಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, 1995ರ ಮುಂಚಿನ ಅನುದಾನಕ್ಕೆ ಒಳಪಡುವಂತಹ ಎಲ್ಲಾ ಕಡತಗಳು ಜಿಲ್ಲಾ ಮಟ್ಟದ ತ್ರಿ-ಸದಸ್ಯ ಸಮಿತಿಯಲ್ಲಿ ಶಿಫಾರಸ್ಸಾಗಿ ಬರುತ್ತವೆ. ಈಗಾಗಲೇ ಶಿಫಾರಸ್ಸಾಗಿ ಬಂದಿರುವಂತಹ ಶೇ.90 ಭಾಗ ಕಡತಗಳನ್ನು ವಿಲೇವಾರಿ ಮಾಡಿ, ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಈಗ ಮಾನ್ಯ ಸಚಿವರೇ ಮಾಹಿತಿ ಕೊಟ್ಟಿರುವಂತೆ, ಸುಮಾರು 319 ಪ್ರಾಥಮಿಕ ಶಾಲೆಗಳು, 210 ಪ್ರೌಢ ಶಾಲೆಗಳು ಮತ್ತು 108 ಪದವಿಪೂರ್ವ ಕಾಲೇಜುಗಳಷ್ಟೇ ಉಳಿದುಕೊಂಡಿವೆ. ಇವರು ಕೊನೆಯ ಹಂತದಲ್ಲಿ ಏನು ಮಾಡಿದ್ದೀರೆಂದರೆ, ನಿಯಮಾವಳಿಗಳನ್ನು ಬದಲಾಯಿಸಿದ್ದಾರೆ. 2007ರಲ್ಲಿ ಅನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಅಂದು ಶ್ರೀ ಬಸವರಾಜ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದರು. ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಯಾಗಿದ್ದರು ಮತ್ತು ಶ್ರೀ ಬಿ.ಎಸ್.ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದರು. ಶಾಶ್ವತ ಅನುದಾನ ಎನ್ನುವುದನ್ನು ತೆಗೆದು ಹಾಕಿ, 1995ರ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿ, ಹೆಚ್ಚುವರಿಯಾಗಿ ಸುಮಾರು 50 ಕೋಟಿ ರೂಪಾಯಿಗಳ ಇಡಿಗಂಟನ್ನು ಸಹ ಇಟ್ಟಿದ್ದರು. ಅಂದು ಹೊರಡಿಸಿರುವ ಸುತ್ತೋಲೆಯಲ್ಲಿ ಇರುವಂತೆ ಅನುದಾನ ಬಿಡುಗಡೆ ಮಾಡಿ, ಸತತವಾಗಿ ನಡೆದುಕೊಂಡು ಬಂದಿದ್ದರೆ ಅನುಕೂಲವಾಗುತ್ತಿತ್ತು. ಇದರ ಫಲಿತಾಂಶ ಉಳಿದ infrastructure ಗೆ ಮೂರು ವರ್ಷಗಳ ಕಾಲಾವಕಾಶ ಕೊಡಿ ಎಂದು ಸುತ್ತೋಲೆಯನ್ನು ಹೊರಡಿಸಿದ್ದರು. ಈಗ ಆ ಸುತ್ತೋಲೆಯನ್ನು ಮೂಲೆಗುಂಪು ಮಾಡಿ, ಸತತವಾಗಿ 5 ವರ್ಷಗಳ ಫಲಿತಾಂಶ ಜಿಲ್ಲಾವಾರು ಇದ್ದಷ್ಟೇ ಇರಬೇಕು ಎನ್ನುವುದಾದರೆ ಆ ಶಾಲೆಗಳ ಪರಿಸ್ಥಿತಿ ಏನು? ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಆಡಳಿತ ಮಂಡಳಿಯವರು ಅವರಿಗೆ ವೇತನವನ್ನು ಕೊಡುತ್ತಿಲ್ಲ. ನೀವು ಅನುದಾನ ಪಡೆದುಕೊಳ್ಳಿ ಎಂದು ಹೇಳುತ್ತಾರೆ. ಅವರು ಶಾಲೆಯ ಫಲಿತಾಂಶ ನೋಡಿ ಅವರನ್ನು ವಾಪಸ್ಸು ಕಳುಹಿಸುತ್ತಿದ್ದರು. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಸಭೆಯಲ್ಲಿ ಏನನ್ನು ಒಪ್ಪಿಕೊಂಡರು ಎಂದರೆ, ಹೌದು, ಆ ನಿಯಮಗಳನ್ನು ಸಡಿಲಿಕೆ ಮಾಡಿ, ಈ ಹಿಂದೆ ಕೊಟ್ಟಿರುವಂತಹ ಎಲ್ಲಾ ಸಂಸ್ಥೆಗಳ ರೀತಿಯಲ್ಲಿ ಇವುಗಳಿಗೆ ಅನುದಾನ ಬಿಡುಗಡೆ ಮಾಡುತ್ತೇವೆಂದು ಒಪ್ಪಿಕೊಂಡರು. ಆದರೆ ತಾವು ಈಗೇನು ಉತ್ತರವನ್ನು ಕೊಟ್ಟಿದ್ದೀರಿ, ಅದನ್ನು ತಾವು ದಯಮಾಡಿ ನೋಡಿ, "ಮಾನದಂಡಗಳ ಸಡಿಲಿಕೆ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲ" ಎಂದು ಹೇಳಿದ್ದೀರಿ. ಅಂದರೆ ಇದರ ಅರ್ಥ ಏನು? ಈ 600 ಕ್ಕೂ ಹೆಚ್ಚಿನ ಸಂಸ್ಥೆಗಳನ್ನು ಹೀಗೆಯೇ ಬಿಡಬೇಕೇ? ಅವರು ವೇತನ ಇಲ್ಲದೆಯೇ ಕೆಲಸ ಮಾಡಬೇಕೆ? ಆಡಳಿತ ಮಂಡಳಿಯವರು ಅವರಿಗೆ ವೇತನವನ್ನು ಕೊಡುವುದಿಲ್ಲ. ನೀವು ಅವರು ವೇತನಕ್ಕೆ ಅರ್ಹತೆ ಹೊಂದಿದ್ದರೂ ಕೂಡ ವೇತನವನ್ನು ಈಗಾಗಲೇ ಶೇ.90 ಭಾಗ ಬಿಡುಗಡೆ ಮಾಡಿದ್ದೀರಿ. ಈ 10 ಸಂಸ್ಥೆಗಳನ್ನು ನಂತರಕ್ಕೆ ಬಿಟ್ಟಿದ್ದೀರಿ. ಅಲ್ಲಿನ ಶಿಕ್ಷಕರಲ್ಲಾ ಏನಾಗಬೇಕು? ಇನ್ನು ಒಂದು ಸತ್ಯವನ್ನು ನಾನು ನಿಮಗೆ ಹೇಳುತ್ತೇನೆ. " ಈಗಾಗಲೇ ಬಹುಪಾಲು ಕನ್ನಡ ಶಾಲೆಗಳು ಮುಚ್ಚಿಹೋಗಿವೆ".

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರವರೇ, ತಮ್ಮ ಪ್ರಶ್ನೆ ಏನು? What is your demand?

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುವಂತೆ, ಈ ಹಿಂದೆ ಅನುದಾನ ಬಿಡುಗಡೆ ಸಂದರ್ಭದಲ್ಲಿ ಇವರೇ ಕೊಟ್ಟಂತಹ ಸುತ್ತೋಲೆಯ ಪ್ರಕಾರ, ಈ ಎಲ್ಲಾ ಸಂಸ್ಥೆಗಳನ್ನು ಶಿಫಾರಸ್ಸಾಗಿ ಕೆಳಮಟ್ಟದಿಂದ ಬಂದಿದ್ದಾವೆಯೋ ಆ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಬೇಕು, ಅನುದಾನಕ್ಕೆ ಒಳಪಡಿಸಬೇಕು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಯಮಾಡಿ ಅದನ್ನು ಎಷ್ಟು ದಿನಗಳಲ್ಲಿ ಮಾಡುತ್ತೀರೆಂದು ತಾವು ತಿಳಿಸಬೇಕು ಹಾಗೂ ಈಗ ತಾವು ಕೊಟ್ಟಿರತಕ್ಕಂತಹ ಉತ್ತರವನ್ನು ತಾವು ದಯಮಾಡಿ ವಾಪಸ್ಸು ಪಡೆದುಕೊಳ್ಳಬೇಕು.

**ಸಭಾಪತಿಯವರು**:- ಈಗ ಆ ವಿಚಾರದ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಸದನದ ಗೌರವಾನ್ವಿತ ಸದಸ್ಯರಿಗೆ ಈ ವಿಚಾರ ಹೊಸದೇನು ಅಲ್ಲ. ಅನುದಾನ ಬಿಡುಗಡೆ ಮಾಡುವುದಕ್ಕೆ ಈ ಸದನವೇ ಒಪ್ಪಿಕೊಂಡಿರುವಂತಹ ಕೆಲವು ನಿಯಮಗಳನ್ನು ಇವತ್ತಿನ ದಿವಸ ನಾವು ನಮ್ಮ grant-in-aid policy ಪ್ರಕಾರ ಮಾಡುತ್ತಾ ಬಂದಿರುವುದು ನಿಜ. 1987ರಿಂದ 1995 ರವರೆಗೆ ಈವರೆಗೂ ನಮ್ಮ ನಿಯಮಾವಳಿಗೆ ಅನುಗುಣವಾಗಿ ಬರುವಂತಹ ಎಲ್ಲಾ ಅನುದಾನಿತ ಸಂಸ್ಥೆಗಳನ್ನು ನಾವು ಅನುದಾನಕ್ಕೆ ಒಳಪಡಿಸಿದ್ದೇವೆ. ಇದರ ಜೊತೆಗೆ ನಿರಂತರವಾಗಿ ನಿವೃತ್ತಿ, ರಾಜೀನಾಮೆ ಅಥವಾ ಮರಣದಿಂದ ಖಾಲಿಯಾಗುವಂತಹ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಈಗ ನಮ್ಮ ಮುಂದೆ ಕೆಲವೊಂದು ಸಂಸ್ಥೆಗಳು ಉಳಿದುಕೊಂಡಿವೆ. ಈ ರೀತಿ ಉಳಿದುಕೊಂಡಿರುವಂತಹ ಸಂಸ್ಥೆಗಳಿಗೆ 2007ರಲ್ಲಿ ಮಾಡಿದಂತಹ ನಿಯಮಾವಳಿಗಳು ಮತ್ತು 2012ರಲ್ಲಿ ಮಾಡಿದಂತಹ ತಿದ್ದುಪಡಿಗಳು ಇವತ್ತಿನ ದಿವಸ ಜಾರಿಯಲ್ಲಿರುವಂತಹ ವಿಚಾರವಾಗಿದೆ. ನಾವು ಅಧಿಕಾರಕ್ಕೆ ಬಂದ ಮೇಲೆ ಅದನ್ನು ಯಾವುದೇ ರೀತಿಯಲ್ಲೂ ತಿದ್ದುಪಡಿ ಮಾಡುವುದು ಅಥವಾ ಬೇರೆ ರೀತಿಯಲ್ಲಿ ಮಾಡುವಂಥದ್ದು ಆಗಿಲ್ಲ. ದಿನಾಂಕ:15.10.2017 ಮತ್ತು 27.10.2015ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲೇ ನಡೆದಂತಹ ಸಭೆಯಲ್ಲಿ ಯಾವ್ಯಾವುದು ಪರಿಶೀಲನೆ ಮಾಡುವುದಕ್ಕೆ ಇದೆ ಅದನ್ನು ತುರ್ತಾಗಿ ಮಾಡುವಂಥದ್ದಕ್ಕೂ ಒಪ್ಪಿಕೊಂಡಿದ್ದೇವೆ. ಈ ಹಂತದಲ್ಲಿ ಯಾವುದೇ ನಿಯಮಾವಳಿಗಳನ್ನು ಬದಲಾವಣೆ ಮಾಡುವಂತಹ ವಿಚಾರ ನಮ್ಮ ಮುಂದೆ ಇಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ನೀವು ಝುಚಿಟಡಜ ಮಾಡಿದ್ದೀರಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಒಂದು ನಿಮಿಷ. ಅದಾಗಿಯೂ ಕೂಡ ರಾಜ್ಯ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಇವತ್ತು ಸಚಿವ ಸಂಪುಟದಲ್ಲಿ ಒಂದು ಉಪ ಸಮಿತಿ ಮಾಡಿದೆ. ಆ ಉಪ ಸಮಿತಿಯಲ್ಲಿ ಎಲ್ಲಾ ಅಂಶಗಳನ್ನು ಕೂಡ ಚರ್ಚೆ ಮಾಡುತ್ತಿದ್ದೇವೆ. ಅದು ಅಂತಿಮವಾದಂತಹ ಸಂದರ್ಭದಲ್ಲಿ ಅದಕ್ಕೆ ಒಂದು ಹೊಸ ರೂಪವನ್ನು ಕೊಟ್ಟು, ಅನುದಾನಕ್ಕೆ ಒಳಪಡಿಸುವಂತಹ ಸಂಸ್ಥೆಗಳು ಯಾವ್ಯಾವು ಇವೆ, ಅವುಗಳಿಗೆ ತುರ್ತು ರೀತಿಯಲ್ಲಿ ಮಾಡುವುದಕ್ಕೆ ಮುಂದಾಗುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉನ್ನತ ಕಾಲೇಜುಗಳಿಗೆ ಪ್ರಥಮ ದರ್ಜೆ ಕಾಲೇಜುಗಳ ಅನುದಾನವನ್ನು ವಿಸ್ತರಿಸಬೇಕು ಎನ್ನುವ ವಿಚಾರ ಸಚಿವ ಸಂಪುಟದ ಮುಂದೆ ಇರುತ್ತದೆ. ಈ ವಿಚಾರದಲ್ಲಿ ಈಗಾಗಲೇ ಈ ಹಿಂದೆ ಅನುದಾನ ಬಿಡುಗಡೆಯಾದಂತಹ ಸಂದರ್ಭದಲ್ಲಿ ಮಾಡಿದಂತಹ ನಿಯಮಾವಳಿಗಳಿಗೆ ತಾವು ಬದಲಾವಣೆಯನ್ನು ಏತಕ್ಕೆ ತಂದಿರಿ? ತಾವು ಶೇ.90 ಭಾಗ ಈಗಾಗಲೇ ಅನುದಾನ ಕೊಟ್ಟುಬಿಟ್ಟಿದ್ದೀರಿ. ಇನ್ನು ಶೇ.10 ಭಾಗ ಸಂಸ್ಥೆಗಳು ಉಳಿದಿವೆ. ಇವೆಲ್ಲಾ ಕನ್ನಡ ಶಾಲಾ ಕಾಲೇಜುಗಳಾಗಿವೆ. ಇವುಗಳ ಕತ್ತು ಹಿಸುಕುವ ಪ್ರಶ್ನೆ ಬೇಡ. ಈಗ ಸಾವಿರಾರು ಶಿಕ್ಷಕರು ಬೀದಿಗೆ ಬಂದಿದ್ದಾರೆ. ನೀವು ಅನುದಾನವನ್ನು ಕೊಡದೆಯೇ, ಆಡಳಿತ ಮಂಡಳಿಯವರು ಅವರಿಗೆ ಸಂಬಳ ಕೊಡದಿದ್ದರೆ, ಅವರು ಎಲ್ಲಿಗೆ ಹೋಗಬೇಕು. ಇದಕ್ಕೆ ಈಗ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಅನುದಾನಕ್ಕೆ ಒಳಪಟ್ಟಂತಹ ಸಂಸ್ಥೆಗಳು grant-in-aid ಸಂಸ್ಥೆಗಳಾಗಿವೆ. ಅನುದಾನಕ್ಕೆ ಒಳಪಡದಿದ್ದರೆ ಅವು ಖಾಸಗಿ ಸಂಸ್ಥೆಗಳಾಗಿವೆ.

**(ಮುಂದು. . .)**

**(1058)17.11.2017/12.30/ಎಂ.ಎಂ/ವಿ.ಕೆ**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ತಪ್ಪು ಮಾಹಿತಿಯನ್ನು ಕೊಡಬೇಡಿ. ಅವು ಅನುದಾನಕ್ಕೆ ಅರ್ಹತೆಯಿರುವ ಶಾಲಾ ಕಾಲೇಜುಗಳಾಗಿವೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಈ ಸದನದಿಂದ ತಪ್ಪು ಸಂದೇಶವನ್ನು ಕಳುಹಿಸುವುದು ಬೇಡ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ತಪ್ಪು ಸಂದೇಶ ಕಳುಹಿಸುತ್ತಿರುವುದು ಮಾನ್ಯ ಸಚಿವರು, ನಾವಲ್ಲ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ನಾವು ಏನು ಚರ್ಚೆ ಮಾಡಿದ್ದೇವೆ ಅದರ ಪ್ರಕಾರ ಯಾವುದನ್ನು ಅಳವಡಿಸುವುದಕ್ಕೆ ಸಾಧ್ಯ ಖಂಡಿತವಾಗಿ ಅದಕ್ಕೆ ಸ್ಪಂಧಿಸುವುದಕ್ಕೆ ನಾವು ಮುಂದಾಗುತ್ತೇವೆ. ಈ ಹಂತದಲ್ಲಿ ನಾವು ಸಡಿಲ ಮಾಡುವಂತಹ ಅಥವಾ ನಿಯಮಾವಳಿಗಳನ್ನು ಬದಲಾವಣೆ ಮಾಡುವಂತಹ ಪ್ರಶ್ನೆ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, 2007ರಲ್ಲಿ 1982 ರಿಂದ 1995ರವರೆಗೆ ಅನುದಾನವನ್ನು ವಿಸ್ತರಣೆ ಮಾಡಬೇಕಾಗಿ ಬಂತು. ಆಗ ಅನುದಾನ ಇಲ್ಲದಿರುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಲೆಗಳೆಲ್ಲಾ ಕನ್ನಡ ಮಾಧ್ಯಮ ಶಾಲೆಗಳಾಗಿದ್ದವು. ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲ. ಕನ್ನಡ ಶಾಲೆಗಳೆಲ್ಲಾ ಇದ್ದ ಪರಿಸ್ಥಿತಿಯಲ್ಲಿ ಅನುದಾನವನ್ನು ವಿಸ್ತರಣೆ ಮಾಡಿ ಗ್ರ್ಯಾಂಟ್ ಕೊಟ್ಟ ಮೂರು ವರ್ಷದ ಒಳಗೆ ಅವರು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಹಾಗೆ ಕಲ್ಪಿಸದಿದ್ದರೆ ಅನುದಾನವನ್ನು ಹಿಂತೆಗೆದುಕೊಳ್ಳಲಾಗುವುದು ಎಂಬ ಕಾಯಿದೆ 2007ರಲ್ಲಿ ಆಯಿತು. ಇವರು ಈಗ ಹೊಸ ಹೊಸ ಕಾಯಿದೆ ಮಾಡುವುದಕ್ಕೆ ಹೇಳುತ್ತಾರೆ. 1992ರಲ್ಲಿ ತೆಗೆದುಕೊಂಡಂತಹವರು ಅನುದಾನವನ್ನು ಪಡೆದುಕೊಂಡಿದ್ದಾರೆ. 1988ರಲ್ಲಿ ತೆಗೆದುಕೊಂಡವರು ಅನುದಾನವನ್ನು ಪಡೆದುಕೊಂಡಿಲ್ಲ. ಇದರಿಂದ ಅನ್ಯಾಯವಾಗುತ್ತಿದೆ ಇದು ಸರಿಯಲ್ಲ. ಅನುದಾನವನ್ನು ವಿಸ್ತರಣೆ ಮಾಡಿದ ಮೂರು ವರ್ಷದೊಳಗೆ ಅವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಇದೆ. ಅದಕ್ಕೆ ಹೊಸ ಹೊಸ ನಿಯಮವನ್ನು ಮಾಡಿದರೆ ಆಗುವುದಿಲ್ಲ ಇದನ್ನು ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕೆಂಬುದು ನನ್ನ ಮನವಿಯಾಗಿದೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಇಲ್ಲ . .

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ . .

**ಸಭಾಪತಿಯವರು**:- ಒಂದು ನಿಮಿಷ ಮಾನ್ಯ ಸಚಿವರೇ ಕುಳಿತುಕೊಳ್ಳಿ. ಶ್ರೀ ಪುಟ್ಟಣ್ಣನವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಈ ದಿನ ನಾವು ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡಿದ ಸಮಯವನ್ನು ಬರೆದುಕೊಂಡಿದ್ದೇನೆ. 11 ಗಂಟೆ 10 ನಿಮಿಷಕ್ಕೆ ಪ್ರಾರಂಭ ಮಾಡಿದ್ದೇನೆ. ಆರು ಪ್ರಶ್ನೆಗಳನ್ನು ಇದುವರೆವಿಗೂ ನಾವು complete ಮಾಡಿದ್ದೇವೆ. 1 ಗಂಟೆ 20 ನಿಮಿಷವಾಯಿತು. ಈ ದಿನ ಪ್ರಮುಖವಾಗಿ ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಸಚಿವರು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬೇಕು. ಹಾಗಾಗಿ ನೀವು ಒಂದು ಪ್ರಶ್ನೆಗೆ ಅಷ್ಟು ಸಮಯವನ್ನು ಕೊಟ್ಟಿರಿ ಇನ್ನೊಂದು ಪ್ರಶ್ನೆಗೆ ಅಷ್ಟು ಸಮಯ ಕೊಡುವುದಿಲ್ಲವೇ ಎನ್ನುವ ಪ್ರಶ್ನೆಗಳೂ ಬರುತ್ತವೆ. ಇದನ್ನು ಯಾವರೀತಿ solve ಮಾಡಬೇಕೆಂಬುದನ್ನು ನನಗೆ ಬಿಟ್ಟರೆ ನಾನು ಮಾಡುತ್ತೇನೆ. ಅಥವಾ ಸಭೆ ಅಭಿಪ್ರಾಯ ಪಟ್ಟರೆ ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಚರ್ಚೆ ಮಾಡಬೇಕು ಅಥವಾ ಅದರಲ್ಲಿ ಅನುದಾನದ ಬಗ್ಗೆ ಮಾತ್ರ ಎಂಬ ಬಗ್ಗೆ ಚರ್ಚೆಗೆ ನೋಟೀಸ್ ಕೊಟ್ಟರೆ ನಾನು ಸೋಮವಾರ ಅಥವಾ ಮಂಗಳವಾರ ಮಧ್ಯಾಹ್ನ ಒಂದು ಗಂಟೆ ಅಥವಾ ಅರ್ಧ ಗಂಟೆ ಟೈಂ ಕೊಡಬಹುದು. ಆದರೆ ಪ್ರಶ್ನೋತ್ತರ ಅವಧಿಯಲ್ಲಿ ಎಲ್ಲರೂ ಪ್ರಶ್ನೆ ಕೇಳಿದರೆ ನನಗೆ ಅದನ್ನು manage ಮಾಡಲು ಆಗುವುದಿಲ್ಲ. ಅದು ಬಹಳ ಕಷ್ಟದ ಕೆಲಸವಾಗಿದೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರ ಪ್ರಶ್ನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾರಂಭವಾಗಿದ್ದು 12.25ಕ್ಕೆ. ಆಗಲೇ 08 ನಿಮಿಷವಾಯಿತು. ಇನ್ನೂ ಏನು ಆಗಿಲ್ಲ, ಮೂರ್ನಾಲ್ಕು ಜನ ಮಾತನಾಡಲು ಎದ್ದೇಳುತ್ತಿದ್ದೀರಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ನಮ್ಮ ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡಲು ನಿಯಮ 330 ಮೇರೆಗೆ ಕೊಡುವುದಿಲ್ಲ ಅಥವಾ ಗಮನ ಸೆಳೆಯುವ ಸೂಚನೆಯ ಸಮಯದಲ್ಲಿಯೂ ಅವಕಾಶ ಕೊಡುವುದಿಲ್ಲ. ಆದ್ದರಿಂದ ಪ್ರಶ್ನೋತ್ತರ ವೇಳೆಯಲ್ಲಿಯೇ ಕೇಳಬೇಕಲ್ಲವೇ?

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರೆ, ಸದನ ನಡೆಯಬೇಕಲ್ಲವೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ನಮ್ಮ ಕಷ್ಟ ಅದು.

**ಸಭಾಪತಿಯವರು**:- ಸದನ ನಡೆಯಲಿ. ಪ್ರಶ್ನೋತ್ತರ ಅವಧಿಯಲ್ಲಿ ಎಲ್ಲರೂ ಎದ್ದು ನಿಂತರೆ ನಾನೇನು ಮಾಡಬೇಕು? ಅದಕ್ಕೆ ನಾನೇನು ಮಾಡಬೇಕು ಎಂದು ಹೇಳಿ.

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಈ ವಿಷಯದ ಬಗ್ಗೆ ನಿಯಮ 330 ಮೇರೆಗೆ ಎರಡೂವರೆ ಗಂಟೆ ಕಾಲ ರಾತ್ರಿ ಒಂಭತ್ತು ಗಂಟೆಯವರೆಗೆ ಚರ್ಚೆ ಮಾಡಿದ್ದೇವೆ. ಆದರೆ ಇವರು ಅವಕಾಶವನ್ನು ಕೊಡುವುದೇ ಇಲ್ಲವೆಂದು ಹೇಳುತ್ತಾರೆ.

**ಸಭಾಪತಿಯವರು**:- ಈಗ ನಾನು ಏನು ಮಾಡಬೇಕು? ಮಾನ್ಯ ಶ್ರೀಕಂಠೇಗೌಡರ ಪ್ರಶ್ನೆಗೆ without any time limit, shall I allow it for discussion. ಎರಡು ಗಂಟೆ ಅಥವಾ ಮೂರು ಗಂಟೆಯವರೆಗೆ ಆಗಲಿ ಚರ್ಚೆ ಮಾಡೋಣ. ಸಭೆ ಹೇಳಿದರೆ ನಾನು ಅದನ್ನು ಮಾಡುತ್ತೇನೆ. ಬೇರೆ ಯಾವುದೇ ಪ್ರಶ್ನೆಯನ್ನು ನಡೆಸುವುದಿಲ್ಲ.

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೆ, . . .

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೆ, . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಅಂತಹ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು. ಏಕೆಂದರೆ ಇದು burning issue ಆಗಿದೆ. ಬಹಳ ಜನ ಶಿಕ್ಷಕರು ಸಾಯುವ ಸ್ಥಿತಿಯಲ್ಲಿದ್ದಾರೆ. ತಮ್ಮ ಹೆಂಡತಿ ಮಕ್ಕಳ ಒಡವೆಗಳನ್ನು ಅಡವಿಟ್ಟು ಕುಳಿತಿದ್ದಾರೆ. . . .

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ಬೇರೆ ಯಾರದ್ದೂ ಇಲ್ಲ. ಶ್ರೀಕಂಠೇಗೌಡರ ಪ್ರಶ್ನೆ ಮುಗಿದ ಮೇಲೆ ಸಭೆಯನ್ನು adjourn ಮಾಡುತ್ತೇನೆ. ಬೇರೆ ಯಾರ ಪ್ರಶ್ನೆಯನ್ನೂ ತೆಗೆದುಕೊಳ್ಳುವುದಿಲ್ಲ. ಇದು ತಮಗೆ ಒಪ್ಪಿಗೆಯೇ?

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು**:- ಈಗ 10 ನಿಮಿಷಗಳಾಯಿತು.

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ನಿಮಗೆ ಬೆಂಬಲವಾಗಿ ನನ್ನ ಕಳಕಳಿ ಇಷ್ಟೇ. ಇದು ತುಂಬಾ ಪ್ರಮುಖವಾದ ವಿಷಯವಾಗಿದೆ. ಈಗ ನಾವು ಚರ್ಚೆ ಮಾಡಲು ಹೋಗುವುದಿಲ್ಲ. ದಯಮಾಡಿ ಸೋಮವಾರ ಅರ್ಧಗಂಟೆ ಚರ್ಚೆಗೆ ಅವಕಾಶವನ್ನು ಕೊಡುವಿರಾ?

**ಸಭಾಪತಿಯವರು**:- ಆಗಲಿ, ಸೋಮವಾರ ಅಥವಾ ಮಂಗಳವಾರ ಕೊಡುತ್ತೇನೆ.

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ಸೋಮವಾರ ಅಥವಾ ಮಂಗಳವಾರ ಕೊಡಿ ಅದು ನಿಮಗೆ ಸೇರಿದ್ದು. ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೂಡ ಇವನ್ನೆಲ್ಲಾ ಕೊಡುತ್ತೇವೆಂದು ಹೇಳಿದ್ದಾರೆ. ಇದು ಸರ್ಕಾರದ ತುಂಬಾ ತುಂಬಾ ಕೆಟ್ಟ ಸಂಪ್ರದಾಯ ಮತ್ತು ಕೆಟ್ಟ ತೀರ್ಮಾನವಾಗಿದೆ. ಏಕೆಂದರೆ, 1995ರಲ್ಲಿ ಪ್ರಾರಂಭಿಸಿರುವವರಿಗೆ ಕೊಡಬೇಕೆಂದು ಹೇಳಿ ಕೊಟ್ಟಿಲ್ಲ ಅದನ್ನು ಚರ್ಚೆ ಮಾಡಬೇಕಾಗಿದೆ. ನಾವು ನಿಮಗೆ ತೊಂದರೆ ಕೊಡುವುದಿಲ್ಲ. ದಯವಿಟ್ಟು ಅರ್ಧಗಂಟೆ ಚರ್ಚೆಗೆ ಸೋಮವಾರ ಅಥವಾ ಮಂಗಳವಾರ ಅವಕಾಶ ಕೊಡಿ ಎಂದು ಕೋರುತ್ತೇನೆ.

**ಸಭಾಪತಿಯವರು**:- ಒಂದು ಮನವಿ ಪತ್ರವನ್ನು ಕಳುಹಿಸಿಕೊಡಿ.

**ಶ್ರೀ ಪುಟ್ಟಣ್ಣ**:- ಆಯಿತು.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಈ ವಿಚಾರ ನಿಯಮಾವಳಿಯ . . . ನಾನು ಹೇಳುವುದೇನೆಂದರೆ,

(ಗೊಂದಲ)

**ಸಭಾಪತಿಯವರು**:- ಆಯಿತಲ್ಲ . .

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ನೀವು ಸಚಿವರೇ? ಮಾನವೀಯತೆಯ ದೃಷ್ಟಿಯಿಂದ ನೋಡಿ. ೯೦ ಭಾಗ ಒಂದು ತೀರ್ಮಾನವನ್ನು ತೆಗೆದುಕೊಂಡು ಇನ್ನು ಹತ್ತು ಭಾಗವನ್ನು ಏಕೆ ಆ ರೀತಿ ತೆಗೆದುಕೊಳ್ಳುತ್ತೀರಿ?

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಚಿವರೇ, ನೀವು positive mind ಇಟ್ಟುಕೊಂಡು ಮಾನವೀಯತೆಯ ದೃಷ್ಟಿಯಿಂದ ನೋಡುವುದಾದರೆ, ನೀವು ಮುಖ್ಯಮಂತ್ರಿಯವರ ಮಾತನ್ನು ಪಾಲಿಸುವುದಾದರೆ, ಏಕೆ ಅಡ್ಡಿ ಪಡಿಸುವಿರಿ? ಜನರನ್ನು ಪ್ರೀತಿಸಿ. . .

**ಶ್ರೀ ತನ್ವೀರ್ ಸೇಠ್**:- ನೋ. . ನೋ. . .ತಾವು ಹೇಳುವುದು ಮಾತ್ರ ಗಂಭೀರವಾದ ವಿಚಾರವಾದರೆ ನಾನು ಹೇಳುವುದೇನು ಲಘುವಾದ ವಿಚಾರವೇ?

(ಗೊಂದಲ)

**ಸಭಾಪತಿಯವರು**:- ಒಂದು, ಎರಡು, ಮೂರು . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ನಿಮ್ಮ ಕೈಯ್ಯಲ್ಲಿ grant ನ್ನು ಕೊಡುವುದಕ್ಕಾಗಲಿಲ್ಲ, ಕೊಟ್ಟಿರುವುದನ್ನೂ fulfill ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು**:- ಮಾನ್ಯ ಸಚಿವರು ಏನು ಹೇಳುತ್ತಾರೆ ಅವರ ಅಭಿಪ್ರಾಯವನ್ನು ಕೇಳುವುದಿಲ್ಲವೇ?

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ. . ನಿಯಮಾವಳಿ ಪ್ರಕಾರ ನಾವು ನಡೆಯಬೇಕಾಗಿದೆ. ಇಲಾಖೆಯು ನಾವೇ ಹಾಕಿಕೊಟ್ಟ ಕೆಲವು ನಿಯಮಾವಳಿಗಳನ್ನು ಪಾಲಿಸಬೇಕಾಗಿದೆ. ಒಬ್ಬರಿಗೊಂದು ಇನ್ನೊಬ್ಬರಿಗೊಂದನ್ನು ನಾನು ಮಾಡಬೇಕಾದರೆ ದಿವಾಳಿ ಎದ್ದು ಹೋಗುತ್ತದೆ ಮತ್ತು ಯಾವ್ಯಾವ ರೀತಿ ಆಗುತ್ತದೆಂಬುದು ನನಗೆ ಗೊತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಅವರು ಎಲ್ಲಾ ನಿಯಮಾವಳಿಗಳನ್ನು . . . ಇವರದ್ದೇ ನಿಯಮಾವಳಿ;

(ಗೊಂದಲ)

**ಶ್ರೀ ತನ್ವೀರ್ ಸೇಠ್**:- ಹೇಳಿ ಸಾಹೇಬ್ರೇ. . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ದಿವಾಳಿ ಎಂದೇಕೆ ಹೇಳಿದಿರಿ? ಹಾಗೆಂದರೆ ಏನರ್ಥ?

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಅವರು ಬದುಕುವುದು ಬೇಡವೇ? ಅವರು ಸಾಯಬೇಕೇ?

**ಶ್ರೀ ಕೆ.ಎಸ್. ಈಶ್ವರಪ್ಪ**:- ಸರ್ಕಾರದಿಂದ ಇಂತಹ ಪದಗಳು ಬರುತ್ತವೆಯೆಂದರೆ, . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಚಿವರೇ, ತಾವು open mind ನಲ್ಲಿರಿ. Positive ಆಗಿರಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದಂತಹ ಪದಗಳಿಗೆ ಅರ್ಥವಿದೆ. ನಾನು ಹೇಳುವುದಿಷ್ಟೇ, ದಯವಿಟ್ಟು. .

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಚಿವರೇ, ದಿವಾಳಿ ಎನ್ನುವುದಕ್ಕೆ ಅರ್ಥವಿದೆಯೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ದಿವಾಳಿ ಎಂದರೇನು? ಏಕೆ ಹಾಗೆ ಹೇಳಿದಿರಿ?

**ಸಭಾಪತಿಯವರು**:- ಅದು ಬಿಡಿ. . .

**ಶ್ರೀ ತನ್ವೀರ್ ಸೇಠ್**:- ಮಾನ್ಯ ಹೊರಟ್ಟಿಯವರೇ . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ನೀವು ದಿವಾಳಿಯಾಗುತ್ತದೆ ಎಂದರೆ ಹೇಗೆ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಚಿವರೇ, ನಿಮ್ಮ ಬಗ್ಗೆ ನನಗೆ ಗೌರವವಿದೆ, ಪ್ರೀತಿಯಿದೆ. ದಯವಿಟ್ಟು ಏನು ನಿಯಮಗಳಿವೆ ಆ ರೀತಿ ನಡೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್**:- ದಯವಿಟ್ಟು ಒಂದು ನಿಮಿಷ ಕೇಳಿ.. .ಏನು ಎನ್ನುವುದನ್ನು ನಾನು ಹೇಳುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಹೀಗೆ ಉತ್ತರ ಕೊಟ್ಟುಬಿಟ್ಟು ಏನನ್ನು ಹೇಳುವಿರಿ?

**ಶ್ರೀ ತನ್ವೀರ್ ಸೇಠ್**:- ನೋಡಿ ಒಂದು ವಿಚಾರವನ್ನು ಹೇಳುತ್ತೇನೆ. . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಹೀಗೆ ಉತ್ತರ ಕೊಟ್ಟು ಏನನ್ನು ಹೇಳುತ್ತೀರಿ? ಮಾತನಾಡುವುದಕ್ಕೂ ಸಾಧ್ಯವಾಗದ ರೀತಿಯಲ್ಲಿ ಉತ್ತರ ಕೊಟ್ಟು ಖಡಕ್ಕಾಗಿ . .

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ ಮೇಲೆಯೂ ಮತ್ತೇಕೆ ಈ ಚರ್ಚೆ? ಬೇರೆ ಪ್ರಶ್ನೆಗಳಿಗೆ ಅವಕಾಶವಿಲ್ಲವಾಗುತ್ತಿದೆ.

(ಗೊಂದಲ)

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ. . . ನಿನ್ನೆಯ ದಿವಸ ಮಾನ್ಯ ಸದಸ್ಯರಾದ ಪುಟ್ಟಣ್ಣರವರು ಮಾತನಾಡಬೇಕಾದರೆ ಒಂದು ವಿಚಾರವನ್ನು ಹೇಳಿದರು. ನಿಮ್ಮ ಬಿ.ಇ.ಒ ಗಳು ಮತ್ತು ಡಿ.ಡಿ.ಪಿ.ಐ ಗಳೆಲ್ಲಾ ಯಾವ ಯಾವ ಸಂಸ್ಥೆಗಳಿಗೆ ಹೋಗಿ ಏನೇನು ಮಾಡುತ್ತಿದ್ದಾರೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದರು. ಈಗ ನಮಗೆ ಪ್ರಸ್ತಾವನೆಗಳು ಬರಬೇಕಾಗಿರುವುದು ಸ್ಥಳೀಯ ಮಟ್ಟದಿಂದ ಅಧಿಕಾರಿಗಳು ಮತ್ತು ಬಿ.ಇ.ಒ ರವರಿಂದ ಬರಬೇಕು. ನಿಯಮಾವಳಿಗಳಲ್ಲಿ ಒಂದಕ್ಕೊಂದು ಇನ್ನೊಂದಕ್ಕೊಂದು ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಏನೇನು ಅನಾಹುತಗಳಾಗುತ್ತವೆ ಅವು ಯಾವ ಯಾವ ಮಟ್ಟಕ್ಕೆ ಹೋಗುತ್ತವೆ ಎನ್ನುವುದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರು ಅವರ ಕಳಕಳಿಯನ್ನು ವ್ಯಕ್ತಪಡಿಸಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ಈಗಾಗಲೇ ಚರ್ಚೆಯಾಗಿದೆ. ಕಳೆದ ತಿಂಗಳು 27ನೇ ತಾರೀಖು ಸಭೆ ನಡೆಸಿದ್ದು, ಈ ತಿಂಗಳು ಅದರ ನಡವಳಿಕೆಗಳನ್ನು ನಾನು ಕೊಟ್ಟಿದ್ದೇನೆ. ಈಗ ಸದನ ಬಂದಿದೆ. ಅದರ ಮೇಲೆ ಮಾಡಿರುವ ಅನುಪಾಲನಾ ವರದಿ ಮತ್ತು ಯಾವ ರೀತಿ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ಈಗಾಗಲೇ ಇಲಾಖೆಯ ಜೊತೆ ಚರ್ಚೆ ಮಾಡುತ್ತಿದ್ದೇವೆ. ಅದರ ಹಿನ್ನೆಲೆಯಲ್ಲಿ ತಾವು ಇಲ್ಲಿ ಪ್ರಶ್ನೆ ಹಾಕಿ ಎಲ್ಲವನ್ನೂ ಸಡಿಲ ಮಾಡಿಕೊಡಿ ಎಂದು ಹೇಳಿದರೆ ಈ ಹಂತದಲ್ಲಿ ಯಾವುದೇ ಪ್ರಸ್ತಾವನೆ ನಮ್ಮಲ್ಲಿಲ್ಲ. ಇದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ. ಈಗಾಗಲೇ ನಮ್ಮಲ್ಲಿ ನಿಯಮಾವಳಿ ಇರುವಂತಹದ್ದು ಆಡಳಿತ ಮಂಡಳಿ ಬದಲಾವಣೆಯಾದರೆ, ಆ ಸಂಸ್ಥೆ grant-in-aid ನಿಂದ ಹೊರಗೆ ಹೋಗುತ್ತದೆ, ಸ್ಥಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದಲಾವಣೆಯಾದರೆ grant-in-aid ನಿಂದ ಹೊರಗೆ ಹೋಗುತ್ತದೆ. ವಿದ್ಯಾರ್ಹತೆ, ಮಕ್ಕಳ ಸಂಖ್ಯೆ, ದಾಖಲಾತಿ ಮತ್ತು ಹಾಜರಾತಿ . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ದಿಕ್ಕು ತಪ್ಪಿಸುವುದು ಬೇಡ.

(ಗೊಂದಲ)

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನಿಯಮಾವಳಿ ಪ್ರಕಾರ ಇರುವ ಎಲ್ಲಾ ಪ್ರಕರಣಗಳಿಗೆ ಕೊಡುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, this is not a new issue. ಏಕೆ divert ಮಾಡುತ್ತೀರಿ?

**ಶ್ರೀ ಕೆ.ಎಸ್. ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಅರ್ಧಗಂಟೆ ಚರ್ಚೆಯಲ್ಲಿ ಉತ್ತರ ಕೊಡುವಂತೆ ಹೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ದಿಕ್ಕನ್ನೇಕೆ ತಪ್ಪಿಸುತ್ತೀರಿ? ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿರುವುದನ್ನಾದರೂ ಇಲ್ಲಿ ಉಲ್ಲೇಖ ಮಾಡಿದ್ದೀರಾ?

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಐವನ್ ಡಿ'ಸೋಜಾರವರೇ, ಇಂತಹವುಗಳಿಗೆಲ್ಲಾ ತಾವು ಬೆಂಬಲ ಕೊಡಬೇಡಿ. No, we are not doing politics.

(ಗೊಂದಲ)

**ಶ್ರೀ ಎಸ್.ವ್ಹಿ. ಸಂಕನೂರ**:- ಮಾನ್ಯ ಸಚಿವರೇ, ಮಾನ್ಯ ಮುಖ್ಯಮಂತ್ರಿಯವರ ಸಭೆಯಲ್ಲಿ ಏನು ಚರ್ಚೆಯಾಯಿತು ಅದನ್ನಾದರೂ ಹೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ದಯವಿಟ್ಟು ನೀವು ನಮಗೆ ಅಡ್ಡಿಪಡಿಸಬೇಡಿ. ಅವರು ಪಾಠ ಮಾಡಬೇಕಲ್ಲವೇ? ಅವರು ಸಂಬಳವಿಲ್ಲದೇ ಎಷ್ಟು ವರ್ಷ ಪಾಠ ಮಾಡಬೇಕು? ಶಿಕ್ಷಕರ ಬಗ್ಗೆ ಏನನ್ನು ತಿಳಿದುಕೊಂಡಿದ್ದೀರಿ? It is a burning issue. ನಿಮಗೆ ಅವರ ಕಷ್ಟ ಅರ್ಥವಾಗುತ್ತಿಲ್ಲ. ನಾಲ್ಕೈದು ವರ್ಷಗಳಿಂದ ಅವರಿಗೆ ಅನ್ನವಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ನಿಯಮಾವಳಿಗಳನ್ನು ಪಾಲನೆ ಮಾಡಿರುವಂತಹ, ನಿಯಮಾವಳಿ ಪ್ರಕಾರವೇ ಬಂದಿರುವುದನ್ನು ಕೊಡುವುದಕ್ಕೆ ಹೇಳಿ. ನಿಯಮಾವಳಿಯನ್ನು ಉಲ್ಲಂಘನೆ ಮಾಡಿರುವವರಿಗೆ ಬೇಡ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನಿಯಮಾವಳಿ ಪ್ರಕಾರ ಇರುವಂತಹ ಎಲ್ಲಾ ಪ್ರಕರಣಗಳನ್ನು ತುರ್ತಾಗಿ 15-20 ದಿನಗಳಲ್ಲಿ ಎಲ್ಲೆಲ್ಲಿದೆ ಅವೆಲ್ಲವನ್ನೂ ತರಿಸಿಕೊಂಡು ಮಾಡಿಕೊಡುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ನಿಯಮಾವಳಿಯೆಂದರೆ, ನೀವು ಮೊನ್ನೆ ಕೊಟ್ಟಿರುವ ಸುತ್ತೋಲೆಯಲ್ಲ. ಅನುದಾನಕ್ಕೊಳಪಡಿಸಿದಂತಹ ಸಂದರ್ಭದಲ್ಲಿ ಈ ಹಿಂದೆ ಇದ್ದ ಮಾನದಂಡಗಳು. ತಾವು ಹೊರಡಿಸಿರುವ ಸುತ್ತೋಲೆಯನ್ನು ತೆಗೆದುಕೊಂಡು ಮಾಡುವುದೇನು?

**ಶ್ರೀ ತನ್ವೀರ್ ಸೇಠ್**:- ನಿಯಮಾವಳಿ ಪ್ರಕಾರ ಇದ್ದಾಗ ಮಾಡಿಕೊಡುವುದಕ್ಕೆ ಸರ್ಕಾರ ಒಪ್ಪಿಕೊಂಡಿದೆ.

(ಮುಂದು)

(1059)17-11-2017/12-40/ಕೆಹೆಚ್/ಬಿಎನ್ಎಸ್

**ಪ್ರಶ್ನೆ ಸಂಖ್ಯೆ: 4131**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಎಷ್ಟು ದಿನಗಳು ಬೇಕೆಂದು ಮಾನ್ಯ ಸಚಿವರನ್ನು ಕೇಳಿದ್ದೇನೆ. ಸಚಿವ ಸಂಪುಟ ಉಪ ಸಮಿತಿಯನ್ನು ದಿನಾಂಕ:23-11-2013 ರಂದು ರಚಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ 6 ಬಾರಿ ಮಾತ್ರ ಸಭೆಗಳನ್ನು ಮಾಡಿದ್ದಾರೆ. ಸಚಿವ ಸಂಪುಟ ಉಪ ಸಮಿತಿಯು ಯಾವಾಗ ವರದಿಯನ್ನು ನೀಡುತ್ತದೆ? ನಾಲ್ಕರಿಂದ ನಾಲ್ಕೂವರೆ ವರ್ಷಗಳಲ್ಲಿ ಕೇವಲ 6 ಬಾರಿ ಮಾತ್ರ ಸಭೆಗಳನ್ನು ಮಾಡಿದ್ದಾರೆ. ಇದನ್ನು ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು. ಇದೇ ಸದನದಲ್ಲಿ ಶ್ರೀ ಎಸ್.ವಿ. ಸಂಕನೂರ ರವರು ಕೇಳಿರುವ ಪ್ರಶ್ನೆಗೆ “128 ಕಾಲೇಜುಗಳು ವೇತನಾನುದಾನಕ್ಕೆ: ರಾಯರೆಡ್ಡಿ” ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. 128 ಖಾಸಗಿ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗುವುದು ಎಂದು ಮಾನ್ಯ ಸಚಿವರೇ ಹೇಳಿದ್ದಾರೆ. ಇವತ್ತಿನ ದಿವಸದವರೆವಿಗೂ ಸಹ ಮಾಡಿಲ್ಲ. ಈಗ ವಿದ್ಯಾರ್ಥಿಗಳು ಪಾಲಿಟೆಕ್ನಿಕ್ ಮತ್ತು ಐ.ಟಿ.ಐ., ಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ತಮ್ಮ ಕಾಲ ಮೇಲೆ ನಿಂತು ಕೊಳ್ಳುವಂತಹ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ನೌಕರಿಗಳಿಗೆ ಅಡ್ಡಾಡುವಂತಹದ್ದು ಇಲ್ಲ. ಇದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಮಾಡಬೇಕಾಗಿರುವಂತಹದ್ದು ನಿಮ್ಮ ಪ್ರಥಮ ಕರ್ತವ್ಯವಾಗಿದೆ. ಈ ಹಿನ್ನಲೆಯಲ್ಲಿ ಇವತ್ತಿನ ದಿವಸ ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ, ದಿನಾಂಕ: 01-06-1987 ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಮತ್ತು 15 ವರ್ಷಗಳ ಅಸ್ತಿತ್ವವನ್ನು ಪೂರೈಸಿರುವ ಹದಿನೈದು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರವು ದಿನಾಂಕ: 20-02-2013 ರಲ್ಲಿ ಒಂದು ಆದೇಶವನ್ನು ಹೊರಡಿಸಿದ್ದಾರೆ. ಆ ಹದಿನೈದು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಕಾಲೇಜುಗಳ್ಯಾವುವೆಂದರೆ,

1. ಶ್ರೀ ವೆಂಕಟರಾಜು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
2. ಎಂ.ಇ.ಎಸ್ ಪಾಲಿಟೆಕ್ನಿಕ್, ಮಧುಗಿರಿ
3. ಬಿ.ಇ.ಟಿ ಪಾಲಿಟೆಕ್ನಿಕ್, ಕೆ.ಎಂ.ದೊಡ್ಡಿ, ಮಂಡ್ಯ
4. ಎನ್.ಇ.ಎಸ್ ಪಾಲಿಟೆಕ್ನಿಕ್, ರಾಜಾಪುರ, ಗುಲ್ಬರ್ಗಾ
5. ಆದರ್ಶ ಪಾಲಿಟೆಕ್ನಿಕ್, ಆರ್.ಟಿ.ನಗರ, ಬೆಂಗಳೂರು
6. ರಾಯಬಾಗ್ ಪಾಲಿಟೆಕ್ನಿಕ್, ರಾಯಬಾಗ್, ಬೆಳಗಾವಿ ಜಿಲ್ಲೆ
7. ಹೆಚ್.ಕೆ.ಇ.ಎಸ್. ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ
8. ಹೆಚ್.ಕೆ.ಇ.ಎಸ್. ಪಾಲಿಟೆಕ್ನಿಕ್, ಗುಲ್ಬರ್ಗಾ
9. ಹೆಚ್.ಕೆ.ಇ.ಎಸ್. ಪಾಲಿಟೆಕ್ನಿಕ್, ರಾಯಚೂರು
10. ಮಹಮೂದ್ ಷರೀಫ್ ಪಾಲಿಟೆಕ್ನಿಕ್, ಬೆಂಗಳೂರು
11. ಕೆ.ಜೆ.ಟಿ.ಇ.ಟಿ. ಪಾಲಿಟೆಕ್ನಿಕ್, ಮುಳಬಾಗಿಲು, ಕೋಲಾರ ಜಿಲ್ಲೆ
12. ಎಂ.ಎನ್.ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಬೆಂಗಳೂರು
13. ಎಸ್.ಎಸ್.ಆರ್. ಪಾಲಿಟೆಕ್ನಿಕ್, ಜೇವರ್ಗಿ, ಗುಲ್ಬರ್ಗಾ ಜಿಲ್ಲೆ
14. ತೋಂಟದಾರ್ಯ ಪಾಲಿಟೆಕ್ನಿಕ್, ಗದಗ
15. ಜೆ.ಎಸ್.ಎಸ್. ಪಾಲಿಟೆಕ್ನಿಕ್, ಮೈಸೂರು

ಈ ಹದಿನೈದು ಪಾಲಿಟೆಕ್ನಿಕ್ ಕಾಲೇಜುಗಳಿಗೆ ವೇತನಾನುದಾನವನ್ನು ವಿಸ್ತರಣೆಯನ್ನು ಮಾಡಿದ್ದಾರೆ. ಇನ್ನು ಉಳಿದ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಏಕೆ ಮಾಡಿರುವುದಿಲ್ಲ? ಇಲ್ಲಿ ಏನಾಗಿದೆಯೆಂದರೆ, ತಮಗೆ ಬೇಕಾಗಿರುವಂತಹ ಪಾಲಿಟೆಕ್ನಿಕ್ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಿ, ಉಳಿದ ಕಾಲೇಜುಗಳನ್ನು ಮಾಡದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಏನು ಹೇಳುತ್ತೇನೆಂದರೆ, particularly, I.T.I. ಮತ್ತು Job Oriented Course (J.O.C.), ಪಾಲಿಟೆಕ್ನಿಕ್‌ಗಳಂತಹ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದರೆ, ಯಾವತ್ತಾದರೂ ಸರ್ಕಾರದ ಮೇಲಿರುವಂತಹ ಭಾರ ಕಡಿಮೆಯಾಗುವುದು. ಮಕ್ಕಳು ವಿದ್ಯಾಭ್ಯಾಸವನ್ನು ಮುಗಿಸಿ ನೌಕರಿಗೆ ಹೋಗುವುದು ಮತ್ತು ತಮ್ಮ ಸ್ವಂತ ಕಾಲಮೇಲೆ ನಿಲ್ಲುವಂತಹ ಪ್ರವೃತ್ತಿಯಾಗಬೇಕು. ದಿನಾಂಕ:23-11-2013 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದ್ದು, ಇವತ್ತಿಗೆ 4 ವರ್ಷಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಗಿದಿದೆ. 4 ವರ್ಷದಲ್ಲಿ 6 ಬಾರಿ ಮಾತ್ರ ಸಭೆಯನ್ನು ಮಾಡಿದ್ದಾರೆ. ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಯಾವಾಗ ಅನುದಾನಕ್ಕೆ ಒಳಪಡಿಸುತ್ತಾರೆ ಎಂಬುದನ್ನು ತಿಳಿಸಬೇಕು. ಅನುದಾನಕ್ಕೆ ಒಳಪಡಿಸುವುದಾದರೆ ಮಾಡುತ್ತೇವೆಂದು ಹೇಳಿ, ಇಲ್ಲದಿದ್ದರೆ ಇಲ್ಲವೆಂದು ಹೇಳಿ, ಸದನಕ್ಕೆ ಸ್ಪಷ್ಟವಾದಂತಹ ಉತ್ತರವನ್ನು ನೀಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ರಾಜ್ಯದಲ್ಲಿರುವಂತಹ ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಅನುದಾನವನ್ನು ಕೊಡುವುದರ ಬಗ್ಗೆ ಸದನಕ್ಕೆ ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು 245 ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಿವೆ. ಈಗಾಗಲೇ 1987ನೇ ಇಸವಿಯ ಮುಂಚೆ ಪ್ರಾರಂಭಿಸಲ್ಪಟ್ಟ ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸುಮಾರು 44 ಪಾಲಿಟೆಕ್ನಿಕ್ ಕಾಲೇಜುಗಳಿಗೆ ಅನುದಾನವನ್ನು ಒದಗಿಸಲಾಗಿದೆ. 1987ನೇ ಇಸವಿಯ ಮುಂಚೆ ಇದ್ದ ಇನ್ನು 33 ಪಾಲಿಟೆಕ್ನಿಕ್ ಕಾಲೇಜುಗಳ ವಿಷಯದ ಬಗ್ಗೆ ನಾನು ಹೇಳುತ್ತಿರುವುದು. ಅವರು ಕೆಲವು ಷರತ್ತುಗಳು ಮತ್ತು ಕಾಗದಗಳನ್ನು ಕೊಡದೇ ಇರುವುದಕ್ಕೆ ಉಳಿದುಕೊಂಡಿರಬಹುದು. ಈಗಾಗಲೇ ಇದರ ಬಗ್ಗೆ ಸರ್ಕಾರ ಪರಿಶೀಲನೆಯನ್ನು ಮಾಡಿದೆ. ವೇತನಾನುದಾನಕ್ಕೆ ಒಳಪಡಿಸುವ ಸಲುವಾಗಿ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಸಚಿವ ಸಂಪುಟ ಉಪ ಸಮಿತಿಗಳನ್ನು ಮಾಡಿದ್ದಾರೆ. ಹಿಂದಿನ ಉನ್ನತ ಶಿಕ್ಷಣ ಸಚಿವರುಗಳು ಈಗಾಗಲೇ ಅನೇಕ ಸಭೆಗಳನ್ನು ಮಾಡಿದ್ದಾರೆ. ನಾನು ಕೂಡ ಉನ್ನತ ಶಿಕ್ಷಣ ಸಚಿವನಾದ ಮೇಲೆ ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷನಾಗಿದ್ದು, ಈ ವಿಷಯದ ಬಗ್ಗೆ ಈಗಾಗಲೇ 2 ಸಭೆಗಳನ್ನು ಮಾಡಿದ್ದೇವೆ. ಮೊನ್ನೆಯ ದಿವಸ ಸಂಬಂಧಪಟ್ಟ ಇಲಾಖೆಯಿಂದ ಇದರ ಬಗ್ಗೆ ಕೆಲವು ಮಾಹಿತಿಗಳನ್ನು ಕೇಳಿದ್ದೇವೆ ಮತ್ತು ಮುಂದಿನ ವಾರ ಮತ್ತೊಂದು ಸಚಿವ ಸಂಪುಟ ಉಪ ಸಮಿತಿಯ ಸಭೆಯನ್ನು ಮಾಡಬೇಕೆಂದು ಹೇಳಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಿಯಮಾವಳಿಯಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆ ಮತ್ತು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಏನು ಮಾಡಬೇಕೆಂದು ವಿಚಾರಣೆ ಮಾಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಚಿವರೇ, ಸಭೆ ಮಾಡೋಣವೆಂದು ಹೇಳುತ್ತಿದ್ದೀರಾ ಅಥವಾ ಸಮಿತಿ ಮಾಡೋಣವೆಂದು ಹೇಳುತ್ತಿದ್ದೀರಾ?

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಸಚಿವ ಸಂಪುಟ ಉಪ ಸಮಿತಿಯ ಸಭೆ ಮಾಡೋಣವೆಂದು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಚಿವರೇ, ನೀವು ಆಗಲೇ ಸಮಿತಿ ಎಂದು ಪ್ರಸ್ತಾಪ ಮಾಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ನಾನು ಸಚಿವ ಸಂಪುಟ ಸಭೆ ಎಂದು ಹೇಳಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತರಕರು)**:- ಮಾನ್ಯ ಸಭಾಪತಿಯವರೇ, ಆ ಸಮಿತಿಯಾಗಿರುವಂತಹದ್ದು, ಅನುದಾನ ಸಂಹಿತೆಯ ನಿಯಾಮಾವಳಿಯನ್ನು ರೂಪಿಸುವುದಕ್ಕೆ ಆಗಿರುವಂತಹದ್ದು. ಇನ್ನು ಮುಂದೆ ಅನುದಾನಕ್ಕೆ ಒಳಪಡಿಸಬೇಕಾದರೆ ಏನು ಮಾಡಬೇಕು ಎಂದು ಇದನ್ನು ರೂಪಿಸಿರುವುದು. 33 ಕಡತಗಳು ಅನುದಾನಕ್ಕೆ ಒಪ್ಪಿಗೆಯಾಗಿ, ಆದೇಶಕ್ಕಾಗಿ ಸಿದ್ಧವಿದೆ. ಆದರೆ ಅದನ್ನು ಇನ್ನು ಕೊಟ್ಟಿಲ್ಲ. ಇನ್ನು ಮುಂದೆ ಅನುದಾನ ಸಂಹಿತೆಯಲ್ಲಿ ಏನು ನಿಯಾಮವಳಿಯನ್ನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳಿ ಪರವಾಗಿಲ್ಲ. 2013ನೇ ಸಾಲಿನಿಂದ 2017ನೇ ಸಾಲಿನವರೆಗೆ 6 ಬಾರಿ ಮಾತ್ರ ಸಭೆಯನ್ನು ಸೇರಿದ್ದರೂ ಸಹ ಹೊಸ ನೀತಿ ಸಂಹಿತೆ ಹೇಗಿರಬೇಕು ಎಂಬುದು ಇನ್ನು ನಿರ್ಣಯವಾಗಿಲ್ಲ. ಅದರ ಅರ್ಥವೇನೆಂದರೆ, ನಿಮ್ಮ ಸಭೆಯಲ್ಲಿ ನಿರ್ಣಯವಾಗುವವರೆಗೆ 33 ಪಾಲಿಟೆಕ್ನಿಕ್ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದಕ್ಕೆ ಅಪ್ರೂವಲ್ ಆಗಿದೆಯಲ್ಲವೇ?

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ಏನು ವಿಚಾರವನ್ನು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ನಾನು ಈಗಾಗಲೇ ಇದರ ಬಗ್ಗೆ ಸ್ಪಷ್ಟಪಡಿಸಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಈ 33 ಪಾಲಿಟೆಕ್ನಿಕ್ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂದು ಆದೇಶವಾಗಿದೆ. ಅದನ್ನು ಕೂಡಲೇ ಬಿಡುಗಡೆ ಮಾಡುತ್ತಾರೆಯೇ, ಹೊಸ ನೀತಿ ಸಂಹಿತೆಯನ್ನು ಯಾವಾಗ ಬೇಕಾದರೂ ಮಾಡಿಕೊಳ್ಳಲಿ. 2013ನೇ ಸಾಲಿನಿಂದ 2017ನೇ ಸಾಲಿನವರೆಗೆ 6 ರಿಂದ 7 ವರ್ಷದಲ್ಲಿ ಕೇವಲ 6 ಬಾರಿ ಮಾತ್ರ ಸಭೆಯನ್ನು ಮಾಡುವುದಕ್ಕೆ ಸಾಧ್ಯವಾಯಿತು. ಇನ್ನು ಯಾವಾಗ ಇದು ಆಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಆದರೆ, ಈ 33 ಪಾಲಿಟೆಕ್ನಿಕ್ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಬೇಕೆಂದು ಆದೇಶವಾಗಿದೆ. ಅದನ್ನು implement ಮಾಡುತ್ತಾರೆಯೇ ಎಂಬ ಬಗ್ಗೆ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಸ್ಪಷ್ಟಪಡಿಸಿರುವ ಹಾಗೆ ಈ 33 ಪಾಲಿಟೆಕ್ನಿಕ್ ಕಾಲೇಜುಗಳು 1987ನೇ ಇಸವಿಕ್ಕಿಂತ ಮುಂಚೆ ಪ್ರಾರಂಭವಾಗಿರುವುದು. ಅದಕ್ಕೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮುಂದಿನ ವಾರ ಸಚಿವ ಸಂಪುಟ ಉಪ ಸಮಿತಿಯ ಸಭೆಯನ್ನು ಕರೆದಂತಹ ಸಂದರ್ಭದಲ್ಲಿ ಇದರ ಬಗ್ಗೆ ಕ್ರಿಯಾತ್ಮಕವಾಗಿ ಏನು ಮಾಡುವುದಕ್ಕೆ ಸಾಧ್ಯವಿದೆ ಎಂದು ಪರಿಗಣಿಸಿ, ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು**:- ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 4144**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿಸ್ತಾರವಾದಂತಹ ಉತ್ತರವನ್ನು ನೀಡಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಅನೇಕ ವರ್ಷಗಳಿಂದ ದುಡಿಯುತ್ತಿರುವ ಗ್ರಾಮ ಪಂಚಾಯತಿ ನೌಕರರಿಗೆ ಯಾವುದೇ ಸೌಲಭ್ಯ ನೀಡದೇ ಇರುವುದರಿಂದ ನಿಯಮಾವಳಿಯನ್ನು ರೂಪಿಸಿ ಈ ಎಲ್ಲಾ ಸೌಲಭ್ಯದೊಂದಿಗೆ ಜೀವನ ಭದ್ರತೆ ಕಲ್ಪಿಸುವ ಕುರಿತು ಸರ್ಕಾರದ ನಿಲುವೇನು ಎಂದು ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಪ್ರತ್ಯೇಕವಾದ ನಿಯಮಗಳನ್ನು ರೂಪಿಸಲಾಗುತ್ತಿದೆ. ಇದರಿಂದ, ಅವರಿಗೆ ಇನ್ನೂ ಹೆಚ್ಚಿನ ಸೇವಾ ಭದ್ರತೆಯನ್ನು ನೀಡಲು ಉದ್ದೇಶಿಸಲಾಗಿದೆ ಎಂಬ ಉತ್ತರವನ್ನು ಮಾನ್ಯ ಸಚಿವರು ಈಗಾಗಲೇ ನೀಡಿದ್ದಾರೆ. ಪ್ರತ್ಯೇಕ ನಿಯಮಗಳೆಂದರೆ ಯಾವುದು? ಮತ್ತೆ ಯಾವ ರೀತಿಯಲ್ಲಿ ಹೆಚ್ಚಿನ ಸೇವಾ ಭದ್ರತೆಯನ್ನು ಕೊಡಲಾಗುತ್ತದೆ. ಮಾನ್ಯ ಸಚಿವರೆ, ನನ್ನದೊಂದು ಮನವಿಯೇನೆಂದರೆ, ಗ್ರಾಮ ಪಂಚಾಯಿತಿಗಳಲ್ಲಿ ದುಡಿಯುತ್ತಿರುವಂತಹ ನೌಕರರು Provident Fund (P.F.) ನ ಅಡಿಯಲ್ಲಿ ಬರುವುದಕ್ಕೆ 6 ಜನರಿಗಿಂತ ಕಡಿಮೆ ಇರುವುದರಿಂದ ಆಗುವುದಿಲ್ಲವೆನ್ನುವುದು ನನ್ನ ಭಾವನೆ. ಅದಕ್ಕೆ ಮಾನ್ಯ ಸಚಿವರಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಇಡೀ ತಾಲ್ಲೂಕಿನಲ್ಲಿರುವಂತಹ ಗ್ರಾಮ ಪಂಚಾಯಿತಿಗಳನ್ನು ಒಂದು ಯೂನಿಟ್ ಎಂದು ಮಾಡಿ, ಆ ಒಂದು ಪಿ.ಎಫ್. ನ ಅಡಿಯಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ಸಂಖ್ಯೆ ಎಷ್ಟು? ಎಂಬ ನನ್ನ ಎರಡನೆಯ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಗ್ರೂಪ್ 'ಸಿ' ವೃಂದದಲ್ಲಿ 1556 ಮಂದಿ, ಗ್ರೂಪ್ 'ಡಿ' ವೃಂದದಲ್ಲಿ 661 ಮಂದಿ ಎಂದು ಲಿಖಿತ ಉತ್ತರದಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಇವರನ್ನು ಖಾಯಂ ಮಾಡುವುದಕ್ಕೆ ಸರ್ಕಾರದ ಮುಂದೆ ಏನಾದರೂ ಕ್ರಮವಿದೆಯೇ ಎಂಬುದಕ್ಕೆ ಗುತ್ತಿಗೆ ನೌಕರರನ್ನು ಖಾಯಂಗೊಳಿಸಲು ಯಾವುದೇ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇಷ್ಟು ವರ್ಷಗಳ ಕಾಲ ಅವರ ಸೇವೆಯನ್ನು ಗ್ರಾಮ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯತ್ ಇಲಾಖೆಗೆ ಬಳಸಿಕೊಳ್ಳುತ್ತಿದ್ದೇವೆ. ಅವರು ನಿವೃತ್ತಿ ಹೊಂದಿದ ಮೇಲೆ ಅವರಿಗೆ ಯಾವುದೇ ರೀತಿಯ ಒಂದು ಭದ್ರತೆ ಇರುವುದಿಲ್ಲ. ಮಾನವೀಯತೆಯ ದೃಷ್ಟಿಯಿಂದ ಅವರನ್ನು ಏನಾದರೂ ಖಾಯಂ ಮಾಡುವುದಕ್ಕೆ ಅವಕಾಶವಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ತಮಗೆ ಗೊತ್ತಿರುವ ಹಾಗೆ ನಮ್ಮ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳ ಹಿಂದೆ ಸುಮಾರು 30 ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿ ನೌಕರರನ್ನು ಖಾಯಂಗೊಳಿಸಿ ಒಂದು ಐತಿಹಾಸಿಕ ದಾಖಲೆಯನ್ನು ಮಾಡಿದ್ದೇವೆ.

(ಮುಂದು)

**(1060)17-11-2017/12-50/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ಹೆಚ್.ಕೆ.ಪಾಟೀಲ್(ಮುಂದು):-**

ಮಾನ್ಯ ನಾರಾಯಣಸ್ವಾಮಿರವರಿಗೆ ಗೊತ್ತಿರುವ ಹಾಗೆ ಈವರೆಗೆ ಗ್ರಾಮ ಪಂಚಾಯತಿ ನೌಕರರಿಗೆ ಯಾವುದೇ ರೀತಿಯ ಸೌಲಭ್ಯಗಳರಲಿಲ್ಲ ಎನ್ನುವುದು ನಿಜ. ಆದರೆ, ಇತ್ತೀಚಿನ ದಿನಗಳಲ್ಲಿ ನಾವು ನೌಕರರಿಗೆ ಒಂದು ವರ್ಷಕ್ಕೆ 15 ದಿನಗಳ ಸಾಂದರ್ಭಿಕ ರಜೆ, 15 ದಿನಗಳ ಗಳಿಕೆ ರಜೆ, ಮಹಿಳಾ ನೌಕರರಿಗೆ 180 ದಿನಗಳ ಹೆರಿಗೆ ರಜೆ, ನಿವೃತ್ತಿ ಸೌಲಭ್ಯಕ್ಕೆ ಪ್ರತಿ ವರ್ಷಕ್ಕೆ ಕನಿಷ್ಟ 15 ದಿನಗಳ ವೇತನ ಹಾಗೂ ಗರಿಷ್ಠ 15 ತಿಂಗಳು, ನೌಕರ ಮೃತಪಟ್ಟಲ್ಲಿ ಅವನ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಡುವುದಕ್ಕೆ ಈಗಾಗಲೇ ಆದೇಶಗಳನ್ನು ನೀಡಲಾಗಿದೆ. ಅದೇ ರೀತಿಯಾಗಿ ಗ್ರಾಮಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿರುವ ಅನುಮೋದಿತರಾಗದೇ ಇರುವಂತಹ ಬಹಳಷ್ಟು ನೌಕರರಿಗೆ ಅಂದರೆ, ಪಂಪ್ ಆಪರೇಟರ್ ಆಗಿರಬಹುದು ಅಥವಾ ಸ್ವಚ್ಛತಾಗಾರರಾಗಿರಬಹುದು ಯಾರೇ ಆಗಲಿ ಅಂತಹವರಿಗೆ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನಗಳಿಂದ ಕಡಿಮೆ ವೇತನವನ್ನು ನೀಡುತ್ತಿದ್ದರು. ಒಂದೇ ವೇಳೆ ಅಲ್ಲಿ ನಾಲ್ಕು ಜನ ಕರ್ತವ್ಯ ನಿರ್ವಹಿಸುತ್ತಿದ್ದರೆ, ನಾಲ್ಕೂ ಜನಕ್ಕೂ ವೇತನವನ್ನು ಹಂಚಿಕೆ ಮಾಡುತ್ತಿದ್ದರು. ಅಂತಹ ಸಂದರ್ಭಗಳಲ್ಲಿ 300-400 ರೂಪಾಯಿಗಳು ಒಬ್ಬರಿಗೆ ಲಭ್ಯವಾಗುತ್ತಿತ್ತು. ಇದರಿಂದ ನೌಕರರು ಸಮಾಧಾನವಾಗಿರುತ್ತಿದ್ದರು. ವ್ಯವಸ್ಥೆಯೂ ಸಹ ಇದೇ ರೀತಿ ಮುಂದುವರೆದುಕೊಂಡು ಬಂದಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ನಾವು ಅತ್ಯಂತ ಗಂಭೀರವಾದ ಸುತ್ತೋಲೆಯನ್ನು ಈ ವಿಚಾರದಲ್ಲಿ ಹೊರಡಿಸಿದ್ದೇವೆ. ಕನಿಷ್ಟ ವೇತನಕ್ಕಿಂತ ಕಡಿಮೆ ವೇತನವನ್ನು ಯಾವುದೇ ನೌಕರರಿಗೆ ಕೊಟ್ಟರೆ, ಅದು ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯನಿರ್ವಹಣಾಧಿಕಾರಿ ಅಥವಾ ಮುಖ್ಯ

ಕಾರ್ಯನಿರ್ವಹಣಾಧಿಕಾರಿ ಯಾರೇ ಆಗಿರಲಿ, ಅಂತಹವರ ವಿರುದ್ಧ ಸೂಕ್ತವಾದ ಕಾನೂನು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಆದೇಶವನ್ನು ಈಗಾಗಲೇ ನೀಡಲಾಗಿದೆ.

ಮುಂದುವರೆದು, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ನೌಕರರಿಗೆ ಭವಿಷ್ಯ ನಿಧಿಯನ್ನು ನೀಡುವ ನಿಟ್ಟಿನಲ್ಲಿ ನಮ್ಮ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವಂತಹ ಕನಿಷ್ಠ ವೇತನದ ಶೇಕಡಾ 10 ರಷ್ಟರ ಪಾಲನ್ನು ನೌಕರರಿಂದ ಹಾಗೂ ಉದ್ಯೋಗದಾತನಿಂದ ವೇತನದ ಶೇಕಡ 10 ರಷ್ಟರ ಪಾಲನ್ನು ಭವಿಷ್ಯ ನಿಧಿಗೆ ಸಂಗ್ರಹಿಸುವ ಪ್ರಕ್ರಿಯೆ ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಜಾರಿಗೊಳಿಸಲು ಪ್ರಸ್ತಾವನೆಯನ್ನು ಈಗಾಗಲೇ ಕಳುಹಿಸಲಾಗಿದ್ದು, ಆರ್ಥಿಕ ಇಲಾಖೆಯೊಂದಿಗೆ ಈ ಬಗ್ಗೆ ಚರ್ಚಿಸಲಾಗುತ್ತಿದೆ. ಆದಷ್ಟು ಬೇಗನೆ ಎಲ್ಲಾ ಗ್ರಾಮಪಂಚಾಯತಿಗಳಲ್ಲಿ ನೌಕರರ Service Conditions ಏನಿವೆ, ಅವುಗಳನ್ನು ಅಭಿವೃದ್ಧಿಪಡಿಸಲು ಆಲೋಚಿಸಲಾಗುತ್ತಿದೆ. ಏಕೆಂದರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರುಗಳೆಲ್ಲರೂ ರಾಷ್ಟ್ರನಿರ್ಮಾಣ ಕೆಲಸದಲ್ಲಿ ನಮ್ಮ ಗುರಿ, ಅಪೇಕ್ಷೆ ಮತ್ತು ನಿರೀಕ್ಷೆಗಳಂತೆ ಗುರಿಯನ್ನು ಸಾಧಿಸುತ್ತಿದ್ದಾರೆ. ಅದು ಶೌಚಾಲಯಗಳ ನಿರ್ಮಾಣವಾಗಿರಬಹುದು, ಕುಡಿಯಲು ನೀರು ಒದಗಿಸುವುದರಲ್ಲಿ ಇರಬಹುದು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳ ಮುಖಾಂತರ ಆಸ್ತಿಗಳನ್ನು ಸೃಷ್ಟಿ ಮಾಡುವುದರಲ್ಲಿ ಇರಬಹುದು ಅಥವಾ ಇನ್ನಾವುದೇ ರೀತಿಯಲ್ಲಾದರೂ ಸರಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅಂತಹ ನೌಕರರುಗಳಿಗೆ ಉತ್ತಮವಾಗಿರುವಂತಹ ಸೇವಾ ಭದ್ರತೆಯನ್ನು ನೀಡುವುದಕ್ಕೆ ಅಗತ್ಯವಾಗಿರುವ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3914**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಸವರಾಜ್ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅವರಿಗೆ ಗೊತ್ತಿರುವಂತೆ ವರ್ಷದ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬರುವಂತಹ ಸಾಕಷ್ಟು ಮಳೆಯಿಂದಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಸಾಕಷ್ಟು ಮಳೆಯಾಗಿ ಬಹಳಷ್ಟು ಶಾಲಾ ಕೊಠಡಿಗಳು ಶಿಥಿಲಗೊಂಡಿರುತ್ತವೆ. ಸುಮಾರು 40-50 ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಕೊಠಡಿಗಳೂ ಸಹ ಬಹಳವಾಗಿ ಶಿಥಿಲಗೊಂಡಿವೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದಲ್ಲಿ ಮೇಲ್ಛಾವಣಿಯ ಪದರಗಳು ಬಿದ್ದು ವಿದ್ಯಾರ್ಥಿಗಳಿಗೆ ಗಾಯವಾಗಿ ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿಯೂ ಸಹ ದಾಖಲಾಗಿದೆ. ಇಂತಹ ಪರಿಸ್ಥಿತಿಯನ್ನು ನಾವು ನಮ್ಮ ಭಾಗದ ಪ್ರದೇಶಗಳಲ್ಲಿ ಕಾಣುತ್ತಿದ್ದೇವೆ. ರಾಯಚೂರು ಜಿಲ್ಲೆಯಲ್ಲಿನ ಎಸ್.ಎಲ್.ವಿ. ಹೋಟೇಲ್‌ನ ಬಳಿ ಬಾಲಕಿಯರಿಗಾಗಿ ಪದವಿ ಪೂರ್ವ ಕಾಲೇಜು ಇದೆ. ಅದರಲ್ಲಿ 1000-1200 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾರೆ. ಸದರಿ ಕಾಲೇಜಿನಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆಯಿಲ್ಲ. ಕೇವಲ ಒಂದೆರಡು ಶೌಚಾಲಯಗಳಿವೆ.

ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟದ ಕಾರ್ಯಕ್ರಮವನ್ನು ಜಾರಿಗೊಳಿಸಿದ ನಂತರ, ಎಷ್ಟೋ ಶಾಲೆಗಳಲ್ಲಿ ಅಡುಗೆ ಕೋಣೆಗಳಿಲ್ಲ. ಯಾವುದೇ ಶಾಲೆಯನ್ನು ಮಂಜೂರು ಮಾಡಿದರೆ, ಅಲ್ಲಿ ಸುಸಜ್ಜಿತವಾದ ಅಡುಗೆ ಕೋಣೆಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಕೇವಲ ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಿದರೆ ಸಾಲದು ಅದಕ್ಕೆ ನೀರಿನ ವ್ಯವಸ್ಥೆ, gas connection, ಸ್ಟೀಲ್ ಪಾತ್ರೆಗಳು ಇತ್ಯಾದಿಗಳ ವ್ಯವಸ್ಥೆಯನ್ನೂ ಸಹ ಮಾಡಬೇಕಾಗುತ್ತದೆ. ಇಂತಹ ವ್ಯವಸ್ಥೆಗಳನ್ನು ಮಾಡಿದಾಗ ಮಾತ್ರ ಯೋಜನೆಯ ಪೂರ್ಣ ಫಲ ಸಿಗುತ್ತದೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಕೇವಲ ಎರಡು-ಮೂರು ಕೊಠಡಿಗಳಿರುತ್ತವೆ. ಆ ಪೈಕಿ ಒಂದು ಕೋಣೆಯು ಕುಸಿದು ಹೋಗಿರುತ್ತದೆ ಹಾಗೂ ಮತ್ತೊಂದು ಕೋಣೆಯಲ್ಲಿ ಅಡುಗೆಯನ್ನು ತಯಾರಿಸುತ್ತಾರೆ. ವಿದ್ಯಾರ್ಥಿಗಳಿಗೆ ಮರ-ಗಿಡಗಳ ಅಡಿಯಲ್ಲಿ, ಚಪ್ಪರದ ಕೆಳಗೆ ಪಾಠಗಳನ್ನು ಮಾಡುತ್ತಿರುತ್ತಾರೆ. ಬಹಳಷ್ಟು ಶಾಲೆಗಳಲ್ಲಿನ ಕೊಠಡಿಗಳಿಗೆ ಕಿಟಕಿ-ಬಾಗಿಲುಗಳ ವ್ಯವಸ್ಥೆ ಇರುವುದಿಲ್ಲ. ಕೆಲವೊಂದು ಕೊಠಡಿಗಳು ಸುಮಾರು 50-70 ವರ್ಷಗಳ ಹಿಂದಿನ ಕಟ್ಟಡಗಳಾಗಿರುವುದರಿಂದ ಅವುಗಳು ಶಿಥಿಲಗೊಂಡಿರುತ್ತವೆ. ಕೊಠಡಿಗಳ ಸೂರು ಸೋರುತ್ತಿದೆ. ಕಟ್ಟಡಗಳ ಹೆಂಚುಗಳು ಬಿದ್ದುಹೋಗಿರುತ್ತವೆ. ಮಾನ್ಯ ಶಿಕ್ಷಣ ಸಚಿವರು ನಮ್ಮ ರಾಯಚೂರು ಜಿಲ್ಲೆಗೆ ಉಸ್ತುವಾರಿ ಸಚಿವರಾಗಿದ್ದಾರೆ. ಜಿಲ್ಲೆಯ ಡಿ.ಡಿ.ಪಿ.ಐ.ರವರ ಕಛೇರಿಯ ಪಕ್ಕದಲ್ಲಿಯೇ ಇರುವ ಕನ್ನಡ ಮತ್ತು ಉರ್ದು ಭಾಷೆಗಳ ಶಾಲೆಯ ಕಟ್ಟಡದ ಹೆಂಚುಗಳೆಲ್ಲವೂ ಪೂರ್ತಿಯಾಗಿ ಕಿತ್ತು ಹೋಗಿವೆ. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬೇಸಿಗೆ ಕಾಲದಲ್ಲಿ ಬಿಸಿಲಿನ ತಾಪಮಾನ ಸುಮಾರು 30-45 ಡಿಗ್ರಿ ಸೆಲ್ಸಿಯಸ್‌ವರೆಗೆ ಇರುತ್ತದೆ. ಅಂತಹ ಪ್ರದೇಶದ ಶಾಲೆಗಳಲ್ಲಿ ವಿದ್ಯಾರ್ಥಿಗಳು ಶಾಲಾ ಕಟ್ಟಡದಿಂದ ಹೊರಗಡೆ ಬಂದು ವ್ಯಾಸಂಗ ಮಾಡುವಂತಹ ಪರಿಸ್ಥಿತಿಯುಂಟಾಗಿರುತ್ತದೆ. ಹಾಲಿ ಬಿಡುಗಡೆ ಮಾಡಲಾಗಿರುವ ಅನುದಾನವು ಸಾಕಾಗುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಸಲಹೆಯೊಂದನ್ನು ಕೊಡಲಿಚ್ಛಿಸುತ್ತೇನೆ. ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿದೆ. ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಆರು ಜಿಲ್ಲೆಗಳಲ್ಲಿರುವ ಸರ್ಕಾರಿ ಶಾಲಾ ಕೊಠಡಿಗಳು ಶಿಥಿಲಗೊಂಡಿವೆ, ಕೆಲವೊಂದು ಶಾಲೆಗಳಿಗೆ ಕೌಂಪೌಂಡ್ ವ್ಯವಸ್ಥೆಯಿಲ್ಲ.

ಇಂತಹ ಶಾಲೆಗಳಿಗೆ ಅವಶ್ಯಕವಾಗಿರುವ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ನೀಡಬೇಕಾಗುತ್ತದೆ. ಪ್ರತಿದಿನ ಬೆಳಗ್ಗೆ ಶಾಲೆಯ ಶಿಕ್ಷಕರು ಅಲ್ಲಿನ ವಿದ್ಯಾರ್ಥಿಗಳೊಂದಿಗೆ ಶಾಲೆಗೆ ಬಂದ ಕೂಡಲೇ ಪ್ರಥಮವಾಗಿ ಶಾಲೆಯ ಆವರಣದಲ್ಲಿ ಬಿದ್ದಿರುವ ಖಾಲಿ ಬಾಟಲಿಗಳು, ಪ್ರಾಣಿಗಳ ಎಲುಬಿನ ತುಂಡುಗಳು, ಮಾಂಸಾಹಾರದ ಚೂರುಗಳನ್ನು ಸ್ವಚ್ಛ ಮಾಡಬೇಕು. ಅನಂತರದಲ್ಲಿ ಕೊಠಡಿಗಳಿಗೆ ತೆರಳುವಂತಹ ಪರಿಸ್ಥಿತಿಯುಂಟಾಗಿದೆ. ಯಾವ ಶಾಲೆಗಳಿಗೆ ಕೌಂಪೌಂಡ್ ವ್ಯವಸ್ಥೆಯಿಲ್ಲ, ಅಂತಹ ಶಾಲೆಗಳಿಗೆ ಕೌಂಪೌಂಡ್‌ನ ವ್ಯವಸ್ಥೆಯನ್ನು ಕಲ್ಪಿಸುವ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು**:- ತಾವು ಅಲ್ಲಿನ ವಾಸ್ತವಾಂಶಗಳ ಬಗ್ಗೆ ಬಹಳ ಚೆನ್ನಾಗಿ ವಿವರಿಸಿದ್ದೀರಿ ಆದರೆ, ಅವಶ್ಯವಿರುವ ಕ್ರಮಗಳ ಬಗ್ಗೆ ಸಲಹೆಗಳನ್ನು ನೀಡಲಿಲ್ಲ. ತಾವು ಹೇಳಿರುವ ಅಂಶಗಳನ್ನು ಮಾನ್ಯ ಸಚಿವರು ಕೇಳುತ್ತಿದ್ದಾರೆ ಅಷ್ಟೇ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾಡಿರುವ ಭಾಷಣವನ್ನು ಸಂಬಂಧಪಟ್ಟ ಸಚಿವರು ಕೇಳಿಸಿಕೊಂಡಿದ್ದಾರೆ. ಆದರೆ ಇದು ಪ್ರಶ್ನೋತ್ತರ ಅವಧಿಯಾಗಿದೆ. ಆದ್ದರಿಂದ ಮಾನ್ಯ ಸದಸ್ಯರಿಗೆ ತಮ್ಮ ಉಪಪ್ರಶ್ನೆಗಳನ್ನು ಕೇಳುವುದಕ್ಕೆ ತಾವು ಸೂಚಿಸಬೇಕಾಗುತ್ತದೆ.

**ಸಭಾಪತಿಯವರು**:- ಮಾನ್ಯ ಸದಸ್ಯರಿಗೆ ತಮ್ಮ ಪ್ರಶ್ನೆಯನ್ನು ಕೇಳುವುದಕ್ಕೆ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರೇ, ತಾವು ಹೇಳಿರುವ ವಾಸ್ತವಾಂಶಗಳನ್ನು ಸಚಿವರು ಕೇಳಿದ್ದಾರೆ ಅಷ್ಟೇ. ತಾವು ಮೊದಲು ಪ್ರಶ್ನೆಯನ್ನು ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಯವರೇ, ಶಿಕ್ಷಕರ ಕ್ಷೇತ್ರದ ಸದಸ್ಯರಿಗೆ ಮೂರು ಗಂಟೆಗಳ ಅವಧಿಯವರೆಗೆ ಮಾತನಾಡಲು ಕಾಲಾವಕಾಶವನ್ನು ನೀಡುತ್ತೀರಿ. ಹುಣ್ಣಿಮೆ ಅಥವಾ ಅಮಾವಾಸ್ಯೆಗೆ ಒಂದು ಬಾರಿ ನಮ್ಮ ಪ್ರಶ್ನೆಗಳನ್ನು ಕೇಳಲು ಅವಕಾಶ ದೊರೆಯುತ್ತದೆ. ನಮಗೆ ಅವಕಾಶ ದೊರೆತಾಗ ಎಲ್ಲರೂ ಕಥೆಯನ್ನು ಹೇಳಲಿಕ್ಕೆ ಪ್ರಾರಂಭಿಸುತ್ತಾರೆ.

**ಸಭಾಪತಿಯವರು**:- ಇವತ್ತಿನ ದಿವಸ ಎಲ್ಲಾ ಪ್ರಶ್ನೆಗಳಿಗೂ ಅರ್ಧ ಗಂಟೆಗಳ ಕಾಲಾವಕಾಶವನ್ನು ನೀಡಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಯವರೇ, ಶಿಕ್ಷಕರ ಕ್ಷೇತ್ರದ ಎಲ್ಲಾ ಸದಸ್ಯರುಗಳು ಮಾತನಾಡಲು ಪ್ರಾರಂಭಿಸಿದರೆ ವಿಷಯವು ಮುಕ್ತಾಯಗೊಳ್ಳುವುದೇ ಇಲ್ಲ. ನಾವು ಯಾವಾಗಲಾದರೂ ಒಮ್ಮೆ ಪ್ರಶ್ನೆಯನ್ನು ಕೇಳಲು ಪ್ರಾರಂಭಿಸಿದರೆ, ತಾವು ನಮಗೆ ಕುಳಿತುಕೊಳ್ಳಲು ಹೇಳುತ್ತೀರಿ, ಆದರೆ, ಬೇರೆ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ನೀಡುತ್ತೀರಿ. ಸದಸ್ಯರುಗಳಿಗೆ ಮಾತನಾಡಲು ಅವಕಾಶ ನೀಡುವ ಕುರಿತು ಪ್ರತ್ಯೇಕ ಅವಧಿಯನ್ನು ಮೀಸಲಿರಿಸಿ. ಉದಾಹರಣೆಗೆ ಹೇಳುವುದಾರೆ, ಶಿಕ್ಷಕರ ಕ್ಷೇತ್ರದ ಸದಸ್ಯರಿಗೆ ಮಾತನಾಡಲು ನಾಲ್ಕು ದಿವಸ, ಇನ್ನುಳಿದ ಕ್ಷೇತ್ರಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರುಗಳಿಗೆ ಮೂರು ದಿವಸ ಎಂಬುದಾಗಿ ಪ್ರತ್ಯೇಕಿಸಿ. ಗ್ರಾಮೀಣ ಪ್ರದೇಶದ ಸದಸ್ಯರುಗಳು ರೈತರ ಬಗ್ಗೆ, ಕುಡಿಯುವ ನೀರಿನ ಯೋಜನೆಯ ಬಗ್ಗೆ ಮಾತನಾಡುತ್ತಾರೆ. ಒಂದು ಬಾರಿ ರೈತರ ವಿಷಯ ಪ್ರಸ್ತಾಪವಾದಾಗ ಮಾತನಾಡಲು ಪ್ರಾರಂಭ ಮಾಡಿದರೆ, ಕುಳಿತುಕೊಳ್ಳಲು ಹೇಳುತ್ತೀರಿ. ಆದರೆ, ಶಿಕ್ಷಕರ ಕ್ಷೇತ್ರದ ಸದಸ್ಯರುಗಳಿಗೆ 3-4 ಗಂಟೆಗಳ ಅವಧಿಯವರೆಗೆ ಮಾತನಾಡಲು ಅವಕಾಶವನ್ನು ನೀಡುತ್ತೀರಿ. ನಿನ್ನೆಯ ದಿವಸ ಸುಮಾರು ಮೂರು ಗಂಟೆಗಳ ಕಾಲ ನನಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಪರಿಸ್ಥಿತಿ ಹೀಗಿರುವಾಗ ನಾವು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಯನ್ನೇ ಕೇಳಿದ್ದೇವೆ. ಹೀಗಾದರೂ ಸರಿ, ಅವರುಗಳೂ ನಮ್ಮ ಪ್ರಶ್ನೆಯಲ್ಲಿ ಸಹ ಭಾಗವಹಿಸಲಿ. ನಮ್ಮ ಭಾಷಣವನ್ನು ನೀವು ಕೇಳುವುದಿಲ್ಲ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯದಲ್ಲಿ 10-12 ಸದಸ್ಯರು ಮಾತನಾಡುತ್ತಾರೆ. ಈ ಕಾರಣಕ್ಕಾಗಿಯೇ ನಾವು ಪ್ರಸ್ತುತ ಪ್ರಶ್ನೆಯನ್ನು ಕೇಳಿದ್ದೇವೆ. ಇದಕ್ಕಾದರೂ ಸರಿ, ತಾವು ಮಾತನಾಡಲು ಅವಕಾಶವನ್ನು ನೀಡುವುದಿಲ್ಲ.

**ಸಭಾಪತಿಯವರು**:- ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ನೀವು ಬಹಳ ಚೆನ್ನಾಗಿ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ. ಆದರೆ ನಾನು ಹೇಳುವುದೇನೆಂದರೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಅಂಶವನ್ನು ತಾವು ಹೇಳಲಿಲ್ಲ. ಮಾನ್ಯ ಸಚಿವರೂ ಸಹ ನೀವು ಪ್ರಸ್ತಾಪ ಮಾಡುತ್ತಿರುವ ವಿಷಯಗಳನ್ನು ಆನಂದದಿಂದ ಆಲಿಸುತ್ತಿದ್ದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯ ಸಚಿವರಾಗಿದ್ದಾರೆ. ಅವರು ಹೇಳಿರುವಂತೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳದಿದ್ದರೆ ಸಂಬಂಧಪಟ್ಟ ಸಚಿವರು ತಮ್ಮ ಭಾಷಣವನ್ನು ಕೇಳುತ್ತಾ ಕುಳಿತುಬಿಡುತ್ತಾರೆ. ಹೀಗಾಗಿ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಕ್ಕೆ ಸೂಚಿಸಿ ಎಂಬುದಾಗಿ ಹೇಳಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ತಾವು ತಮ್ಮ ಪ್ರಶ್ನೆಯನ್ನು ಮೊದಲು ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಅಂಶಗಳ ಬಗ್ಗೆ ನಾನು ಸಲಹೆಯನ್ನು ಕೊಡಲು ಪ್ರಾರಂಭಿಸಿದಾಗ, ನನಗೆ ಕುಳಿತುಕೊಳ್ಳಿ ಎಂಬುದಾಗಿ ಹೇಳಿದರು. ನಾನು ಇತರೆ ಸದಸ್ಯರುಗಳ ಹಾಗೆ ಬಹಳ ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ಕೇವಲ ಒಂದು ಅಂಶದ ಬಗ್ಗೆ ಅಷ್ಟೇ ಮಾತನಾಡುತ್ತೇನೆ.

**ಸಭಾಪತಿಯವರು**:- ರಾಯಚೂರು ಜಿಲ್ಲೆಯ ಭಾಗದ ಶಾಲೆಗಳ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆ ಮಾಡಬೇಕು ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಸಚಿವರು ಈ ಬಗ್ಗೆ ಅನುದಾನವನ್ನು ಬಿಡುಗಡೆ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಶಾಲೆಗಳ ಅಭಿವೃದ್ಧಿಗಾಗಿ ಯಾವ ಮೂಲದಿಂದ ಅನುದಾನ ಬಿಡುಗಡೆಯಾಗುತ್ತದೆ ಎಂಬ ಬಗ್ಗೆ ಸ್ಪಷ್ಟವಾಗಿ ನಾನು ಹೇಳುತ್ತೇನೆ. ಇವತ್ತಿನ ದಿವಸ ಹೈದ್ರಾಬಾದ್-ಕರ್ನಾಟಕ ಪ್ರದೇಶಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ವರ್ಷಕ್ಕೆ 1,500 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಶಾಲೆಗಳ ಅಭಿವೃದ್ಧಿಗಾಗಿ ಪ್ರಥಮ ಆದ್ಯತೆಯ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದಾರೆ. ಮಾನ್ಯ ಸಚಿವರಾದ ಶ್ರೀ ಶರಣಪ್ರಕಾಶ್ ಆರ್.ಪಾಟೀಲ್ ರವರು ಈಗಷ್ಟೆ ಸದನದಲ್ಲಿದ್ದರು. ಅವರೇ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ಮಾನ್ಯ ಸಚಿವರು ಈಗಾಗಲೇ ನೀಡಿರುವ ಉತ್ತರದಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಭಾಗಗಳಿಗೆ 19 ಶಾಲೆಗಳಿಗೆ ಅನುದಾನವನ್ನು ನೀಡಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. ಆದರೆ ಸದರಿ ಶಾಲೆಗಳಿಗೆ ತಾವು ಮಂಜೂರಾತಿಯನ್ನು ಮಾತ್ರವೇ ನೀಡಿದ್ದೀರಿ. ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಸದರಿ ಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದೆ. ಆದರೆ, ಈ ಅಂಶವನ್ನು ಮಾನ್ಯ ಸಚಿವರು ಪ್ರಸ್ತಾಪ ಮಾಡಲಿಲ್ಲ. ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಅನುದಾನವನ್ನು ನೀಡುತ್ತದೆ. ಈ ವಿಚಾರದಲ್ಲಿ ನಾನು ನೀಡುವ ಸಲಹೆ ಏನೆಂದರೆ, ಒಂದೇ ಬಾರಿಗೆ ಅವಶ್ಯವಿರುವಷ್ಟು ಹಣವನ್ನು ತೆಗೆದುಕೊಳ್ಳಿ. ಏಕೆಂದರೆ, ಬಹಳಷ್ಟು ಶಾಲಾ ಕೊಠಡಿಗಳು ಶಿಥಿಲಗೊಂಡಿವೆ. ಶಾಲೆಗಳಿಗೆ ಅಡುಗೆ ಮನೆಗಳ, ಶೌಚಾಲಯಗಳ ವ್ಯವಸ್ಥೆಗಳಿಲ್ಲ. ಯಾರಾದರೂ ತಪಾಸಣೆಗೆ ಹೋದರೆ, ಅಲ್ಲಿ ಕೇವಲ ನೋಡುವುದಕ್ಕಾಗಿಯೇ ಶೌಚಾಲಯಗಳಿವೆ. ಅವುಗಳಿಗೆ ಸರಿಯಾದ ನೀರಿನ ಹಾಗೂ ಒಳಚರಂಡಿ ವ್ಯವಸ್ಥೆಗಳಿಲ್ಲ. **(ಮುಂದು)**

(1061) 1.00/17-11-2017/CS.KS

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-** ಹೆಣ್ಣು ಮಕ್ಕಳಾಗಲೀ ಗಂಡು ಮಕ್ಕಳಾಗಲೀ ಆ ಶೌಚಾಲಯಗಳ ಒಳಗೆ ಹೋಗಿ ಶೌಚ ಮಾಡುವುದಕ್ಕೆ ಆಗುವುದೇ ಇಲ್ಲ. ಅಷ್ಟು ಹೊಲಸಾಗಿವೆ. ಕಾಂಪೌಂಡ್ ಇಲ್ಲ. ಆ ಶಾಲೆಗಳ ಆವರಣಗಳಲ್ಲಿ ಬರಿ ಕುಡಿಯುವುದು ಊಟ ಮಾಡುವುದು, ಇದೇ ಮಾಡಿಕೊಂಡು ಬಂದಿದ್ದಾರೆ.

**ಸಭಾಪತಿಯವರು:-** ಇದಕ್ಕೆಲ್ಲ ಹಣ ಹೇಗೆ ಬಿಡುಗಡೆ ಮಾಡಬೇಕೆನ್ನುವುದನ್ನು ಹೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಇದಕ್ಕೆಲ್ಲ ಒಂದು ಸಲ ಹಣ ಮಂಜೂರಾತಿಯನ್ನು ಮಾಡಿಕೊಡಿ. ಹೊಸ ಕೊಠಡಿಗಳನ್ನು ಕಟ್ಟುವುದಕ್ಕಿಂತ ಶಿಥಿಲಗೊಂಡಿರುವ ಕೊಠಡಿಗಳನ್ನು ಮೊದಲು ಸರಿಪಡಿಸಿ. One-time program ಮಾಡಿ, ಅದಕ್ಕೆ 400 ಕೋಟಿ ರೂಪಾಯಿ ಆಗುತ್ತದೋ 500

ಕೋಟಿ ರೂಪಾಯಿ ಆಗುತ್ತದೋ ಎಷ್ಟಾಗುತ್ತದೋ ನಮ್ಮ ಹೈದರಾಬಾದ್-ಕರ್ನಾಟಕ ಭಾಗಕ್ಕೆ ಕೊಟ್ಟು ಬಿಡಿ. ಯೋಜನಾ ಸಚಿವರು ಕೂಡ ಈಗ ಸದನದಲ್ಲಿ ಇದ್ದಾರೆ. ನಮ್ಮ ದುರ್ದೈವ ಏನೆಂದರೆ ನಮ್ಮ ಯೋಜನಾ ಸಚಿವರು ಸಹಿ ಮಾಡಿ ಕೊಟ್ಟರೂ ಸಹ ಕಾರ್ಯದರ್ಶಿಯವರು ಅದು ಬರುವುದಿಲ್ಲ, ಇದು ಬರುವುದಿಲ್ಲ ಎಂದು ಹೇಳುತ್ತಾರೆ. ಶಾಲೆಗಳ ರಿಪೇರಿ ಮಾಡಲಿಕ್ಕೆ ಹಣ ಕೇಳಿದೆವು, ಸಚಿವರು ಕೂಡ ಸಹಿ ಮಾಡಿ ಕೊಟ್ಟರು ಆದರೆ ಶಾಲೆಗಳಿಗೆ ಹಣ ಬರುವುದಿಲ್ಲ ಎಂದು HKDB (Hyderabad Karnataka Development Board) ಕಾರ್ಯದರ್ಶಿಯವರು ಹೇಳುತ್ತಾರೆ. ಈ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವುದು ಹೇಗೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ., ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಕೇಳಿರುವ ಸಮಸ್ಯೆ ಇಡೀ ರಾಜ್ಯದಲ್ಲಿದೆ. ಅವರು ವಿಶೇಷವಾಗಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಬಗ್ಗೆ ಕೇಳಿದ್ದಾರೆ. ಆ ಭಾಗದಲ್ಲಿರುವ ಶಾಲೆಗಳ ದುರಸ್ಥಿಯನ್ನು ಮಾಡುವುದಕ್ಕೆ ನಾನು ಸ್ವತಃ ಉಸ್ತುವಾರಿ ಸಚಿವನಾಗಿರುವುದರಿಂದ ಸುಮಾರು 3 ಕೋಟಿ 56 ಲಕ್ಷ ರೂಪಾಯಿಗಳನ್ನು ಇದುವರೆವಿಗೂ ಬಿಡುಗಡೆ ಮಾಡಿದ್ದೇನೆ. ಪ್ರಸಕ್ತ ಸಾಲಿನಲ್ಲಿ ನಾನು 1 ಕೋಟಿ 90 ಲಕ್ಷ ರೂಪಾಯಿಗಳನ್ನು ಹೊಸ ಕೊಠಡಿಗಳಿಗಾಗಿ ಮತ್ತು 63 ಲಕ್ಷ ರೂಪಾಯಿಗಳನ್ನು ನಾನು ದುರಸ್ಥಿಗಾಗಿ ಬಿಡುಗಡೆ ಮಾಡಿದ್ದೇನೆ. ಇವರೆಗೆ ನಾನು ನಮ್ಮ ರಾಜ್ಯವಲಯದಲ್ಲಿ ಸರ್ವ ಶಿಕ್ಷಣ ಅಭಿಯಾನ, SCP (Special component plan),TSP (Tribal Sub Plan), Special Development planning. ಇದೆಲ್ಲವೂ ಸೇರಿ 369 ಕೋಟಿ ರೂಪಾಯಿಗಳನ್ನು ಇಡೀ ರಾಜ್ಯ ವ್ಯಾಪ್ತಿಗಾಗಿ ಬಿಡುಗಡೆ ಮಾಡಿದ್ದೇನೆ. ಆ ಹಣ ನೇರವಾಗಿ ಜಿಲ್ಲಾ ಪಂಚಾಯಿತಿಗಳಿಗೆ ಹೋಗುತ್ತದೆ.

**ಶ್ರೀ ಸೋಮಣ್ಣ ಮ ಬೇವಿನಮರದ:-** ಮಾನ್ಯ ಸಭಾಪತಿಯವರೇ, ನಾನು ಒಂದು ವರ್ಷದ ಹಿಂದೆ ಕೇಳಿದ ಪ್ರಶ್ನೆಗೆ ಇದೇ ಉತ್ತರವನ್ನು ನೀಡಲಾಗಿದೆ. ಈ ವರ್ಷವೂ ಕೂಡ ಇದೇ ಉತ್ತರವನ್ನು ಮಾನ್ಯ ಸಚಿವರು ನೀಡುತ್ತಿದ್ದಾರೆ. ದಯಮಾಡಿ ಮಾನ್ಯ ಸಚಿವರು ಬರೆದಂತಹ ಅಕ್ಷರಗಳಿಗೆ ಶಬ್ದಗಳಿಗೆ ಮತ್ತು ಅವರ ಸಹಿ ಮಾಡಿದಂತಹ ಕಡತಕ್ಕೆ ಮಹತ್ವ ಕೊಡುವಂಥದ್ದು ಆಗಬೇಕೆನ್ನುವುದು ನನ್ನ ಭಾವನೆ. ಸ್ವತಃ ನಾನು ಒಂದು ವರ್ಷದ ಹಿಂದೆ ಸದನದಲ್ಲಿ ಕೇಳಿದಂತಹ ಪ್ರಶ್ನೆಗೆ ಸಹಿ ಮಾಡಿದ ಉತ್ತರ ನೀಡಿದ ಸಚಿವರ ಮಾತು ಇನ್ನು ಜಾರಿಯಾಗಿರುವುದಿಲ್ಲ.

**ಸಭಾಪತಿಯವರು:-** ಆ ಶಾಲೆಗಳಿಗೆ ಹಣ ಬೇಡವೇ? ಸಚಿವರಿಗೆ ಉತ್ತರ ನೀಡಲು ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಯ ರಾಯರೆಡ್ಡಿ:-**ಮಾನ್ಯ ಸಚಿವರಾದ ತನ್ವೀರ್ ಸೇಠ್‌ರವರ ಉತ್ತರಗಳನ್ನು ನೋಡಿದಾಗ ಅವರು ಮಾತು ಬದಲಾಯಿಸುವ ಸಚಿವರಲ್ಲ ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ್ದ 22 ಕೊಠಡಿಗಳ ಬಗ್ಗೆ ಉತ್ತರ ನೀಡಿದ್ದೇನೆ.

**ಶ್ರೀ ಸೋಮಣ್ಣ ವಿ ಬೇವಿನಮರದ:-** ಮಾನ್ಯ ಸಭಾಪತಿಯವರೆ, ಸಚಿವರು ಈ ಬಗ್ಗೆ ಅಧಿಕಾರಿಗಳಿಗೆ ಒಂದು ನಿರ್ದೇಶನ ನೀಡಲಿ. ಏಕೆಂದರೆ ಮಕ್ಕಳು ರಸ್ತೆಗಳಲ್ಲಿ ಮತ್ತು ಗಿಡದ ಬುಡದಲ್ಲಿ ಕುಳಿತು ಮಕ್ಕಳು ಶಾಲೆ ಕಲಿಯುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಎರಡು ಜಿಲ್ಲೆಗಳ ಬಗ್ಗೆ ಮಾತ್ರ ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಉತ್ತರ ಕೊಡಿ. ಇಡೀ ರಾಜ್ಯದ ಉತ್ತರ ಕೊಡಬೇಡಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಶಾಲೆಗಳಿಗಾಗಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಹಣ ಬಿಡುಗಡೆ ಮಾಡಿರುವ ಬಗ್ಗೆ ಮಾಹಿತಿಯನ್ನು ನೀಡಿದ್ದೇನೆ. ಇದರ ಜೊತೆಗೆ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೂ ಕೂಡ ನಾನು ಪತ್ರ ಬರೆದು ಈ ಮೈಕ್ರೋ ಯೋಜನೆಯಲ್ಲಿ ಕ್ಷೇತ್ರವಾರು ಶಾಸಕರುಗಳಿಗೆ ಅನುದಾನ ಏನು ನೀಡುತ್ತಾರೆ, ಅದರಲ್ಲಿ ಶೇಕಡ 30ರಷ್ಟು institutional finance ಸಂಸ್ಥೆಗಳಿಗೆ ಮತ್ತು ಸರ್ಕಾರಿ ಶಾಲೆಗಳಿಗೆ ಹಣ ಖರ್ಚು ಮಾಡಬೇಕೆನ್ನುವ ಒಕ್ಕಣೆಯ ಪತ್ರವನ್ನು ಬರೆದು ಎಲ್ಲಾ ಭಾಗದ ಶಾಸಕರುಗಳಿಗೆ ಮತ್ತು ಮಂಡಳಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಈ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾದಲ್ಲಿ ಆ ಭಾಗದ ಶಾಸಕರು ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಕೂಡ ನಮ್ಮ ಜೊತೆ ಇಡೀ ಅವರ ಕ್ಷೇತ್ರದಲ್ಲಿರುವ ಶಾಲೆಗಳನ್ನು ಏಕಕಾಲಕ್ಕೆ ಯಾವ ರೀತಿಯಲ್ಲಿ ದುರಸ್ಥಿ ಮಾಡಬೇಕೆನ್ನುವುದರ ಬಗ್ಗೆ 15 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿ, 7 ಕೋಟಿ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ, ಮೂರುವರೆ ಕೋಟಿ ರೂಪಾಯಿಗಳನ್ನು ನಾನು ನೀಡಿದ್ದೇನೆ. ಇಂತಹ ವಿಚಾರಗಳಲ್ಲಿ ಆ ಭಾಗದ ಶಾಸಕರುಗಳು HKDB ಹಣ ಮತ್ತು ಸರ್ಕಾರದಿಂದ ನಾವು ನೀಡಬೇಕಾಗಿರುವ ಹಣ, ಈ matching grant ತೆಗೆದುಕೊಂಡು ಅವರವರ ಕ್ಷೇತ್ರಗಳಲ್ಲಿ ಕೆಲಸ ಮಾಡುವುದಾದರೆ ನಾನು ಮತ್ತು ನನ್ನ ಇಲಾಖೆ ಅವರ ಜೊತೆಯಲ್ಲಿ ಕೈ ಜೋಡಿಸಿ ಕೆಲಸ ಮಾಡುವುದಕ್ಕೆ ಮುಂದಾಗುತ್ತದೆ. ಈ ಶಾಲೆಗಳ ಆಸ್ತಿಯನ್ನು ಸಂರಕ್ಷಣೆ ಮಾಡುವುದಕ್ಕೂ ಸಹ ಇತ್ತೀಚೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಒಂದು ಆದೇಶವನ್ನು ಮಾಡಿದ್ದೇನೆ. ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳ ಮೇಲುಸ್ತುವಾರಿ ನಡೆಸಲು ಎಸ್ಟೇಟ್ ಆಫೀಸರ್ ಆಗಿ ಪದೋನ್ನತಿಯನ್ನು ನೀಡಿ, ಆ ಶಾಲೆಗಳ ರಕ್ಷಣೆ ಮಾಡುವಂತಹ ಕೆಲಸವನ್ನು ಕೂಡ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಶಾಲಾ ಪ್ರದೇಶದ ಒತ್ತುವರಿ ಆಗಿದೆ, ಅದನ್ನೆಲ್ಲ ತೆಗೆಯುತ್ತಿದ್ದೇವೆ. ಕಾಂಪೌಂಡ್‌ಗಳನ್ನು ನಿರ್ಮಿಸುವ ಕೆಲಸವನ್ನು ಮಾಡುತ್ತಿದ್ದೇವೆ. ವಿಶೇಷವಾಗಿ ಆ ಭಾಗದಲ್ಲಿರುವ ಶಾಲೆಗಳಿಗೆ ಶೌಚಾಲಯಗಳನ್ನು ಕೊಡುವುದಕ್ಕೆ ನಾನು ಒಂದು ವಿಶೇಷ ಕಾರ್ಯಕ್ರಮವನ್ನು ರೂಪಿಸಿಕೊಳ್ಳುತ್ತಿದ್ದೇನೆ. ಹಾಗೆಯೇ ಎಲ್ಲೆಲ್ಲಿ ಅಡಿಗೆ ಕೋಣೆಗಳ ಅವಶ್ಯಕತೆ ಇದೆ ಅಲ್ಲಲ್ಲಿ ಅದನ್ನು ನೀಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ 4295**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿದಂತಹ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನಾನು ಕೇಳಿರುವ ಮೊದಲನೇ ಪ್ರಶ್ನೆಗೆ ದಿನಾಂಕ 28-1-2017ರಂದು ನಡೆದ ಸಚಿವಸಂಪುಟ ಸಭೆಯಲ್ಲಿ ರೂ.150 ಕೋಟಿ ರೂಪಾಯಿಗಳ ಅನುಮೋದನೆ ನೀಡಿದ್ದು ಅದರಲ್ಲಿ 106.96 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಹಣದಲ್ಲಿ 16.96 ಕೋಟಿ ರೂಪಾಯಿಗಳನ್ನು ಸಮಸ್ಥೆಯ ಸ್ಥಾಪನೆ ಸಂಬಂಧ ಪ್ರಾಥಮಿಕ ಆವರ್ತಕ ವೆಚ್ಚಗಳಿಗಾಗಿ ಬಳಸಿಕೊಳ್ಳಲೂ ಅನುಮೋದನೆ ನೀಡಲಾಗಿದೆ ಎಂದು ಉತ್ತರ ನೀಡಿದ್ದಾರೆ. ಮುಂದುವರೆದು ಇದು ಡೀಮ್ಡ್ ಯೂನಿವರ್ಸಿಟಿ ಎಂದು ಹೇಳುತ್ತಾರೆ. ಡೀಮ್ಡ್ ಯೂನಿವರ್ಸಿಟಿ ಮಾಡುವುದಕ್ಕೆ ಇದುವರೆಗೆ ಯಾವುದಾದರು ಕಾಯ್ದೆ, ಅಥವಾ Ordinance ರಚನೆ ಆಗಿದೆಯೇ ಎಂದರೆ ಇಲ್ಲ ಎಂದು ಹೇಳಿದ್ದಾರೆ. ಯಾವುದೇ ಕಾಯ್ದೆ ಅಥವಾ Ordinance ಇಲ್ಲದೇ Autonomous body ಮಾಡುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ ಈ ಸಂಸ್ಥೆಯನ್ನು ಸಹಕಾರಿ ಸಂಘಗಳ ಅಧಿನಿಯದಡಿಯಲ್ಲಿ ನೋಂದಾವಣಿ ಮಾಡಲಾಗಿದೆ ಎಂದು ಉತ್ತರ ನೀಡುವುದರ ಮೂಲಕ ಪರಿಪೂರ್ಣವಾಗಿ ಅವರು ಈ ಸದನಕ್ಕೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದಾರೆ. ಈ ಸಂಸ್ಥೆ ಸಹಕಾರ ಸಂಘಗಳ ಅಧಿನಿಯದಡಿಯಲ್ಲಿ ನೊಂದಣಿ ಆಗಿರುವುದಿಲ್ಲ. ಈ ಬಗ್ಗೆ ಮಾಹಿತಿಗಳಿದ್ದಲ್ಲಿ ದಯಮಾಡಿ ಈ ಸಂಸ್ಥೆ ಯಾವಾಗ ಸಹಕಾರ ಸಂಘಗಳ ನಿಯಮಗಳಿಡಿಯಲ್ಲಿ ನೊಂದಣಿಯಾಯಿತು ಎನ್ನುವುದನ್ನು ಹೇಳಬೇಕಾಗುತ್ತದೆ. ಇದರಲ್ಲಿ ಎಷ್ಟು ಜನ promoters ಇದ್ದಾರೆ ಎನ್ನುವ ಮಾಹಿತಿಯನ್ನು ಕೂಡ ನೀಡಬೇಕಾಗುತ್ತದೆ. ಇಂತಹ ತಪ್ಪು ಮಾಹಿತಿಗಳನ್ನು ದಯಮಾಡಿ ಸದನಕ್ಕೆ ನೀಡಬಾರದೆಂದು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ. ನನ್ನ ಎರಡನೆಯ ಪ್ರಶ್ನೆಗೆ ಈ ಸಂಸ್ಥೆ ಬೆಂಗಳೂರು ವಿಶ್ವವಿದ್ಯಾನಿಲಯದಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ ಎನ್ನುವ ಉತ್ತರವನ್ನು ನೀಡಿದ್ದಾರೆ. Once it functioning under the control Bangalore University automatically, it comes under the control of Collegiate Director ಇಲ್ಲಿ Collegiate Director ಅನ್ನು committee member ಮಾಡಿದ್ದಾರೆ. ಅದನ್ನು ಇಲ್ಲ ಎಂದು ಹೇಳುತ್ತಾರೆ. ಮತ್ತೆ ಮುಂದುವರೆದು ಒಂದು ಇದನ್ನು ಡೀಮ್ಡ್ ಯೂನಿವರ್ಸಿಟಿ ಮಾಡಿದ್ದೀರಾ ಎಂದರೆ ಅಲ್ಲಿ ಇಲ್ಲ ಎಂದು ಹೇಳುತ್ತಾರೆ, ಉತ್ತರದ ಮತ್ತೊಂದು ಕಡೆಯಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗೆ ಅವರ ಉತ್ತರದಲ್ಲಿಯೇ ಗೊಂದಲಗಳನ್ನು ಸೃಷ್ಟಿ ಮಾಡಿದ್ದಾರೆ. ಮತ್ತೆ ಪ್ರೊ॥ ಕುಟಿನೋ ವಿಶ್ರಾಂತ ಕುಲಪತಿಗಳ ಅಧ್ಯಕ್ಷತೆಯಲ್ಲಿ ತಜ್ಞರ ಒಂದು ಸಮಿತಿಯನ್ನು ರಚಿಸಲಾಗಿದ್ದು ಕರಡು ನಿಯಮಾವಳಿಗಳನ್ನು ರಚಿಸಲಾಗಿದೆ. ಅಲ್ಲಿಯವರೆಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಸಂಸ್ಥೆ ತಾತ್ಕಲಿಕವಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಮನ್ನಣೆ ಪಡೆದಿದೆ ಎಂದು ಹೇಳಿದ್ದಾರೆ. ಈಗಾಗಲೇ ಇವರು ಬೆಂಗಳೂರು ವಿಶ್ವವಿದ್ಯಾಲಯದ ಮನ್ನಣೆಯನ್ನು ಪಡೆದು 55 ವಿದ್ಯಾರ್ಥಿಗಳನ್ನು ಕೂಡ ನೇಮಕ ಮಾಡಿಕೊಂಡಿದ್ದಾರೆ. ಅದನ್ನು ಉತ್ತರದಲ್ಲಿ ಏಕೆ ಹೇಳಿಲ್ಲವೆನ್ನುವುದು ನನಗೆ ಪ್ರಶ್ನೆಯಾಗಿ ಉಳಿದುಕೊಂಡಿದೆ. ಮತ್ತೆ 4 ತಿಂಗಳುಗಳ ಅವಧಿಗೆ ಒಬ್ಬ ಖಾಯಂ ನಿರ್ದೇಶಕನನ್ನು ನೇಮಿಸುವುದಕ್ಕೆ ಯಾವುದು ಮೊದಲು ಅದಕ್ಕೆ ಸಮಿತಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಇಲ್ಲಿರುವ ಪ್ರಶ್ನೆ ಏನೆಂದರೆ, when the proposed Autonomous Body was formed, ಶ್ರೀಯುತ ಡಾ.ಅನೂಪ್ ಪೂಜಾರಿ ಎನ್ನುವ ನಿವೃತ್ತ ಐಎಎಸ್ ಅಧಿಕಾರಿಯನ್ನು ಒಬ್ಬ ನಿರ್ದೇಶಕನನ್ನಾಗಿ ಪ್ರಸ್ತಾವಿಕವಾಗಿ ನೇಮಕ ಮಾಡಿದರು. ಇವರು ನೀಡಿದಂತಹ ಪ್ರಸ್ತಾವನೆಗಳಿಗೆ ಅವರು ಯಾವಾಗ ಅನುಮೋದನೆ ಮತ್ತು ಸಹಕಾರವನ್ನು ನೀಡಲಿಲ್ಲ ಆಗ ಅವರಿಂದ ರಾಜೀನಾಮೆಯನ್ನು ಪಡೆದು ಈಗ ಶ್ರೀ ದೇಶಪಾಂಡೆ ಎನ್ನುವವರನ್ನು ತಂದು ನಿರ್ದೇಶಕರನ್ನಾಗಿ ತಂದು ಕೂರಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ 200 ಕೋಟಿ ರೂಪಾಯಿಗಳ ವ್ಯವಹಾರವನ್ನು ನಡೆಸಲು ಒಬ್ಬ ತಾತ್ಕಾಲಿಕ ನಿರ್ದೇಶಕರನ್ನು ನೇಮಿಸುವುದು ಎಷ್ಟು ಸರಿ? ಒಬ್ಬ ಸಿಇಓ ಅವರನ್ನು ತಾತ್ಕಾಲಿಕ ನಿರ್ದೇಶಕರನ್ನಾಗಿ ನೇಮಿಸಿ, ಅವರ ಮೇಲೆ ಯಾವ ಹೊಣೆಗಾರಿಕೆಯನ್ನು ಹೊರಿಸಲು ಸಾಧ್ಯ? ಒಂದು ವೇಳೆ ಹಣದ ದುರ್ಬಳಕೆ ಆಯಿತು, what responsibility you are going to fix on the temporary Director. 2017ರಲ್ಲಿ ನೇಮಕ ಮಾಡಲಾಗಿದೆ ಎಂದು ಉತ್ತರದಲ್ಲಿಯೇ ಹೇಳಿದ್ದಾರೆ. ಒಬ್ಬ ಶಾಶ್ವತ ನಿರ್ದೇಶಕರನ್ನು ನೇಮಿಸಲು ಇಷ್ಟು ದಿವಸ ಸಮಯ ಬೇಕೇ? 4 ತಿಂಗಳು ಅಥವಾ ನಿರ್ದೇಶಕರ ನೇಮಕ ಆಗುವವರೆಗೆ ಎಂದು 200 ಕೋಟಿ

ರೂಪಾಯಿಗಳ ವ್ಯವಹಾರವನ್ನು ನಡೆಸುವ proposed autonomous bodyಗೆ, ಒಬ್ಬ temporary Director ಅನ್ನು ಇಟ್ಟುಕೊಂಡು ಕೆಲಸ ಮಾಡುತ್ತೇವೆ ಎಂದರೆ based on what intention and for what purpose you will work on it? ಇದಾದ ಮೇಲೆ ನನ್ನ ಮುಂದಿನ ಪ್ರಶ್ನೆ ಏನೆಂದರೆ..,

**ಸಭಾಪತಿಯವರು:-** ಈಗ ರಮೇಶ್ ಬಾಬುರವರೆ ನೀವು ಪ್ರಶ್ನೆಯನ್ನು ಕೇಳಿ. ನಿಮ್ಮಂಥವರು ಅರ್ಥ ಮಾಡಿಕೊಳ್ಳುವ ಶಕ್ತಿ ಇರುವವರು ಪ್ರಶ್ನೋತ್ತರ ಅವಧಿ 2 ಗಂಟೆಗಳ ಕಾಲ ನಡೆದಾಗಲೂ ಸಹ ತಮ್ಮ ಪ್ರಶ್ನೆಗಳನ್ನೇ ಇಷ್ಟು ಉದ್ದ ಮಾಡಿದರೆ, ನಿಮಗೆ ಸರಿಯಾದ ಉತ್ತರ ಸಿಗುವುದಿಲ್ಲ. ಸಚಿವರು ಏನಾದರೂ ಉತ್ತರ ಹೇಳುತ್ತಾರೆ, ನಾನು ಆ ಪ್ರಶ್ನೆಯನ್ನು ಅಲ್ಲಿಗೆ ಮುಗಿಸುತ್ತೇನೆ. ಪ್ರಶ್ನೆ ಕೇಳುವುದು ಬಿಟ್ಟು explain ಮಾಡಿಕೊಂಡು ಹೋದರೆ ಹೇಗೆ? Ask a question. Don't make a statement.

(ಮುಂದು)

(1062)/17-11-2017/1-10/ಎಲ್ಎಂ/ಕೆಎಸ್

**ಸಭಾಪತಿಯವರು(ಮುಂದು):-** ಅನುಭವಿ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಸದಸ್ಯರಿಗೆ ಪ್ರಶ್ನೆ ಕೇಳಲು ಹೇಳಿ ಭಾಷಣ ಮಾಡುವುದು ಬೇಡ ಎಂದು ಆಗಲೇ ಹೇಳಿದರು. ಅದನ್ನು ನಾನು ಆಗಲೇ ಇಂಗ್ಲೀಷ್‌ನಲ್ಲಿ, you are making a statement, don't do that. Ask question ಎಂದು ಹೇಳಿದೆ. ಪ್ರಶ್ನೆ ಕೇಳಿ ಅವರು ಉತ್ತರ ಹೇಳುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ರಮೇಶ್‌ಬಾಬುರವರ ಪ್ರಶ್ನೆಗೆ ವಿವರವಾದ ವಿವರಣೆಯನ್ನು ಕೊಟ್ಟಿದ್ದೇನೆ. ಅದನ್ನು ಓದಿದ್ದರೆ ಸಾಕಿತ್ತು. ಆದರೂ ಅವರು ಉಪಪ್ರಶ್ನೆಯನ್ನು ಕೇಳುತ್ತಿದ್ದಾರೆ. ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಡೀಮ್ಡ್ ವಿಶ್ವವಿದ್ಯಾಲಯವನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಕಾಯಿದೆ ಹೊರಡಿಸಿದೆ ಎಂದು ಹೇಳಿದ್ದಾರೆ. ಡೀಮ್ಡ್ ವಿಶ್ವವಿದ್ಯಾಲಯವನ್ನು ಕೊಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ ಎಂದು ಸ್ಪಷ್ಟಪಡಿಸಿದ್ದೇನೆ. Deemed to be University is to be granted by the UGC (University Grants Commission). ಆದ್ದರಿಂದ ಇದನ್ನು autonomous ಸಂಸ್ಥೆಯನ್ನಾಗಿ ಮಾಡಬೇಕೆಂದು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ಒಂದು ಸಂಸ್ಥೆಯನ್ನು autonomous ಮಾಡಬೇಕಾದರೆ RCS ಆಕ್ಟ್‌ನಲ್ಲಿಯೇ ಮಾಡಬೇಕಾಗುತ್ತದೆ. ಉದಾಹರಣೆಗೆ ಕೇಂದ್ರ ಸರ್ಕಾರ ಧಾರವಾಡ ಜಿಲ್ಲೆಗೆ ಐಐಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯನ್ನು ಕೊಟ್ಟಿತು. ಐಐಟಿ ಯನ್ನು ಇದರಲ್ಲಿಯೇ ರಿಜಿಸ್ಟರ್ ಮಾಡಲಾಗಿದೆ. ಅದರ ಕಾಪಿ ಬೇಕಾದರೆ ಕೊಡುತ್ತೇನೆ. If you want a copy, I will provide it.

**Sri RAMESH BABU:-** Autonomous Body ಮಾಡಲು ಏನು ಕಾಯಿದೆ ಮಾಡಿದ್ದೀರಿ ಅದನ್ನು ಹೇಳಿ. ನೀವು ಉತ್ತರ ಕೊಟ್ಟಿರುವುದು ಸಹಕಾರಿ ಸಂಘಗಳ ಕಾಯಿದೆ ಬಗ್ಗೆ. ಅದು ಹಾಗೆ ಆಗುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೆ, ಅದರ copy ಅನ್ನು ಕೊಡುತ್ತೇನೆ ಎಂದು ಹೇಳಿದ್ದೇನೆ. ಯಾವ ಕಾನೂನಿನ ಪ್ರಕಾರ ರಿಜಿಸ್ಟರ್ ಮಾಡಿದ್ದೇವೆ ಎನ್ನುವ copy ಅನ್ನು ಕೊಡುತ್ತೇನೆ. ಧಾರವಾಡದ ಐಐಟಿ ಯನ್ನು ಕೂಡಾ ನಾವು ಇದೇ ರೀತಿ ರಿಜಿಸ್ಟರ್ ಮಾಡಿದ್ದೇವೆ. ಏಕೆಂದರೆ ರಾಜ್ಯ ಸರ್ಕಾರ 470 ಎಕರೆ ಜಮೀನನ್ನು ಕೊಟ್ಟಿದೆ. ಹೀಗಾಗಿ ನಿಯಮಾವಳಿ ಪ್ರಕಾರ ರಜಿಸ್ಟರ್ ಮಾಡಿದ್ದೇವೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ. ತಮಗೆ ಕಾಪಿಯನ್ನು ಕಳುಹಿಸಿಕೊಡುತ್ತೇನೆ. 28-01-2017ರಂದು ನಡೆದಂತಹ ಸಚಿವ ಸಂಪುಟ ಸಭೆಯಲ್ಲಿ 150 ಕೋಟಿ ರೂ.ಗಳನ್ನು ಮೊದಲನೆಯ ಹಂತದ ಕಟ್ಟಡಕ್ಕಾಗಿ ಅನುಮೋದನೆಯನ್ನು ನೀಡಲಾಗಿದೆ ಮತ್ತು Governing Council ಅನ್ನು ರಚನೆ ಮಾಡಲು ಅನುಮೋದನೆಯನ್ನು ನೀಡಲಾಗಿದೆ. ಹೀಗಾಗಿ ಇದೊಂದು ಸ್ವಾಯತ್ತ ಸಂಸ್ಥೆ autonomous ಎಂದು ಅನುಮೋದನೆಯನ್ನು ನೀಡಲಾಗಿದೆ. ಮೊದಲನೆಯ ಹಂತದ ಕಟ್ಟಡದಲ್ಲಿ Administrative block, Academic block ಇವುಗಳನ್ನು ಕಟ್ಟಲು ತೀರ್ಮಾನ ತೆಗೆದುಕೊಂಡು ಸಚಿವ ಸಂಪುಟದ ಅನುಮೋದನೆಯನ್ನು ತೆಗೆದುಕೊಂಡು ಟೆಂಡರ್ ಕರೆಯಲಾಗಿದೆ. The tender is under process. 16.96 ಕೋಟಿ ರೂ.ಗಳನ್ನು ಸಂಬಳ ಮತ್ತು ಬೇರೆ-ಬೇರೆ ಖರ್ಚುಗಳಿಗಾಗಿ ಆವರ್ಥ ನಿಧಿ ಎಂದು ಇಟ್ಟುಕೊಂಡಿದ್ದೇವೆ. 90 ಕೋಟಿ ರೂ.ಗಳನ್ನು ಕಟ್ಟಡ ಕಟ್ಟಲು ಮೊದಲೇ ಬಿಡುಗಡೆ ಮಾಡಲಾಗಿದೆ. ಏಜೆನ್ಸಿ ಹೌಸಿಂಗ್ ಬೋರ್ಡ್‌ಗೆ ಕೊಡಲಾಗಿದೆ. ಹೌಸಿಂಗ್ ಬೋರ್ಡ್‌ನವರು ಟೆಂಡರ್ ಕರೆದಿದ್ದಾರೆ. ತಮಗೆ ಗೊತ್ತಿದೆ ಟೆಂಡರ್ ಆದರೆ 1/3rd ಹಣ ಕೊಡಬೇಕಾಗುತ್ತದೆ. ಅದು ಸರ್ಕಾರದ ಲೋಕೋಪಯೋಗಿ ಇಲಾಖೆಯಾಗಿದ್ದರೂ ಸರಿ ಹಣವನ್ನು ಕೊಡಬೇಕಾಗುತ್ತದೆ. ಆ ಪ್ರಕಾರ ಹಣವನ್ನು ಕೊಟ್ಟಿದ್ದೇವೆ. The tender is under process. ನಿಯಮಾವಳಿಗಳ ಪ್ರಕಾರ ಅನುಷ್ಠಾನ ಮಾಡಲು ಹೇಳುತ್ತೇವೆ. Autonomous Body ಮಾಡಿದ್ದೀರಿ ಆದರೆ ಇನ್ನು ಕಾಯಿದೆ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. Yes, I do agree. Autonomous Body

ಮಾಡಿದ ತಕ್ಷಣ ಎಲ್ಲವನ್ನು ಮಾಡಬೇಕು ಎಂದು ಅಲ್ಲ. ಅದಕ್ಕಾಗಿ ನಾವು ತೀರ್ಮಾನವನ್ನು ತೆಗೆದುಕೊಂಡು, ಯಾವ ರೀತಿ ನಿಯಮಾವಳಿಗಳ ಪ್ರಕಾರ Autonomous Body ಯನ್ನು ರಚನೆ ಮಾಡಬೇಕು ಎಂದು ಯೋಚಿಸಬೇಕಾಗುತ್ತದೆ. ಅದಕ್ಕಾಗಿ Ex- Vice Chancellor ರಿಗೆ ಮತ್ತು ಬೇರೆ-ಬೇರೆ ತಜ್ಞರಿಗೆ ರೂಲ್ಸ್ ಮಾಡಲು ಹೇಳಿದ್ದೇವೆ. ಅವರು ಈ ತಿಂಗಳೊಳಗೆ ನಿಯಮಾವಳಿಗಳನ್ನು ರಚನೆ ಮಾಡಿಕೊಡುತ್ತಾರೆ. ಅಲ್ಲಿಯವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ affiliation ಕೊಡಲು, ಏಕೆಂದರೆ ಈಗ ಪ್ರಾರಂಭವಾಗಿರುವುದು B.Sc (Hons) ಇದೇ ವರ್ಷ ಅವರಿಗೆ ಪದವಿ ಕೊಡುವುದಿಲ್ಲ. ವಿದ್ಯಾರ್ಥಿಗಳಿಗೆ ಪದವಿ ಕೊಡಬೇಕಾದರೆ ಇನ್ನು ಮೂರು ವರ್ಷ ಬೇಕಾಗುತ್ತದೆ. ಅಷ್ಟರೊಳಗೆ ಇದೇ Autonomous Body ಮಾಡುತ್ತೇವೆ, ಬಹುತೇಕ ಮುಂದಿನ ಅಧಿವೇಶನದಲ್ಲಿ ಮಾಡುತ್ತೇವೆ. ಆಗ ಪದವಿ ಕೊಡಲು ನಮಗೆ ಅನುಕೂಲವಾಗುತ್ತದೆ. ಪದವಿ ಕೊಡಲು ತೊಂದರೆಯಾಗಬಾರದು ಎನ್ನುವುದು ನಮ್ಮ ಉದ್ದೇಶ.

**CAPTAIN GANESH KARNIK**:- Degree cannot be given.....

**ಸಭಾಪತಿಯವರು**:- ಮಧ್ಯದಲ್ಲಿ ಮಾತನಾಡಬೇಡಿ ಅವರು ಏನು ಹೇಳುತ್ತಾರೆ ಕೇಳಿ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಗಳೆ, Autonomous Body ಮಾಡಿದ ಮೇಲೆ ಅದು ಸಾಧ್ಯವಾಗುತ್ತದೆ ಎಂದು ಹೇಳುತ್ತಿದ್ದೇನೆ. ಆದಾಗ್ಯೂ ಕೂಡಾ ಬೆಂಗಳೂರು ವಿಶ್ವವಿದ್ಯಾನಿಲಯದ affiliation ತೆಗೆದುಕೊಂಡು ಬಿಟ್ಟಿದ್ದೇವೆ. It is already affiliated to the Bangalore University. ಹೀಗಾಗಿ ಪದವಿ ಬಗ್ಗೆ ಸಮಸ್ಯೆ ಇಲ್ಲ ಎಂದು ಹೇಳುತ್ತಿದ್ದೇನೆ. ನಿಮ್ಮ ಪ್ರಕಾರ ಆಗುವುದಿಲ್ಲ ಎಂದರೆ, ಬೆಂಗಳೂರು ವಿಶ್ವವಿದ್ಯಾನಿಲಯದ affiliated colleges ಇರುತ್ತದೆ. ಅದಕ್ಕಾಗಿ ಎರಡು ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ಈ ವರ್ಷವೇ ಇದನ್ನು ಪ್ರಾರಂಭ ಮಾಡಬೇಕು, ನಮ್ಮ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು, ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಬೇಕು ಎನ್ನುವ ಉದ್ದೇಶದಿಂದ... ಬೆಂಗಳೂರಿನಲ್ಲಿ ಎಲ್ಲಾ ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು ಇವೆ. ಆದರೆ ಆರ್ಥಿಕ ವಿಚಾರದಲ್ಲಿ, ಬ್ಯಾಂಕಿಂಗ್ ಸೆಕ್ಟಾರ್‌ನಲ್ಲಿ ಮತ್ತು Budget preparation ನಲ್ಲಿ, fiscal policy ಬಗ್ಗೆ ಒಂದು ಉನ್ನತವಾದ ಸಂಸ್ಥೆ ಇರಲಿಲ್ಲ. ಅದಕ್ಕಾಗಿ ಇದನ್ನು ಸರ್ಕಾರದ ವತಿಯಿಂದ ಮಾಡಿದ್ದೇವೆ. The quality of education provided to the student's is very good. 65:35 ಅನುಪಾತದಲ್ಲಿ ಮಾಡಿದ್ದೇವೆ, ಆದ್ದರಿಂದ ಒಳ್ಳೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುಣಮಟ್ಟದ ವಿದ್ಯಾರ್ಥಿಗಳು select ಆಗಿದ್ದಾರೆ. ಆದ್ದರಿಂದ ಈ ಸಂಸ್ಥೆ ಮುಂದಿನ ದಿನಮಾನಗಳಲ್ಲಿ ಒಳ್ಳೆಯ Educational institution ಆಗುತ್ತದೆ. ಹೀಗಾಗಿ ಕಾನೂನು ನಿಯಮಾವಳಿಗಳ ಪ್ರಕಾರ ಏನು ತಪ್ಪಾಗಿರುವುದಿಲ್ಲ ಸರಿಯಾಗಿಯೇ ಇದೆ. Temporary Director ಮಾಡಿದ್ದೀರಿ ಎಂದು ಹೇಳಿದ್ದಾರೆ. ಈ ವರ್ಷ ಅದನ್ನು ಪ್ರಾರಂಭ ಮಾಡಬೇಕಾಗಿದೆ. ಇಲ್ಲಿ ಬಹಳ ಜನ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರು ಇದ್ದಾರೆ. Mr R.S.Deshpande, who is an Economic Expert and former Director of Institute of Social and Economic Change (ISEC) ಅವರನ್ನು Temporary Director recruit ಆಗಿ ಮಾಡಿಕೊಂಡಿದ್ದೇವೆ.

**ಸಭಾಪತಿಯವರು:-** ಅವರ credentials ಬಗ್ಗೆ ಚರ್ಚೆ ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೆ, permanent recruitment ಮಾಡಲು 5 ಜನರನ್ನು ಒಳಗೊಂಡ ಒಂದು ಸಮಿತಿಯನ್ನು ಮಾಡಿದ್ದೇವೆ. ಡಾ: ಕಸ್ತೂರಿರಂಗನ್ ಇಸ್ರೋದ ಮಾಜಿ ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ, Former chief secretary ರಂಗನಾಥ್‌ರವರು ಇದಕ್ಕೆ ಸಹ ಸದಸ್ಯರಾಗಿದ್ದಾರೆ. ಬಿಸಲಯ್ಯರವರು ಸದಸ್ಯರಾಗಿದ್ದಾರೆ. ಆ ಸಮಿತಿ ಯಾರ್ಯಾರನ್ನು recruit ಮಾಡಬೇಕು ಎನ್ನುವ ವರದಿಯನ್ನು ಕೊಡುತ್ತಿದೆ. ಸಂಸ್ಥೆ ಪ್ರಾರಂಭವಾದ ವರ್ಷದಲ್ಲಿಯೇ ಎಲ್ಲವೂ ಆಗುವುದಿಲ್ಲ. It takes time. We want to recruit best of the Professors. ಹೀಗಾಗಿ ಇಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಇನ್ನು ಮಾನ್ಯ ಅನೂಪ್ ಪೂಜಾರಿಯವರ ಬಗ್ಗೆ ಹೇಳಿದ್ದಾರೆ. ಅವರನ್ನು select ಮಾಡಿದವರೇ ನಾವು. ಆದರೆ ಅವರು ಇಲ್ಲಿ ನಾನು ಹೆಚ್ಚು ಕಾಲ ಇರಲು ಆಗುವುದಿಲ್ಲ Boston ಹೋಗುತ್ತೇನೆ ಎಂದು ಹೋಗಿಬಿಟ್ಟರು. ಅವರು ಹೋಗಿದ್ದರಿಂದ ನಾವು ಏನು ಮಾಡಲು ಆಗುವುದಿಲ್ಲ. ನಾವು ನಮ್ಮ ಸಂಸ್ಥೆಯನ್ನು ಪ್ರಾರಂಭ ಮಾಡಬೇಕು. ಇಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಇದನ್ನು ಒಳ್ಳೆಯ ಉನ್ನತವಾದ ಸಂಸ್ಥೆಯನ್ನಾಗಿ ಮಾಡಿ ಒಳ್ಳೆಯ ಶಿಕ್ಷಣವನ್ನು ಕೊಡುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಅಮರನಾಥ್ ಪಾಟೀಲ್‌ರವರು ಕೇಳಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಗಳೆ, ನಾನು ನನ್ನ ಪ್ರಶ್ನೆಯನ್ನು ಮುಗಿಸಿಲ್ಲ. ನೀವು ಕುಳಿತುಕೊಳ್ಳಿ ಎಂದು ಹೇಳಿದಾಗ ನಿಮಗೆ ಗೌರವ ಕೊಟ್ಟು ಕುಳಿತುಕೊಂಡಿದ್ದೇನೆ. ಇನ್ನು ನನ್ನ ಪ್ರಶ್ನೆ ಪೂರ್ತಿಯಾಗಿರುವುದಿಲ್ಲ.

**ಸಭಾಪತಿಯವರು:–** 15 ನಿಮಿಷವಾಗಿದೆ ನಿಮ್ಮ ಪ್ರಶ್ನೆಗೆ. ಇದು ಪ್ರಶ್ನೋತ್ತರ ಸಮಯ. ಪ್ರಶ್ನೋತ್ತರ ಸಮಯದಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ಆ ವಿಚಾರವನ್ನು ಬೇಕಾದರೆ ಬೇರೆ ರೂಪದಲ್ಲಿ ತನ್ನಿ.

**ಶ್ರೀ ರಮೇಶ್‌ಬಾಬು:–** ಎರಡು ನಿಮಿಷ ಸಮಯವನ್ನು ಕೊಡಿ.

**ಸಭಾಪತಿಯವರು:–** ನಿಮ್ಮ ಪ್ರಶ್ನೆ ಪ್ರಾರಂಭವಾಗಿರುವುದು 1:05 ಗಂಟೆಗೆ, ಈಗಾಗಲೇ 15 ನಿಮಿಷವಾಗಿದೆ. ಇದು ಪ್ರಶ್ನೋತ್ತರ ಅವಧಿ, ಆ ಕಾಲೇಜಿನ ಬಗ್ಗೆ ಚರ್ಚೆ ಅಲ್ಲ. Ask specific question and get specific answer, over. This question is discussed for 15 minutes, ಇನ್ನು ಎಷ್ಟು ಸಮಯ ಕೊಡಬೇಕು? ಈಗಾಗಲೇ 1–15 ಗಂಟೆ ಆಗಿದೆ. ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳುವುದು ಬೇಡವೆ? ಕುಳಿತುಕೊಳ್ಳಿ. ತಪ್ಪಾಗಿದ್ದರೆ Privilege ಗೆ ಕಳುಹಿಸಿ.

**ಪ್ರಶ್ನೆ ಸಂಖ್ಯೆ: 4140**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ್ ಪಾಟೀಲ್:–** ಮಾನ್ಯ ಸಭಾಪತಿಗಳೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಉಪನ್ಯಾಸಕರು ನಿವೃತ್ತರಾದ ಮೇಲೆ ಅವರಿಗೆ ಕಾಲ್ಪನಿಕ ವೇತನದಡಿಯಲ್ಲಿ ಸಿಗಬೇಕಾದ ನಿವೃತ್ತಿ ಸೌಲಭ್ಯಗಳನ್ನು ಕೊಡಲಾಗಿದೆಯೇ ಎಂದು ಕೇಳಿದ್ದೇನೆ.

(ಮುಂದು)

(1063)17–11–2017(01–20)ಬಿಎಸ್‌ಡಿ/ಜಿಆರ್

ಶ್ರೀ ಅಮರನಾಥ ಪಾಟೀಲ್ (ಮುಂದು)

ಅವರಿಗೆ ರೂ.5 ಲಕ್ಷ ಕಡಿತ ಮಾಡಿ, ನಿವೃತ್ತಿ ಸೌಲಭ್ಯಗಳನ್ನು ಕೊಟ್ಟಿದ್ದನ್ನು ನೋಡಿ ಅವರು ಇಲಾಖೆ ಮತ್ತು Accountant General's Office ಗೆ ಅಲೆದಾಡಿ ಸಂಧ್ಯಾಕಾಲದಲ್ಲಿರುವ ಅವರಿಗೆ ನಿವೃತ್ತಿ ನಂತರ ದೊಡ್ಡ ಅಘಾತವಾಗಿದೆ. ಸೆಪ್ಟಂಬರ್ 30ರಲ್ಲಿ ನಿವೃತ್ತಿಯಾಗಿರುವ ಯಾರಿಗೂ ಕಡಿತ ಮಾಡಿರುವುದಿಲ್ಲ. ಆದ್ದರಿಂದ ಅವರ ಸಮಸ್ಯೆಗೆ ಸ್ಪಂದಿಸಿ, ಯಾವುದೇ ಕಡಿತ ಮಾಡಬಾರದು. ನನಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋರ್ಟಿನ ಉಲ್ಲೇಖಗಳನ್ನು ತಿಳಿಸಿ, ವಿವರವಾದ ಉತ್ತರವನ್ನು ನೀಡಿದ್ದರೂ, ಸಹಾ ನನಗೆ ನೇರವಾಗಿ ಪಾಸಿಟಿವ್ ಉತ್ತರ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ತನ್ವೀರ್ ಸೇಠ್:- ಮಾನ್ಯ ಸಭಾಪತಿಯವರೇ, ಇಲಾಖೆಯಲ್ಲಿ ಗುತ್ತಿಗೆ ಆಧಾರದ 1984 ಮತ್ತು 1991ರ ಅವಧಿಯಲ್ಲಿ ಸೇವೆ ಸಲ್ಲಿಸಿದ ಅನೇಕ ಶಿಕ್ಷಕರು, ಉಪನ್ಯಾಸಕರು ಹಾಗೂ ಇತರೆ ಇಲಾಖೆಗಳು ಅಂದರೆ ಲೋಕೋಪಯೋಗಿ, ನೀರಾವರಿ ಇಲಾಖೆ ಅಥವಾ ಉನ್ನತ ಶಿಕ್ಷಣ ಇಲಾಖೆ ಇರಬಹುದು, ನಮ್ಮ ಇಲಾಖೆಯಲ್ಲಿ ಸುಮಾರು 8,931 ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಖಾಯಂ ಮಾಡಿದ್ದು, ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ಈ ಬಗ್ಗೆ ದಿನಾಂಕ 08/06/2016 ರಂದು ಅಂದರೆ ನಾನು ಸಚಿವನಾಗುವುದಕ್ಕೆ ಮುಂದೆ ಅಧಿಸೂಚನೆ ಹೊರಡಿಸಿ ಅಂತಿಮ ಆದೇಶವನ್ನು ಮಾಡಲಾಗಿದೆ. ನಾನು ಅದಕ್ಕೆ ತಡೆಯಾಜ್ಞೆ ಕೊಟ್ಟಿದ್ದೆನು. ಅದಾದ ನಂತರ ಅಕೌಂಟೆಂಟ್ ಜನರಲ್, ಡಿ.ಪಿ.ಎ.ಆರ್., ಮತ್ತು ಹಣಕಾಸಿನ ಇಲಾಖೆಗಳು ಕೆಲವು ಆಕ್ಷೇಪಣೆ ಮಾಡಿದ ನಂತರವೂ ಸಮಾಲೋಚನೆ ನಡೆಸಿ ಅಂತಿಮಗೊಳಿಸಿದ್ದೆನು. ಇದರ ಬಗ್ಗೆ ಕೆ.ಎ.ಟಿ., ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳಿಗೂ ಹೋಗಿದ್ದು, ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯದ Special Leave Petition ನಿಂದ ಬಂದ ತೀರ್ಪಿನಂತೆ ಮಾಡಬೇಕಾಗಿತ್ತು. ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಈವರೆಗೆ ನಮ್ಮ ತಪ್ಪಿನಿಂದ ಅಥವಾ ವೇತನ ನಿಗದಿಪಡಿಸುವಿಕೆಯಿಂದ ನಿವೃತ್ತಿಯಾದ ಮೇಲೆ ಏನೇಲ್ಲಾ ಸೌಲಭ್ಯಗಳನ್ನು ನೀಡಿದ್ದೇವೋ, ಅಂತಹವರಿಗೆ ಕಡಿತಗೊಳಿಸುವುದು ಸರಿಯಲ್ಲ. ಈಗ ಯರು ಸೇವೆಯಲ್ಲಿ ಉಳಿದಿದ್ದಾರೆ, ಈಗ ಸುಮಾರು ಶೇಕಡ 25 ರಿಂದ 30ರಷ್ಟು ಉಳಿದುಕೊಂಡಿದ್ದಾರೆ. ಅಂತಹವರಿಗೆ ನಮ್ಮ ಇಲಾಖೆಯಲ್ಲಿ ಯಾವರೀತಿ ಕಡಿತಗೊಳಿಸಬೇಕೆಂದು ಎಂದು ಎರಡು ಸುತ್ತಿನ ಮಾತುಕತೆಯನ್ನು ಮಾಡಲಾಗಿದೆ. ಪ್ರತ್ಯೇಕವಾಗಿ ಮಾನ್ಯ ಸದಸ್ಯರು ಶ್ರೀಮತಿ ವಿಜಯಲಕ್ಷ್ಮಿ ವಿಚಾರವನ್ನು ಪ್ರಸ್ತಾಪಡಿಸಿದ್ದು, ಅದರ ಬಗ್ಗೆ ಮಾಹಿತಿಯನ್ನು ಪರಿಶೀಲಿಸಿ ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಟಿ. ಶ್ರೀಕಂಠೇಗೌಡ:- ಶ್ರೀಮತಿ ವಿಜಯಲಕ್ಷ್ಮಿ ರವರಿಗೆ ಕಡಿತ ಮಾಡಿದ್ದಾರೆ.

ಶ್ರೀ ತನ್ವೀರ್ ಸೇಠ್:- ತಪ್ಪಾಗಿದ್ದರೆ ನಾನು ಅದನ್ನು ಸರಿಮಾಡುತ್ತೇನೆ.

ಪ್ರಶ್ನೆ ಸಂಖ್ಯೆ: 3864

ಉತ್ತರದ ಪ್ರತಿ ಲಗತ್ತಿಸಿದೆ.

ಶ್ರೀಮತಿ ತಾರಾ ಅನೂರಾಧ:- ಮಾನ್ಯ ಸಭಾಪತಿಯವರೇ, ಉತ್ತರಗಳನ್ನು ಕೊಟ್ಟಿದ್ದು, ಅದರಲ್ಲಿ ಅಂಕಿ ಅಂಶಗಳನ್ನು ನೀಡಿದ್ದಾರೆ. ರಾಜ್ಯದಲ್ಲಿ ಮಂಜೂರಾದ ಒಟ್ಟು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಅದರಲ್ಲಿ ಪುರುಷ ಮತ್ತು ಮಹಿಳೆಯರ ಸಂಖ್ಯೆ ಎಷ್ಟು; ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ 1,88.540 ಮತ್ತು 1,66,136 ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಲಿಖಿತ ಉತ್ತರದಲ್ಲಿ ಕೊಟ್ಟಿದ್ದೇನೆ. ಆದರೆ 2016-17ರ ಆರ್ಥಿಕ ಸಮೀಕ್ಷೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ 3,28,117 ಗಳಿದ್ದು, 2,84,832 ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಇದೆ. ಅಂದರೆ 87 ಪರ್ಸೆಂಟ್ ಸಮೀಕ್ಷಾ ವರದಿ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಆದರೆ ಉತ್ತರಕ್ಕೆ ತಾಳೆ ಹಾಕಿದಾಗ ಸುಮಾರು 1,20,000ಕ್ಕಿಂತ ಹೆಚ್ಚು ಶಿಕ್ಷಕರು ಕಾಣೆಯಾಗಿದ್ದು, ಅವರು ಎಲ್ಲಿ ಹೋಗಿದ್ದಾರೆಂದು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ ಸಮೀಕ್ಷೆ ಮತ್ತು ಉತ್ತರದಲ್ಲಿ ಬೇರೆ ಅಂಕಿ-ಅಂಶಗಳನ್ನು ನೀಡಲಾಗಿದೆ. ಸರ್ಕಾರಿ ಶಾಲೆಗಳಲ್ಲಿ 75.37 ಪರ್ಸೆಂಟ್ ಮಹಿಳಾ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಶಿಕ್ಷಕರಿಗೆ ಪ್ರಶಸ್ತಿಗಳನ್ನು ನೀಡುವಾಗ ಪುರುಷ ಮತ್ತು ಮಹಿಳ ಶಿಕ್ಷಕಿಯರಿಗೆ ಯಾವ ಅನುಪಾತದಲ್ಲಿ ನೀಡಲಾಗುತ್ತಿದೆ ಎನ್ನುವುದಕ್ಕೆ 1:3ರ ಅನುಪಾತದಲ್ಲಿ ನೀಡುವುದಾಗಿ ತಿಳಿಸಿದ್ದಾರೆ. ಅಂದರೆ ಒಬ್ಬ ಮಹಿಳಾ ಶಿಕ್ಷಕಿಗೆ ಮತ್ತು ಮೂರು ಜನ ಪುರುಷ ಶಿಕ್ಷಕರಿಗೆ ಪ್ರಶಸ್ತಿ ನೀಡುತ್ತಿದ್ದಾರೆ. ಅಂದರೆ ಇದೇನು ಅನ್ಯಾಯ? ಮಹಿಳಾ ಶಿಕ್ಷಕರಿಯರ ಸಂಖ್ಯೆ ಹೆಚ್ಚಿರುವಾಗ ಈ ರೀತಿ ಪ್ರಶಸ್ತಿ ನೀಡುತ್ತಿದ್ದಾರೆ. 2013-14ನೇ ಸಾಲಿನವರೆಗೆ 152 ಪ್ರಶಸ್ತಿಗಳನ್ನು ನೀಡಿದ್ದು, ಅದರಲ್ಲಿ 116 ಪುರುಷರು ಮತ್ತು ಕೇವಲ 36 ಮಹಿಳೆಯರಿಗೆ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಆ ಕಡೆ ಮಹಿಳಾ ಮಂತ್ರಿಗಳು ಇದ್ದಾರೆ. ಅವರೆ ಏಕೆ ಈ ರೀತಿಯಾಗಿ ಮಾಡುತ್ತಿದ್ದೀರಿ ಎಂದು ಶಿಕ್ಷಣ ಮಾನ್ಯ ಮಂತ್ರಿಗಳನ್ನು ಕೇಳಬೇಕಾಗಿತ್ತು. ಅವರ ಧ್ವನಿಯಾಗಿ ನಾವೇ ಕೇಳುತ್ತೇವೆ. 36 ಮಹಿಳಾ ಶಿಕ್ಷಕರಿಗೆ ಪ್ರಶಸ್ತಿಗಳನ್ನು ನೀಡಿ ಅನ್ಯಾಯವನ್ನು ಏಕೆ ಮಾಡುತ್ತಿದ್ದಾರೆ? ಈಗ ಮಾನ್ಯ ಸಚಿವರು ನಗುತ್ತಿದ್ದಾರೆ, ಇರಲಿ, ಮಹಿಳೆಯರ ಶಕ್ತಿ ಅವರಿಗಿನ್ನೂ ಗೊತ್ತಿಲ್ಲ. ಅವರು ಮನೆಗೆ ಹೋದರೆ ಗೊತ್ತಾಗುತ್ತದೆ. ಶಾಲೆಗಳಲ್ಲಿ, ಬಿಇಎ ಅಥವಾ ಡಿ.ಡಿ.ಪಿ.ಐ., ಕಛೇರಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಮಹಿಳೆರಿಗೆ ಕೊಟ್ಟಿದ್ದೇವೆ ಎಂದು ತಿಳಿಸಿದ್ದಾರೆ. ಆದರೆ ನಿಜವಾಗಲೂ ಮಹಿಳಾ ಶಿಕ್ಷಕರು ವರ್ಗಾವಣೆ ಅಥವಾ ಕೌನ್ಸಿಲಿಂಗ್ ಕಾರಣಗಳಿಗೆ ಕಛೇರಿಗಳಿಗೆ ಅವರ ಸಣ್ಣಪುಟ್ಟ ಮಕ್ಕಳನ್ನು ಕರೆದುಕೊಂಡು ಹೋದಾಗ ಅವರಿಗೆ ಶೌಚಾಲಯಗಳು ಇರುವುದಿಲ್ಲ. ಆದರೆ ಮಾನ್ಯ ಸಚಿವರು ಉತ್ತರದಲ್ಲಿ ಇದೆ ಎಂದು ಹೇಳಿದ್ದಾರೆ. ಈ ವ್ಯವಸ್ಥೆ ಇಲ್ಲದೆ ಮಹಿಳೆಯರು ಸಮಸ್ಯೆಗೆ ಒಳಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಂಬ ಪ್ರಶ್ನೆಗೆ ಯಾವುದೇ ಸಮಸ್ಯೆಗಳಿಲ್ಲ, ಯಾವುದೇ ದೂರುಗಳು ಬಂದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ನಿಜವಾಗಲೂ ಸರ್ಕಾರಿ ಶಾಲೆಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕವಾಗಿ ಶೌಚಾಲಯಗಳು ಇಲ್ಲ. ಅಲ್ಲಿ ಜನರಲ್ ಅಥವಾ ಮಕ್ಕಳ ಶೌಚಾಲಯಗಳು ಮಾತ್ರ ಇರುತ್ತವೆ. ಮಕ್ಕಳ ಶೌಚಾಲಯಗಳಿಗೆ ಶಿಕ್ಷಕಿಯರು ಹೋಗುವಂತಿಲ್ಲ. ಇನ್ನೂ ಜನರಲ್ ಶೌಚಾಲಯಗಳಿಗೆ ಪುರುಷರೇ ಹೋಗುತ್ತಾರೆ. ಮಹಿಳೆಯರಿಗೆ ಪ್ರತ್ಯೇಕವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೌಚಾಲಯಗಳೇ ಇರುವುದಿಲ್ಲ. ಮಾನ್ಯ ಸದಸ್ಯರು ಮಕ್ಕಳಿಗೆ ಕೊಠಡಿಯೇ ಇರುವುದಿಲ್ಲ, ಇನ್ನು ಶೌಚಾಲಯ ಎಲ್ಲಿ ಕೊಡುತ್ತಾರೆ ಎಂದು ಹೇಳಿದರು. ಆದ್ದರಿಂದ ಕಾಣೆಯಾಗಿರುವ ಶಿಕ್ಷಕರು, ಪ್ರಶಸ್ತಿಯಲ್ಲಿ ತಾರತಮ್ಯ ಹಾಗೂ ಮೂಲಭೂತ ಸೌಕರ್ಯಗಳನ್ನು ಕೊಡದಿರುವ ಬಗ್ಗೆ ಮಾನ್ಯ ಮಂತ್ರಿಗಳು ಬೆಳಕು ಚೆಲ್ಲಬೇಕು.

ಶ್ರೀ ತನ್ವೀರ್ ಸೇಠ್:- ಮಾನ್ಯ ಸಭಾಪತಿಯವರೇ, ಮಹಿಳೆಯರ ಧ್ವನಿಯಾಗಿ ಮಾನ್ಯ ತಾರಾರವರು ಪ್ರಶ್ನೆಯನ್ನು ಕೇಳಿದ್ದು, ಒಟ್ಟು ಶಿಕ್ಷಕರ ಸಂಖ್ಯೆ ಆರ್ಥಿಕ ಸಮೀಕ್ಷೆಯಲ್ಲಿ ಬಂದಿರುವುದು ನಿಜ. ಮಾನ್ಯ ಸದಸ್ಯರು ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. 2013-14ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ 2,03,000 ಇದ್ದು, ಆರ್‌ಟಿಇ ಕಾಯ್ದೆಗನುಗುಣವಾಗಿ ಮಕ್ಕಳ ಮತ್ತು ಶಿಕ್ಷಕರ ಅನುಪಾತದಂತೆ ಮರು ಹೊಂದಾಣಿಕೆ ಮಾಡಿ 1,88,540 ಮಾಡಿರುವ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಅದರಲ್ಲಿ 1,66,136 ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ.

ಶ್ರೀಮತಿ ತಾರಾಅನೂರಾಧ:- ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆಯಲ್ಲಿ 2016-17ರಂತೆ ರಾಜ್ಯದಲ್ಲಿನ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣದಲ್ಲಿ ಮಂಜೂರಾಗಿರುವ 3,21,171 ಶಿಕ್ಷಕರ ಪೈಕಿ 2,84,832 ಅಂದರೆ 87.70ರಷ್ಟು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ತನ್ವೀರ್ ಸೇಠ್:- ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಕರು, ವಿಶೇಷ ಶಿಕ್ಷಕರು, ಪ್ರೌಢ ಶಾಲಾ ಶಿಕ್ಷಕರು ಮತ್ತು ಪದವಿಪೂರ್ವ ಉಪನ್ಯಾಸಕರೆಲ್ಲರೂ ಸೇರಿ ಪ್ರಾಥಮಿಕ ಶಿಕ್ಷಣ ಇಲಾಖೆಗೆ ಸಂಬಂಧಪಡುತ್ತಾರೆ. ಅದರಲ್ಲಿ ಕೇವಲ ಪ್ರಾಥಮಿಕ ಶಿಕ್ಷಕರು ಮಾತ್ರ ಬರುವುದಿಲ್ಲ.

ಶ್ರೀ ಅರಣ ಶಹಾಪೂರ್ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇಲ್ಲಿ ಎರಡರಲ್ಲಿ ಒಂದು ತಪ್ಪಿದೆ.

ಸಭಾಪತಿಯವರು:- ಪ್ರಶ್ನೋತ್ತರ ಕಾಲದಲ್ಲಿ ಇಲಾಖೆ ಬಗ್ಗೆ ಚರ್ಚೆ ಎಂದರೆ ನನ್ನ ಕೈಯಲ್ಲಿ ನಿರ್ವಹಣೆ ಮಾಡಲು ಆಗುವುದಿಲ್ಲ. ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳಿದ್ದಾರೆ, ಸಾಕು ಬಿಟ್ಟುಬಿಡಿ.

ಶ್ರೀ ತನ್ವೀರ್ ಸೇಠ್:- ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಸರಿ ಇದೆ. ಇಲಾಖೆಗನುಗುಣವಾಗಿ ಸರಿಯಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರುಃ– ಏನೂ ಮಾಡುವುದಕ್ಕೆ ಆಗುವುದಿಲ್ಲ. Privilege Motion ಕಳುಹಿಸಿ.

ಶ್ರೀ ಅರಣ ಶಹಾಪೂರ್ಃ– ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಮುದ್ರಣವಾಗಿದೆ, ಆರ್ಥಿಕ ಸಮೀಕ್ಷೆಯಲ್ಲಿ ಆ ರೀತಿ ಇದೆ. ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಲಿ.

(ಮುಂದು)

**(1064)17.11.2017/1.30/ಹೆಚ್‌ವಿಃಜಿಆರ್**

**ಶ್ರೀ ತನ್ವೀರ್ ಸೇಠ್ಃ–** ಸನ್ಮಾನ್ಯ ಸಭಾಪತಿಯವರೇ, ಅವರು ಈ ವಿಚಾರವನ್ನು ಆಮೇಲೆ ತೆಗೆದುಕೊಂಡರೆ ನಾನು ಅದಕ್ಕೆ ಸ್ಪಷ್ಟೀಕರಣವನ್ನು ನೀಡುತ್ತೇನೆ. ಈ ಹಿಂದೆ ಶಿಕ್ಷಕ ವೃತ್ತಿಯಲ್ಲಿ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇತ್ತೀಚೆಗೆ ಮಹಿಳಾ ಶಿಕ್ಷಕಿಯರ ಸಂಖ್ಯೆ ಹೆಚ್ಚಾಗಿದೆ. ಹಿಂದೆ ನಮ್ಮ ಇಲಾಖೆಯ ಸಿ ಅಂಡ್ ಆರ್ ರೂಲ್ಸ್ ನಲ್ಲಿ ಮಹಿಳಾ ಮೀಸಲಾತಿ ಎನ್ನುವುದು ಎಲ್ಲಿಯೂ ಇರಲಿಲ್ಲ. ಆದರೆ, ಹೊಸದಾಗಿ ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವಂತಹ ಸಂದರ್ಭದಲ್ಲಿ ಕಡ್ಡಾಯವಾಗಿ ಶೇಕಡಾ 33ರಷ್ಟು ಮಹಿಳಾ ಮೀಸಲಾತಿಯನ್ನು ಕಲ್ಪಿಸಬೇಕೆನ್ನುವುದನ್ನು ಜಾರಿಗೆ ತರಲಾಯಿತು. ತದನಂತರ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವ ಸಂದರ್ಭದಲ್ಲಿ, ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ಶೇಕಡಾ 50ಕ್ಕಿಂತ ಕಡಿಮೆಯಾಗದಂತೆ ಮಹಿಳಾ ಮೀಸಲಾತಿ ನೀಡಬೇಕೆನ್ನುವುದನ್ನು ಕಡ್ಡಾಯ ಮಾಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಉತ್ತಮ ಶಿಕ್ಷಕರ ಪ್ರಶಸ್ತಿಗೆ ಆಯ್ಕೆ ಮಾಡುವುದಕ್ಕೆ ಒಂದು ನಿಯಮಾವಳಿಗಳನ್ನು ರೂಪಿಸಿಕೊಳ್ಳಲಾಗಿದೆ. ಆ ನಿಯಮಾವಳಿಗಳ ಅಡಿಯಲ್ಲಿ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ಇಂತಹವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಬೇಕು, ಇಂತಹವರಿಗೆ ನೀಡಬಾರದೆಂದು ನಾವು ಯಾರೂ ಹೇಳುವುದಿಲ್ಲ. ಮಹಿಳಾ ಶಿಕ್ಷಕಿಯರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ದೊರೆಯದೇ, ಪುರುಷರಿಗೇ ಹೆಚ್ಚು ಉತ್ತಮ ಶಿಕ್ಷಕ ಪ್ರಶಸ್ತಿ ದೊರೆಯುತ್ತಿದೆ ಎಂದು ಮಾನ್ಯ ಸದಸ್ಯರು ಆರೋಪಿಸುತ್ತಿದ್ದಾರೆ. ಉತ್ತಮ ಶಿಕ್ಷಕ ಪ್ರಶಸ್ತಿ ನೀಡುವುದರಲ್ಲಿ, ಪುರುಷ ಶಿಕ್ಷಕರಿಗೆ ಇಷ್ಟು, ಮಹಿಳಾ ಶಿಕ್ಷಕಿಯರಿಗೆ ಇಷ್ಟು ಪ್ರಮಾಣದಲ್ಲಿ ಪ್ರಶಸ್ತಿಗಳನ್ನು ನೀಡಬೇಕೆನ್ನುವ ಅನುಪಾತವನ್ನು ನಿಗದಿಪಡಿಸಬೇಕೆನ್ನುವುದಾದರೆ, ಅದನ್ನು ಸಹ ಮಾಡುತ್ತೇವೆ. ಈಗಾಗಲೇ ನೀಡಲಾಗಿರುವ ಒಟ್ಟು ಪ್ರಶಸ್ತಿ ಪ್ರಮಾಣದಲ್ಲಿ ಮಹಿಳಾ ಮತ್ತು ಪುರುಷ ಶಿಕ್ಷಕರಿಗೆ ನೀಡಲಾಗಿರುವ ಪ್ರಶಸ್ತಿಗಳ ಅನುಪಾತ 1:2.8 ರಷ್ಟಿದೆ ಎನ್ನುವುದನ್ನು ನಾವು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ ತಿಳಿಸಿದ್ದೇವೆ. ಪ್ರಶಸ್ತಿ ನೀಡುವುದಕ್ಕೆ ಪುರುಷ ಮತ್ತು ಮಹಿಳಾ ಶಿಕ್ಷಕರ ಪ್ರಮಾಣ ಇಷ್ಟು ಪ್ರಮಾಣದಲ್ಲಿ ಇರಲೇಬೇಕು ಎನ್ನುವ ನಿಯಮವನ್ನು ನಾವು ಇಲ್ಲಿಯವರೆವಿಗೂ ರೂಪಿಸಿಕೊಂಡಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ತಾರಾಅನೂರಾಧಃ-** ಸನ್ಮಾನ್ಯ ಸಭಾಪತಿಯವರೇ, ಮಹಿಳೆಯರಲ್ಲಿ ಉತ್ತಮ ಶಿಕ್ಷಕಿಯರು ಇಲ್ಲವೇ?

**ಸಭಾಪತಿಯವರುಃ-** ಈ ಪ್ರಶ್ನೆ 1 ಗಂಟೆ 20 ನಿಮಿಷಗಳಿಗೆ ಪ್ರಾರಂಭವಾಗಿದ್ದು, ಇಲ್ಲಿಗೆ ಸುಮಾರು 7 ನಿಮಿಷಗಳಾಗಿವೆ. ಪ್ರಶ್ನೆಯೂ ಮುಗಿಯುತ್ತಿಲ್ಲ, ಉತ್ತರವೂ ಮುಗಿದಿಲ್ಲ. ಈ ರೀತಿಯಾದೆ ಇನ್ನೂ ಎರಡು ಗಂಟೆಗಳ ಕಾಲ ಪ್ರಶ್ನೋತ್ತರವನ್ನು ನಡೆಸಬೇಕಾಗುತ್ತದೆ. ಮಾನ್ಯ ಶಿಕ್ಷಣ ಸಚಿವರೇ, ಚುಟುಕಾಗಿ ಉತ್ತರವನ್ನು ನೀಡಿ.

**ಶ್ರೀ ತನ್ವೀರ್ ಸೇಠ್ಃ-** ಸನ್ಮಾನ್ಯ ಸಭಾಪತಿಯವರೇ, ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡುವುದರಲ್ಲಿ ಮಹಿಳಾ ಮತ್ತು ಪುರುಷ ಶಿಕ್ಷಕರ ನಡುವೆ ಯಾವುದೇ ಅನುಪಾತ ಅಥವಾ ಮೀಸಲಾತಿಯನ್ನು ನೀಡಿಲ್ಲ. ಈಗ ಮಾನ್ಯ ಸದಸ್ಯರು ಸಲಹೆ ನೀಡಿರುವ ಹಿನ್ನೆಲೆಯಲ್ಲಿ ನಾನು ಇಲಾಖೆಯ ಅಧಿಕಾರಿಗಳೊಂದಿಗೆ, ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡುವಂತಹ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಮಹಿಳಾ ಮತ್ತು ಪುರುಷ ಶಿಕ್ಷಕರ ನಡುವೆ ಅನುಪಾತವನ್ನು ಅನುಸರಿಸಬೇಕು, ಯಾವ ರೀತಿಯಲ್ಲಿ ಮೀಸಲಾತಿಯನ್ನು ನೀಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತೇನೆ. ನಮ್ಮಲ್ಲಿ ಇರುವಂತಹ ನಿಯಮಗಳಡಿಯಲ್ಲಿ ಉತ್ತಮ ಶಿಕ್ಷಕರ ಆಯ್ಕೆಯಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ಏನೇನು ಸೌಲಭ್ಯಗಳನ್ನು ನೀಡಬೇಕು ಅದನ್ನು ನೀಡಲಾಗುತ್ತದೆ. ನಮ್ಮ ಇಲಾಖೆಯಲ್ಲಿ ಮಹಿಳೆಯರಿಗೆ ಅಲ್ಪಸ್ವಲ್ಪವಾದರೂ ಸೌಲಭ್ಯಗಳನ್ನು ನೀಡುತ್ತಾ ಬಂದಿದ್ದೇವೆ. ಎಲ್ಲಿಯೂ ಈ ಬಗ್ಗೆ ನಮಗೆ ದೂರುಗಳು ಬಂದಿಲ್ಲ. ಏನನ್ನು ಸರಿಪಡಿಸಬಹುದು, ಅದನ್ನು ಸರಿಪಡಿಸುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ.

**<u>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆಃ3865</u>**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸೋಮಣ್ಣ ಮ.ಬೇವಿನಮರದಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಲಿಖಿತ ರೂಪದಲ್ಲಿ ಉತ್ತರವನ್ನು ಒದಗಿಸಿದ್ದಾರೆ. 2013-14 ರಿಂದ 2016-17ನೇ ಸಾಲಿನವರೆಗೆ ಕರ್ನಾಟಕ ರಾಜ್ಯದಲ್ಲಿ ಯಾವಯಾವ ಇಲಾಖೆಯಿಂದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲಾಗಿದೆ ಎನ್ನುವ ನನ್ನ ಪ್ರಶ್ನೆಗೆ '2013-14 ರಿಂದ 2016-17ನೇ ಸಾಲಿನವರೆಗೆ ಒಟ್ಟಾರೆ 9706 ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಇದರ ಜೊತೆಗೆ ನಾನೊಂದು ವಿನಂತಿಯನ್ನು ಮಾಡುತ್ತಿದ್ದೇನೆ.

**ಸಭಾಪತಿಯವರುಃ-** ಮಾನ್ಯ ಸೋಮಣ್ಣ ಬೇವಿನಮರದರವರೇ, ತಾವು ವಿನಂತಿ ಮಾಡುವಂತಿಲ್ಲ, ಉಪ ಪ್ರಶ್ನೆಗಳನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸೋಮಣ್ಣ ಮ.ಬೇವಿನಮರದಃ-** ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯಕ್ಕೆ 9706 ನೀರು ಶುದ್ಧೀಕರಣ ಘಟಕಗಳು ಸಾಕಾಗುವುದಿಲ್ಲ ಇನ್ನು ಹೆಚ್ಚಿನ ಪ್ರಮಾಣದಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಬೇಕಾಗಿದೆ. 'ಈ ಎಲ್ಲ ಘಟಕಗಳಿಂದ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆಯೇ, ಇದರಲ್ಲಿ ಎಷ್ಟು ಘಟಕಗಳು ಸುಸ್ಥಿತಿಯಲ್ಲಿವೆ; ಎಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿವೆ' ಎನ್ನುವ ನನ್ನ ಪ್ರಶ್ನೆಗೆ 'ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ನೀರು ಶುದ್ಧೀಕರಣ ಘಟಕಗಳಿಂದ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. 2013-14ನೇ ಸಾಲಿನಿಂದ 2016-17ನೇ ಸಾಲಿನವರೆಗೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಸ್ಥಾಪಿಸಲಾಗಿರುವ ನೀರು ಶುದ್ಧೀಕರಣ ಘಟಕಗಳ ಪೈಕಿ 9038 ಘಟಕಗಳು ಸುಸ್ಥಿತಿಯಲ್ಲಿರುತ್ತವೆ ಹಾಗೂ 668 ಘಟಕಗಳು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ತಾತ್ಕಾಲಿಕವಾಗಿ ಕಾರ್ಯನಿರ್ವಹಿಸದೇ ಇರುವಂತಹ 668 ಘಟಕಗಳ ಪೈಕಿ 150 ಘಟಕಗಳು ಕಚ್ಚಾ ನೀರಿನ ಸಮಸ್ಯೆಯಿಂದ, 45 ಘಟಕಗಳು ವಿದ್ಯುತ್ ವ್ಯತ್ಯಯದಿಂದ, 125 ಘಟಕಗಳು ಗುತ್ತಿಗೆದಾರರ ನಿರ್ವಹಣೆ ಸಮಸ್ಯೆಯಿಂದ, 257 ಘಟಕಗಳು ವಾರ್ಷಿಕ ನಿರ್ವಹಣೆ ಸಮಸ್ಯೆಯಿಂದ ಹಾಗೂ 91 ಘಟಕಗಳು ಇತರೆ ಸಣ್ಣಪುಟ್ಟ ಸಮಸ್ಯೆಗಳಿಂದ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ.' ಎನ್ನುವ ಉತ್ತರವನ್ನು ನೀಡಿದ್ದಾರೆ. ಸರ್ಕಾರ ಅನೇಕ ಏಜೆನ್ಸಿಗಳ ಮುಖಾಂತರ ಈ ಕಾರ್ಯಗಳನ್ನು ಮಾಡಿಸಿದೆ. ಇಂತಹ ಏಜೆನ್ಸಿಗಳಲ್ಲಿ ಒಂದಾದ ಕೆ.ಆರ್.ಐ.ಡಿ.ಎಲ್., ಸಂಸ್ಥೆಯಿಂದ ಮಾಡಿಸಿರುವ ಘಟಕಗಳು ಹೆಚ್ಚು ದುರಸ್ತಿಗೆ ಬಂದಿವೆ ಎನ್ನುವುದು ನನ್ನ ಅನಿಸಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನನಗೆ ತಿಳಿದ ಮಟ್ಟಿಗೆ ಹಾವೇರಿ ಜಿಲ್ಲೆಯಲ್ಲಿ ಒಟ್ಟು 396 ನೀರು ಶುದ್ಧೀಕರಣ ಘಟಕಗಳಿವೆ. ಈಗ ಅವುಗಳ ಸಂಖ್ಯೆ ಹೆಚ್ಚಾಗಿರಬಹುದೇನೋ ನನಗೆ ಗೊತ್ತಿಲ್ಲ. ಅವುಗಳಲ್ಲಿ 186 ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. ಅದೇರೀತಿ ಇಡೀ ರಾಜ್ಯದಲ್ಲಿ 668 ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. ಅವುಗಳಲ್ಲಿ 186 ಘಟಕಗಳನ್ನು ಕೆ.ಆರ್.ಐ.ಡಿ.ಎಲ್., ನವರು ಮಾಡಿದ್ದಾರೆ. ಕೆ.ಆರ್.ಐ.ಡಿ.ಎಲ್., ನವರು ಮಾಡಿರುವ ಘಟಕಗಳ ಪೈಕಿ 76 ಘಟಕಗಳು ದುರಸ್ತಿಯಲ್ಲಿವೆ. ಅಂದರೆ, ಆ ಸಂಸ್ಥೆಯವರು ಮಾಡಿರುವ ಸುಮಾರು ಶೇಕಡಾ 50ರಷ್ಟು ಘಟಕಗಳು ದುರಸ್ತಿಯಲ್ಲಿರುವುದರಿಂದ ಸರ್ಕಾರ ಆ ಸಂಸ್ಥೆಯ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರುಃ-** ಮಾನ್ಯ ಸೋಮಣ್ಣ ಬೇವಿನ ಮರದರವರೇ, ತಮ್ಮ ಉಪ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

ಮಾನ್ಯ ಸಚಿವರೇ, ಈಗ ತಾವು ಹೇಳಿಕೆ ಮಾಡುವುದಾದರೆ ಮಾಡಿ, it will be fine. ಆದರೆ, ಮಾನ್ಯ ಸದಸ್ಯರಿಗೆ ಉತ್ತರ ಬೇಡವೆಂದರೆ ಬೇಡ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಕೆ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಮಾತಿನುದ್ದಕ್ಕೂ ಸಲಹೆಗಳನ್ನು ಮತ್ತು ಸರ್ಕಾರ ಏನು ಮಾಡಬೇಕೆನ್ನುವುದರ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಕೆ.ಆರ್.ಐ.ಡಿ.ಎಲ್.,ನವರು ಇಡೀ ರಾಜ್ಯದಲ್ಲಿ ಸುಮಾರು 4500 ಘಟಕಗಳನ್ನು ಸ್ಥಾಪನೆ ಮಾಡಿದ್ದಾರೆ. ಮಾನ್ಯ ಸದಸ್ಯರ ಜಿಲ್ಲೆಯಾದ ಹಾವೇರಿ ಜಿಲ್ಲೆಯಲ್ಲಿ ಯಾವುದೇ ದೂರುಗಳು ಬಂದಿರಲಿಲ್ಲ. ಉತ್ತಮವಾಗಿ ನಡೆಯುತ್ತಿರುವ ಘಟಕಗಳ ಪಟ್ಟಿಯಲ್ಲಿ ಹಾವೇರಿ ಜಿಲ್ಲೆಯೂ ಒಂದಾಗಿದೆ. ಅದಕ್ಕೆ ಕಾರಣವೇನೆಂದರೆ, ಅಲ್ಲಿನ ಜಿಲ್ಲಾ ಪಂಚಾಯಿತಿ ಬಹಳಷ್ಟು ಆಸಕ್ತಿಯುತವಾಗಿ ಕೆಲಸ ಮಾಡಿದೆ. ಇದೊಂದು ರೀತಿ ಗಿರಣಿ ಇದಂತೆ membrane ನ ಲೈಫ್ ಮುಗಿಯುತ್ತದೆ. ಯಾವುದಾದರು turbidity ಇದ್ದರೆ, ಗಡಸು ನೀರು ಇದ್ದರೆ, contamination ಬಂದು ಪೈಪ್‌ನಲ್ಲಿ ಕುಳಿತುಕೊಳ್ಳುತ್ತದೆ. ಕೆಲವು ಕಡೆಗಳಲ್ಲಿ ಬೋರ್‌ವೆಲ್‌ಗಳು ಬತ್ತಿ ಹೋಗುತ್ತವೆ. ಇದರಿಂದಾಗಿ ಸುಮಾರು ಶೇಕಡಾ 5 ರಿಂದ 8 ರಷ್ಟು ಘಟಕಗಳು ಒಂದಿಲ್ಲ ಒಂದು ರೀತಿಯಲ್ಲಿ ದುರಸ್ತಿಗೆ ಬರುತ್ತಿರುತ್ತವೆ. ಆ ದುರಸ್ತಿಗಳನ್ನು ಸರಿದೂಗಿಸಿಕೊಂಡು ಹೋಗುತ್ತಿದ್ದೇವೆ. ಈ ಘಟಕಗಳು ಎಲ್ಲಿಯೂ ಹೆಚ್ಚು ದುರಸ್ತಿಗೆ ಬರಬಾರದು. ಒಂದು ವೇಳೆ ದುರಸ್ತಿಗೆ ಬಂದರೆ, ಅದನ್ನು ಒಂದೆರಡು ದಿನಗಳಲ್ಲಿ ಸರಿಪಡಿಸಬೇಕು ಎನ್ನುವುದು ಮಾನ್ಯ ಸದಸ್ಯರ ಕಳಕಳಿಯಾಗಿದೆ. ಅದಕ್ಕಾಗಿ ಹಾವೇರಿ ಜಿಲ್ಲೆಯಲ್ಲಿ Ambulance Van ರೀತಿಯಲ್ಲಿ ಒಂದು ವ್ಯಾನ್ ಮಾಡಲಾಗಿದೆ. ಆದರೂ ಸಹ ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡು ಆದಷ್ಟು ಬೇಗ ದುರಸ್ತಿಗೆ ಬಂದಿರುವ ಘಟಕಗಳನ್ನು ಸರಿಪಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಸನ್ಮಾನ್ಯ ಸಭಾಪತಿಯವರೇ, . . . . .

**ಸಭಾಪತಿಯವರು:–** ಮಾನ್ಯ ಸೋಮಣ್ಣ ಬೇವಿನ ಮರದರವರೇ, ಆದಷ್ಟು ಬೇಗ ನೇರವಾಗಿ ತಮ್ಮ ಉಪ ಪ್ರಶ್ನೆಯನ್ನು ಕೇಳಿ. Don't go to the details.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಸನ್ಮಾನ್ಯ ಸಭಾಪತಿಯವರೇ, ಯಾವಯಾವ ಏಜೆನ್ಸಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಏಜೆನ್ಸಿಗಳ ಮೇಲೆ ತೆಗೆದುಕೊಳ್ಳಲಾಗಿರುವ ಕ್ರಮ ಎಂದು ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಒಟ್ಟು 11 ಕಂಪನಿಗಳಿಂದ ಸುಮಾರು 813 ಲಕ್ಷ ರೂಪಾಯಿಗಳನ್ನು ತಡೆಹಿಡಿಯಲಾಗಿದೆ. ಈ 813 ಲಕ್ಷ ರೂಪಾಯಿಗಳು ಯಾರ ದುಡ್ಡು, ಸರ್ಕಾರ ಕೊಡುವುದನ್ನು ಪೆಂಡಿಂಗ್ ಇಡಲಾಗಿದೆಯೋ ಅಥವಾ ಅವರು deposit ಮಾಡಿರುವ ಹಣವನ್ನು ಪೆಂಡಿಂಗ್ ಇಡಲಾಗಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ. ಅವರು ಅಧಿಕಾರಕ್ಕೆ ಬರುವುದಕ್ಕೂ ಮೊದಲು ಶಿಗ್ಗಾವಿ ತಾಲ್ಲೂಕಿನ ಹತ್ತಿಗೇರಿ ಗ್ರಾಮದಲ್ಲಿ ಅವರ ತಂದೆಯವರ ಹೆಸರಿನಲ್ಲಿ ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪನೆ ಮಾಡಿದ್ದರು. ಅದು ಸ್ಥಾಪನೆಯಾಗಿ ಸುಮಾರು 5-6 ವರ್ಷಗಳಾದರೂ ಸಹ ಯಾವುದೇ ರೀತಿಯ ರಿಪೇರಿಗೆ ಬಂದಿಲ್ಲ. ನಾನು ಪ್ರತಿ ಬಾರಿ ಆ ಹಳ್ಳಿಗೆ ಹೋದಾಗ ಆ ಘಟಕವನ್ನು ನೋಡಿ ಬರುತ್ತೇನೆ. ಆ ಶುದ್ಧ ಕುಡಿಯುವ ನೀರಿನ ಘಟಕ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಇಡೀ ರಾಜ್ಯದಲ್ಲಿರುವ ಇತರೆ ಶುದ್ಧ ಕುಡಿಯುವ ಘಟಕಗಳನ್ನು ಅದೇ ಮಾದರಿಯಲ್ಲಿ, ಅದೇ ಗುಣಮಟ್ಟದಲ್ಲಿ ಸ್ಥಾಪನೆ ಮಾಡಬೇಕೆನ್ನುವುದು ನನ್ನ ಅಪೇಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾನ್ಯ ಸಚಿವರು ಸುಧಾರಣೆ ಮಾಡುತ್ತಾರೆ ಎನ್ನುವ ಭರವಸೆ ನನಗಿದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಹತ್ತಿಗೇರಿಯಲ್ಲಿನ ಘಟಕವು 'ಕೆ.ಹೆಚ್.ಪಾಟೀಲ್ ಫೌಂಡೇಶನ್' ವತಿಯಿಂದ ಕುಡಿಯುವ ನೀರಿನ ಆಂದೋಲನದಲ್ಲಿ ಸ್ಥಾಪನೆ ಮಾಡಿರುವಂತಹ ಒಂದು ಘಟಕವಾಗಿದೆ. ಅದರ ನಿರ್ವಹಣೆಯನ್ನು ಸ್ಥಳೀಯ ಮುಖಂಡರು ಮಾಡುತ್ತಿದ್ದಾರೆ. ಆದ್ದರಿಂದ ಕಡಿಮೆ ರಿಪೇರಿಗೆ ಬಂದಿರಬಹುದು. ಕಳೆದ ಮೂರು ವರ್ಷಗಳಲ್ಲಿ ನಾವು ಹತ್ತು ಸಾವಿರ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿದ್ದೇವೆ. ಅವುಗಳಲ್ಲಿ 668 ಘಟಕಗಳು ರಿಪೇರಿಗೆ ಬಂದಿವೆ. ಇನ್ನು ಮುಂದೆ ಈ ಘಟಕಗಳು ಹೆಚ್ಚು ರಿಪೇರಿಗೆ ಬರದಂತೆ ನೋಡಿಕೊಳ್ಳುತ್ತೇವೆ. ಯಾವ ಏಜೆನ್ಸಿಗಳು ಕೆಲಸ ಮಾಡಿಲ್ಲ ಎನ್ನುವ ಪಟ್ಟಿಯನ್ನು ನಾವು ಲಿಖಿತ ರೂಪದ ಉತ್ತರದಲ್ಲಿ ಕೊಟ್ಟಿದ್ದೇವೆ. ಸುಮಾರು 11 ಏಜೆನ್ಸಿಗಳು ಕೆಲಸ ಮಾಡಿಲ್ಲ. ಅವುಗಳಿಗೆ operation and maintenance ಗಾಗಿ ಕೊಡಬೇಕಿದ್ದ ಹಣ ಅಥವಾ ಕೊನೆಯ ಕಂತಿನ ರೂಪದಲ್ಲಿ ಕೊಡಬೇಕಾಗಿದ್ದ ಹಣವನ್ನು ನಾವು ಹಿಡಿದು ಇಟ್ಟುಕೊಂಡಿದ್ದೇವೆ. ಉದಾಹರಣೆಗೆ ಹೇಳಬೇಕಾದರೆ, ರಾಯಚೂರು ಜಿಲ್ಲೆಯಲ್ಲಿನ 'Doshion' ಎನ್ನುವ ಸಂಸ್ಥೆಯ 294 ಲಕ್ಷ ರೂಪಾಯಿಗಳನ್ನು ತಡೆಹಿಡಿದಿದ್ದೇವೆ. 'Smart' ಎನ್ನುವ ಕಂಪನಿಯವರು ಕೆಲಸವನ್ನು ಪೂರ್ಣಗೊಳಿಸಿಲ್ಲ. ಇಂತಹ ಕಂಪನಿಗಳ ಹಣವನ್ನು ತಡೆಹಿಡಿಯುವುದು ಮಾತ್ರವಲ್ಲದೆ ಅವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ. ಅಷ್ಟೇ ಅಲ್ಲದೇ ಮೂರು ವರ್ಷಗಳ ಕಾಲ ಅವರು ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ, breach of contract ಆಗಿದೆ. ಆ ಕಾರಣಗಳಿಂದಾಗಿ ಅವರ ಮೇಲೆ ಕ್ರಿಮಿನಲ್ ಕೇಸ್ ಅನ್ನು ಏತಕ್ಕೋಸ್ಕರ ದಾಖಲು ಮಾಡಬಾರದು ಎನ್ನುವ ನಿಟ್ಟಿನಲ್ಲಿ ನಾವು ಚಿಂತನೆ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಇಲಾಖೆಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಧಾನ ಕಾರ್ಯದರ್ಶಿಗಳಿಗೆ, ಇದರ ಬಗ್ಗೆ ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ.

(ಮುಂದುವರಿದಿದೆ)

(1065)17.11.20171.40-ಪಿಕೆ-ಎಂಡಿ

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 28ನೇ ಪಟ್ಟಿಯಲ್ಲಿರುವ ಒಟ್ಟು 181 ಪ್ರಶ್ನೆಗಳ ಪೈಕಿ 123 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

ಸಭಾಪತಿಯವರು:- ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ ಮಾನ್ಯ ಸದಸ್ಯರು ಗಮನವಿಟ್ಟು ಕೇಳಬೇಕು. ನಾಳೆಯ ದಿವಸ ಕಾರವಾರದ ಹತ್ತಿರ ಇರುವ ನೌಕಾ ನೆಲೆಗೆ ಗೌರವಾನ್ವಿತ ವಿಧಾನ ಪರಿಷತ್ತಿನ ಮತ್ತು ವಿಧಾನಸಭೆಯ ಸದಸ್ಯರುಗಳು ಭೇಟಿ ಕೊಡಲು ಇಚ್ಛೆಪಡುವುದಾದರೆ ಅದರ ವ್ಯವಸ್ಥೆ ಮಾಡಲಾಗುತ್ತದೆ ಎಂದು ಮೊದಲನೆಯ ದಿವಸ, ಅಂದರೆ ಸೋಮವಾರವೇ ಹೇಳಿದ್ದೆ. ಮಾನ್ಯ ಪ್ರಧಾನ ಮಂತ್ರಿಗಳ ಸೂಚನೆಯಂತೆ ಈ ವ್ಯವಸ್ಥೆಯಾಗಿದೆ. ಈಗಾಗಲೇ ಮಾನ್ಯ ಸದಸ್ಯರುಗಳು ಹೆಸರು ಕೊಟ್ಟಿದ್ದಾರೆ. ಯಾರ್‍ಯಾರು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿದ್ದಾರೋ ಅದರ ಪಟ್ಟಿ ನನ್ನ ಹತ್ತಿರ ಇದೆ. ಯಾರು ಬರುತ್ತವೆ ಎಂದು ತಮ್ಮ ಹೆಸರು ಕೊಟ್ಟಿದ್ದಾರೋ ಅವರಿಗೆ ಎಲ್ಲಾ ವ್ಯವಸ್ಥೆಗಳು ಆಗಿವೆ. ನಮ್ಮ ಕೆಲವು ಸಚಿವಾಲಯದ ಅಧಿಕಾರಿಗಳಿಗೆ ಮತ್ತು ನಮ್ಮ ಕೆಲವು ಗೌರವಾನ್ವಿತ ಸದಸ್ಯರುಗಳಿಗೆ ಜವಾಬ್ದಾರಿಗಳನ್ನು ಕೊಟ್ಟಿದ್ದೇನೆ. ಅವರು ದೂರವಾಣಿ ಮೂಲಕ ನಿಮಗೆ ಕೆಲವು ಸೂಚನೆಗಳನ್ನು ಕೊಡುತ್ತಾರೆ. ಪ್ರಮುಖವಾದ 2 ಅಂಶಗಳನ್ನು ಮಾತ್ರ ನಾನು ಹೇಳುತ್ತೇನೆ. ಒಂದನೆಯದು, ಪ್ರಯಾಣ ಮಾಡುವ ಅವಧಿ ಜಾಸ್ತಿ ಇದೆ. ಇಲ್ಲಿಂದ ತಡವಾಗಿ ಹೊರಟರೆ ಕಷ್ಟ ಆಗುತ್ತದೆ. ಆದ್ದರಿಂದ ಬೆಳಗಾವಿಯಿಂದ ಹೊರಡುವವರು ಬೆಳಗ್ಗೆ 6 ಗಂಟೆಯೊಳಗೆ, ನಾವು ವ್ಯವಸ್ಥೆ ಮಾಡಿರುವ ಬಸ್ಸುಗಳನ್ನು ಹತ್ತಲೇ ಬೇಕು. ಯಾವ ಮಾನ್ಯ ಸದಸ್ಯರುಗಳು ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೋ ಅವರಿಗೆ ವಿವರಗಳನ್ನು ದೂರವಾಣಿ ಮೂಲಕ ನೀಡಲಾಗುತ್ತದೆ. ಅಕಸ್ಮಾತ್ ಆಗಿ ಯಾರಾದರೂ ಬರುವುದು ತಡವಾದರೆ ಅವರನ್ನು ಬಿಟ್ಟು ಬಸ್ಸು ಹೊರಡುತ್ತದೆ, ಬೇಸರ ಮಾಡಿಕೊಳ್ಳಬೇಡಿ. ಇವೆರಡೂ ವಿಷಯಗಳನ್ನು ತಾವು ಗಮನಿಸಬೇಕು. ಜಾಲಿ ಟ್ರಿಪ್ ಎಂದು ಮಾಡುವುದಾದರೆ ಅದಕ್ಕೆ ಯಾವುದೇ ನಿರ್ದಿಷ್ಟ ಸಮಯ ಬೇಕಾಗಿಲ್ಲ. ಯಾವುದಾದರೂ ಒಂದು ರೆಸಾರ್ಟ್‌ಗೆ ಹೋಗಿ ಊಟ ಮಾಡಿ ಬರಬಹುದಿತ್ತು. ಆದರೆ ಇಲ್ಲಿ ಹಾಗಾಗುವುದಿಲ್ಲ.

ಸಮಯಕ್ಕೆ ಸರಿಯಾಗಿ ಇಲ್ಲಿಂದ ಹೊರಡಬೇಕಾಗುತ್ತದೆ. ವಾರ್‌ಶಿಪ್ ನೋಡುವುದಕ್ಕೆ ಹೋಗುತ್ತಿದ್ದೇವೆ. ಅವರು ತುಂಬಾ ಅದ್ಭುತವಾದ ಸಂಗತಿಗಳನ್ನು ತೋರಿಸುತ್ತೇವೆ ಎಂದು ಹೇಳಿದ್ದಾರೆ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ, ಅಲ್ಲಿ ಒಳಗಡೆ ನೋಡುವುದಕ್ಕೆ ನಾನು ಸಭಾಪತಿಯಾಗಿ ಕೇಳಿಕೊಂಡರೂ ಅವಕಾಶ ಕೊಡುವುದಿಲ್ಲ. ದೆಹಲಿಯಿಂದ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ವಾರ್‌ಶಿಪ್‌ಗೆ ಹೋಗಲು ಸಮುದ್ರದ ದಡದಿಂದ 50 ಮೈಲಿ ದೂರ ಕರೆದುಕೊಂಡು ಹೋಗಿ, ಅಲ್ಲಿ, ಬಾಂಬ್‌ಗಳನ್ನು ಹೇಗೆ ಹಾಕುತ್ತಾರೆ, ರಾಕೆಟ್‌ಗಳನ್ನು ಹೇಗೆ ಸಿಡಿಸುತ್ತಾರೆ ಎನ್ನುವುದನ್ನು ನಮಗೆ ಲೈವ್ ಮಾಡಿ ತೋರಿಸುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ಕೆಲವು ಶಿಸ್ತುಗಳನ್ನು ಪಾಲಿಸಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಹೋಗದೇ ಹೋದರೆ ಏನೂ ಉಪಯೋಗ ಆಗುವುದಿಲ್ಲ. ಸಂಬಂಧಪಟ್ಟ ನೌಕಾದಳದ ಅಧಿಕಾರಿಗಳ ಜೊತೆ ನಾವೇನು ಈಗಾಗಲೇ ಮಾತನಾಡಿದ್ದೇವೆಯೋ ಆ ಕೆಲವು ವಿಷಯಗಳನ್ನು ಪರ್ಸನಲ್ ಆಗಿ ಪ್ರತಿಯೊಬ್ಬರಿಗೂ ತಿಳಿಸುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ದಯವಿಟ್ಟು ಸಹಕರಿಸಬೇಕು.

## 2. ಪ್ರಕಟಣೆ

**ಸಭಾಪತಿಯವರು:- ಮಾನ್ಯ ಸಭಾಧ್ಯಕ್ಷರಿಂದ ನನಗೆ ಈ ಮುಂದಿನ ಸಂದೇಶ ಬಂದಿರುತ್ತದೆ.**

**ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ:16.11.2017ರಂದು ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ವಿಧೇಯಕ 2017 ಅನ್ನು ಅಂಗೀಕರಿಸಿರುತ್ತದೆ ಎಂದು, ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.**

## 3. ಸಭಾಪತಿಯವರ ಅಪ್ಪಣೆ ಮೇರೆ ಪ್ರಸ್ತಾಪಿಸಲಾದ ವಿಷಯಗಳು

**(ಅ)ವಿಷಯ: ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಕುರಿತು.**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಬಗ್ಗೆ, ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರಲ್ಲಿ ಸೇರ್ಪಡೆಯಾಗಿರುವ ಹೊಸ ಪಿಂಚಣಿ ಯೋಜನೆಯನ್ನು 4 ವರ್ಷ 8 ತಿಂಗಳಾದರೂ ಜಾರಿಗೆ ತರದೇ ಇರುವುದರಿಂದ ಈಗಾಗಲೇ ಅವರು ಧರಣಿ ಆರಂಭಿಸಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅರ್ಹ ದಿನಗೂಲಿ ನೌಕರರಿಗೆ ನ್ಯೂ ಪೆನ್ಷನ್ ಯೋಜನೆಯು ಪೂರ್ವಾನ್ವಯವಾಗುವಂತೆ, ಜಾರಿಗೆ ಬರುವಂತೆ ಕ್ರಮ ಕೈಗೊಳ್ಳುವುದರೊಂದಿಗೆ ಗಳಿಕೆ ರಜೆ, ನಗದೀಕರಣ, ಅನುಕಂಪ ಆಧಾರಿತ ನೇಮಕಾತಿ, ಅರ್ಹ ದಿನಗೂಲಿ ನೌಕರರ ಹೆಸರುಗಳನ್ನು ಗೆಜೆಟ್‌ನಲ್ಲಿ ಅಧಿಸೂಚಿಸುವುದು, ಹಿಂದಿನ ಸೇವೆಯನ್ನು ಸೇವೆಗೆ ಪರಿಗಣಿಸಿ ವೇಟೇಜ್ ನೀಡುವುದು, ಎಕ್ಸ್‌ಗ್ರೇಶಿಯಾ ಮಂಜೂರಾತಿಯಲ್ಲಿ ತಾರತಮ್ಯ ಇತ್ಯಾದಿ ಒಟ್ಟು 10 ಬೇಡಿಕೆಗಳನ್ನು ಈಡೇರಿಸುವಂತೆ ಧರಣಿ ನಡೆಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಮಹಾಮಂಡಲವು ತಮ್ಮ ಮನವಿ ಪತ್ರದೊಂದಿಗೆ ಅನಿರ್ದಿಷ್ಟ ಮುಷ್ಕರದ ನೋಟಿಸ್‌ನ ಪ್ರತಿಯನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಗೆ ನೀಡಿರುತ್ತಾರೆ. ಇದರಲ್ಲಿ, ಗುತ್ತಿಗೆ ನೌಕರರಿಗೆ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಗುತ್ತಿಗೆ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಗುತ್ತಿಗೆ ನೌಕರರು ಹತ್ತು-ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಹುದ್ದೆಗಳಿಗೆ ಭರ್ತಿ ಪ್ರಕ್ರಿಯೆ ನಡೆಸಬಾರದು, ಈ ಗುತ್ತಿಗೆ ನೌಕರರನ್ನೇ ಖಾಲಿ ಹುದ್ದೆಗಳಲ್ಲಿ ಸಕ್ರಮಗೊಳಿಸಬೇಕು, ಗುತ್ತಿಗೆ ಪದ್ಧತಿಯ ನಿವಾರಣೆ ಆಗಲೇಬೇಕು ಎಂಬ ಬೇಡಿಕೆಗಳನ್ನು ಇಡಲಾಗಿದೆ.

ಅದೇ ರೀತಿಯಾಗಿ ಈ ಸರ್ಕಾರ 23000 ದಿನಗೂಲಿ ನೌಕರರಿಗೆ ಭದ್ರತೆಯನ್ನು ಒದಗಿಸಿದ "ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012" ರಲ್ಲಿ ಸೇರ್ಪಡೆಯಾಗಿರುವ ಹೊಸ ಪಿಂಚಣಿ ಯೋಜನೆಯನ್ನು ನಾಲ್ಕು ವರ್ಷ ಎಂಟು ತಿಂಗಳಾದರೂ ಇನ್ನೂ ಜಾರಿಗೆ ತಂದಿಲ್ಲ, ಹಾಗೂ ಕೇವಲ ಶೇಕಡ 75 ಡಿ.ಎ ಹಾಗೂ ಹೆಚ್.ಆರ್.ಎ ಕೊಡಲಾಗುತ್ತಿದೆ.

ಅವರ ಬೇಡಿಕೆಗಳ ಬಗ್ಗೆ ಪದಾಧಿಕಾರಿಗಳೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಸಭೆಯೊಂದನ್ನು ಏರ್ಪಡಿಸಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ(ಸಭಾನಾಯಕರು)**:-ಮಾನ್ಯ ಸಭಾಪತಿಯವರೇ, ಬರುವ ಮಂಗಳವಾರ ಅಥವಾ ಬುಧವಾರ ಇದಕ್ಕೆ ಉತ್ತರ ಒದಗಿಸಿ ಕೊಡುವ ವ್ಯವಸ್ಥೆ ಮಾಡುತ್ತೇನೆ.

**(ಆ) ವಿಷಯ: ರಾಜ್ಯ ಸರ್ಕಾರದ ಪಿಂಚಣಿ ಯೋಜನೆ ಕುರಿತು**

**ಶ್ರೀ ರಮೇಶ್‌ಬಾಬು(ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ದಿನಾಂಕ 1.4.2006 ರಿಂದ ಅನ್ವಯವಾಗುವ ರೀತಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಪಿಂಚಣಿ ಯೋಜನೆಯಲ್ಲಿ ಬದಲಾವಣೆಗಳನ್ನು ಮಾಡಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ FD(SPL) 04 PET 2005 DATED 31-3-2006 ರಂತೆ ನೂತನ ಪಿಂಚಣಿ ಯೋಜನೆಯು ಜಾರಿಗೊಂಡಿರುತ್ತದೆ. ಸದರಿ ಆದೇಶದಲ್ಲಿ 01-04-2006 ರ ನಂತರ ಅನುದಾನಸಹಿತ ಅನುಮೋದನೆಗೊಂಡ ಅನುದಾನಿತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿ ಶಾಲಾ ಕಾಲೇಜುಗಳಲ್ಲಿನ ಸಿಬ್ಬಂದಿಗಳಿಗೆ ಈ ನಿಯಮ ಅನ್ವಯವಾಗುವುದಾಗಿ ತಿಳಿಸಿದ್ದು, ಪಿಂಚಣಿ ಯೋಜನೆಯು ಕಡ್ಡಾಯವಾಗಿರುವುದಿಲ್ಲ. ಇದರಿಂದ ಸಾವಿರಾರು ಶಿಕ್ಷಕರು ಮತ್ತು ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಪಿಂಚಣಿ ವಂಚಿತರಾಗಿರುತ್ತಾರೆ. ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಪಿಂಚಣಿ ಒದಗಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಹೊಸ ಯೋಜನೆಯಲ್ಲಿ ಖಾಸಗಿ ಅನುದಾನಿತ ಶಾಲಾ ಕಾಲೇಜುಗಳನ್ನು ಪಿಂಚಣಿ ಅಪೇಕ್ಷಿತರ ಒಂದು ಭಾಗದ ಕೊಡುಗೆಯನ್ನು ಆಡಳಿತ ಮಂಡಳಿಯು ಪಾವತಿ ಮಾಡಲು ಅವಕಾಶ ಕಲ್ಪಿಸಿರುವುದರಿಂದ ಬಹುತೇಕ ಆಡಳಿತ ಮಂಡಳಿಗಳು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿವೆ. ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ಕಾರ್ಮಿಕ ಕಾಯ್ದೆ ಮತ್ತು ಪ್ರಾವಿಡೆಂಟ್ ಫಂಡ್ ಕಾಯ್ದೆ ಅನ್ವಯ ಯಾವುದೇ ನೌಕರಿಯನ್ನು ನೀಡುವ ಮಾಲೀಕ ತನ್ನ ಜವಾಬ್ದಾರಿಯಿಂದ ವಿಮುಖನಾದಾಗ ಅವನ ಹೊಣೆಗಾರಿಕೆಯು ಮೂಲ ಮಾಲೀಕನಿಗೆ ವರ್ಗಾವಣೆಯಾಗುತ್ತದೆ. ಮಾಲೀಕನ ತಪ್ಪಿಗಾಗಿ ನೌಕರ ತನ್ನ ಸೌಲಭ್ಯದಿಂದ ವಂಚಿತನಾಗಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ಹೊಸ ಪಿಂಚಣಿ ಯೋಜನೆಯಲ್ಲಿ ನೌಕರರಿಗೆ ಸರ್ಕಾರವೇ ಮೂಲ ಮಾಲೀಕನಾಗಿರುವುದರಿಂದ ಮಾಲೀಕನ ಹೊಣೆಗಾರಿಯನ್ನು ಸರ್ಕಾರವೇ ಹೊರಬೇಕಾಗುತ್ತದೆ. ಆದುದರಿಂದ ರಾಜ್ಯ ಸರ್ಕಾರವು ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ನೂತನ ಪಿಂಚಣಿ ಯೋಜನೆಯಲ್ಲಿ ನಿಯಮಾವಳಗಳನ್ನು ಬದಲಾವಣೆ ಮಾಡಿ ನೌಕರರ/ಶಿಕ್ಷಕರ ಹಿತರಕ್ಷಣೆ ಮಾಡಬೇಕಾಗಿರುತ್ತದೆ. ಹೊಸ ಪಿಂಚಣಿ ಯೋಜನೆಯಲ್ಲಿ ನೌಕರರ ಮತ್ತು ಶಿಕ್ಷಕರ ಭವಿಷ್ಯದ ಪ್ರಶ್ನೆ ಅಡಗಿರುವುದರಿಂದ ಸರ್ಕಾರವು ಅವರಿಗೆ ಪೂರಕವಾಗಿ ನಿಯಮಾವಳಿಗಳನ್ನು ರಚನೆ ಮಾಡಬೇಕಾಗಿರುತ್ತದೆ. ಸದರಿ ವಿಷಯವು ಗಂಭೀರ ಸ್ವರೂಪದ್ದಾಗಿದ್ದು, ಸದರಿ ವಿಷಯವನ್ನು ಶೂನ್ಯ ವೇಳೆ ಅಡಿ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-ಮಾನ್ಯ ಸಭಾಪತಿಯವರೇ, ಬರುವ ಬುಧವಾರ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಿಸುವ ಪ್ರಯತ್ನ ಮಾಡುತ್ತೇನೆ.

**(ಇ) ವಿಷಯ: ಜಿಲ್ಲಾ ಮತ್ತು ತಾಲ್ಲೂಕು ವಿಭಜನೆ ಘೋಷಣೆ ಮಾಡುವಾಗ ಸಾರ್ವಜನಿಕ ಅಭಿಪ್ರಾಯ ಆಲಿಸುವ ಕುರಿತು**

**ಶ್ರೀ ಬಸವನಗೌಡ ರಾ.ಪಾಟೀಲ(ಯತ್ನಾಳ)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:-ಮಾನ್ಯ ಸಭಾಪತಿಯವರೇ, ಕರ್ನಾಟಕದ ದಿವಂಗತ ಮಾಜಿ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲರವರ ಸರ್ಕಾರ ಇದ್ದಾಗ ಜಿಲ್ಲಾ ಪುನರ್ವಿಂಗಡಣೆ ಮಾಡಲಾಯಿತು. ಅದೇ ರೀತಿ ಹಿಂದಿನ ಸರ್ಕಾರದ ಅವಧಿಗಳಲ್ಲಿ ಹೊಸದಾಗಿ ತಾಲ್ಲೂಕು ಘೋಷಣೆಯಾಗಿ ಇಂದಿನ ಸರ್ಕಾರದ ಅವಧಿಯಲ್ಲಿ ಅಧಿಕೃತವಾಗಿ ತಾಲ್ಲೂಕು ರಚನೆಯಾಗಿದ್ದು ಈಗ ಸದರಿ ಈ ತಾಲ್ಲೂಕುಗಳಲ್ಲಿ ಯಾವ್ಯಾವ ಜಿಲ್ಲೆಯ ಯಾವ್ಯಾವ ಹಳ್ಳಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ತಾಲ್ಲೂಕುಗಳಿಗೆ ಸೇರಿಸಬೇಕೆಂಬ ಕಾರ್ಯ ಭರದಿಂದ ಸಾಗಿದೆ. ಜನತೆಗೆ ತಾಲ್ಲೂಕು ಕೇಂದ್ರಗಳು ಹಾಗೂ ಜಿಲ್ಲಾ ಕೇಂದ್ರಗಳು ಸಮೀಪವಾಗುವ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಶೀಘ್ರ ವಿಲೇವಾರಿಯ ಇತ್ಯಾದಿ ಅಂಶಗಳನ್ನೊಳಗೊಂಡು ತಾಲ್ಲೂಕು ಘೋಷಣೆಯು ಒಂದು ಭಾಗವಾದರೆ ಇನ್ನೂ ಅನೇಕ ಲೋಪದೋಷಗಳಿದ್ದು, ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಕ್ಕೆ ಕೊನೆ ಹಳ್ಳಿಗಳ ರೈತಾಪಿ ವರ್ಗದವರು ಜಿಲ್ಲಾ ಕೇಂದ್ರಕ್ಕೆ ಮತ್ತು ತಾಲ್ಲೂಕು ಕೇಂದ್ರಕ್ಕೆ ಹೋಗಲು, ಸಂಚಾರ ಸಾರಿಗೆ, ರಸ್ತೆ ಹಾಗೂ ಕಿಲೋ ಮೀಟರ್ ಅಂತರ ಇತ್ಯಾದಿ ಸಮಸ್ಯೆಗಳಿಂದ ಆಡಳಿತಾತ್ಮಕ ತೊಂದರೆಗಳು ಎದುರಾಗಿವೆ. ಇಷ್ಟೆಲ್ಲಾ ಘೋಷಣೆಯಾದರೂ ಸಹ ಅನೇಕ ಗ್ರಾಮಗಳಿಗೆ ತಮ್ಮ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳು ದೂರವಾಗುತ್ತಿದ್ದು, ನಿರ್ದಿಷ್ಟವಾಗಿ ಯಾವ ಹಳ್ಳಿಗಳನ್ನು ಯಾವ ತಾಲ್ಲೂಕಿನಲ್ಲಿ ಸೇರಿಸಿದರೆ ಹಾಗೂ ಯಾವ ತಾಲ್ಲೂಕುಗಳನ್ನು ಯಾವ ಜಿಲ್ಲೆಗಳಿಗೆ ಸೇರಿಸಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಅಧ್ಯಯನ ಮಾಡಿ ಅಲ್ಲಿನ ಜನರ ಭಾವನೆಗಳನ್ನು ಅರಿತು ಅಹವಾಲುಗಳನ್ನು ಸ್ವೀಕರಿಸಿ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳ ಸೀಮೆಯನ್ನು ನಿರ್ಣಯಿಸುವುದು ಸೂಕ್ತ.

ಅದಕ್ಕಾಗಿ ಪ್ರಸಕ್ತ ಜಿಲ್ಲಾ ಹಾಗೂ ತಾಲ್ಲೂಕು ವಿಭಜನೆ ಹಾಗೂ ಘೋಷಣೆ ಇರುವಂತಹ ಪ್ರದೇಶಗಳಿಗೆ ಯಾವ ಗ್ರಾಮಗಳನ್ನು ಯಾವ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಸೇರಿಸಬೇಕೆಂಬುದರ ಕುರಿತು ಸಾರ್ವಜನಿಕರ ಹಿತದೃಷ್ಟಿಯಿಂದ ನಾನು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮುಂದಿನ ಬುಧವಾರ ಇದಕ್ಕೆ ಉತ್ತರ ಒದಗಿಸಿ ಕೊಡುತ್ತೇನೆ. (ಮುಂದು . . .)

(1066)17-11-2017 1.50 ಡಿಎಸ್-ಎಂಡಿ

**ಉ) ವಿಷಯ: ಸಾಲ ಮರುಪಾವತಿ ಅವಧಿ ವಿಸ್ತರಣೆ ಕುರಿತು.**

................

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಹಕಾರಿ ಸಂಸ್ಥೆಗಳಲ್ಲಿ ರೈತರು ಪಡೆದ ಸಾಲದ ಅಸಲನ್ನು ಪಾವತಿಸಲು ನೀಡಿರುವ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪ ಮಾಡುತ್ತಾ, ಈಗಾಗಲೇ ಅತಿವೃಷ್ಟಿ, ಬರದ ಪರಿಸ್ಥಿತಿಯಿಂದ ಹಾಗೂ ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತವಿರುವುದರಿಂದ ರೈತರು ತತ್ತರಿಸಿ ಹೋಗಿದ್ದು ಬ್ಯಾಂಕಿನಲ್ಲಿ ಪಡೆದಿರುವ ಸಾಲವನ್ನು ಮರುಪಾವತಿ ಮಾಡುವ ಪರಿಸ್ಥಿತಿಯಲ್ಲಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಚಿವರು ಈಗಾಗಲೇ ಸಹಕಾರಿ ಸಂಸ್ಥೆಯಲ್ಲಿ ಪಡೆದಿರುವ ಅಸಲನ್ನು ಸಂಪೂರ್ಣ ಪಾವತಿಸಿದರೆ ರೂ.50,000 ಬಡ್ಡಿ ಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ. ಇದು ಶ್ಲಾಘನೀಯವಾದದ್ದು. ದಯಮಾಡಿ ಅಸಲು ಕಟ್ಟಲು ಕಾಲಾವಕಾಶ ಮಾಡಿಕೊಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶೀಘ್ರದಲ್ಲೇ ಅವರಿಗೆ ಉತ್ತರ ಒದಗಿಸಿಕೊಡುತ್ತೇನೆ.

**ಊ) ವಿಷಯ: ಅತಿಥಿ ಉಪನ್ಯಾಸಕರುಗಳ ವೇತನ ಪಾವತಿ ಕುರಿತು.**

---

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ರಾಜ್ಯದಲ್ಲಿ ಅಂದಾಜು 11,000 ಅತಿಥಿ ಶಿಕ್ಷಕರು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಳೆದ ಜುಲೈ ತಿಂಗಳಿನಿಂದ ಪಾಠ ಮಾಡುತ್ತಿದ್ದಾರೆ. ವೇತನದ ನಿರೀಕ್ಷೆಯಲ್ಲಿ ತಾತ್ಕಾಲಿಕ ಶಿಕ್ಷಕರಾಗಿ ಇವರು ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಕೇವಲ 7500 ರೂಪಾಯಿಗಳು, ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ 8,000 ರೂಪಾಯಿಗಳನ್ನಷ್ಟೇ ನಿಗದಿ ಮಾಡಲಾಗಿದ್ದು, ನೇಮಕಾತಿ ಪತ್ರವನ್ನು ನೀಡದೆಯೇ ಅವರಿಂದ ಸೇವೆ ಪಡೆಯಲಾಗುತ್ತಿದೆ. ಇದು ತೀರಾ ಕಡಿಮೆ ವೇತನವಾಗಿದ್ದು, ಸರ್ಕಾರ ಇದನ್ನು ಹೆಚ್ಚು ಮಾಡಬೇಕಾಗಿದೆ. ಈ ಕುರಿತು 'ಪ್ರಜಾವಾಣಿ' ಪತ್ರಿಕೆಯಲ್ಲಿ ನಿನ್ನೆ ವಿವರವಾದ ವರದಿ ಪ್ರಕಟವಾಗಿದೆ.

ಪೂರ್ಣಾವಧಿ ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಅಂಥವರ ಬಗ್ಗೆ ಇಲಾಖೆಯ ನಿರ್ಲಕ್ಷ್ಯ ಸರಿಯಲ್ಲ. ಪ್ರತಿ ತಿಂಗಳೂ ವೇತನ ಏರ್ಪಾಡು ಮಾಡುವಂತಾಗಬೇಕು. ಜೊತೆಗೆ ಜುಲೈ ತಿಂಗಳಿನಿಂದ ನೀಡದಿರುವ ವೇತನವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕೂಡಲೇ ಬಿಡುಗಡೆಗೆ ಕ್ರಮ ಕೈಗೊಂಡು, ಶಿಕ್ಷಕರ ಗೋಳನ್ನು ಪರಿಹರಿಸಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶೀಘ್ರದಲ್ಲೇ ಉತ್ತರವನ್ನು ಒದಗಿಸಿಕೊಡುತ್ತೇನೆ.

**4. ಸಚಿವರ ಹೇಳಿಕೆಗಳು**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಅ) ರಾಜ್ಯದ ಸುಮಾರು 6022 ಗ್ರಾಮ ಪಂಚಾಯತ್‌ಗಳಲ್ಲಿ ಡಾಟಾ ಎಂಟ್ರಿ ಆಪರೇಟ್ ನೇಮಕಾತಿ ಬಗ್ಗೆ.**

……

**ಅ) ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿಯವರು ದಿನಾಂಕ:15-11-2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಆ) **‘ಪದ್ಮಾವತಿ’ ಎಂಬ ಹಿಂದಿ ಚಲನಚಿತ್ರ ಬಿಡುಗಡೆ ವಿರೋಧಿಸಿ ಪ್ರತಿಭಟನೆ ನಡೆಯುತ್ತಿರುವ ಬಗ್ಗೆ.**

…….

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರ ಪರವಾಗಿ ಮಾನ್ಯ ಸದಸ್ಯರಾದ ಲಹರ್ ಸಿಂಗ್ ಸಿರೋಯಾರವರು ದಿನಾಂಕ:16-11-2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಚಾರಕ್ಕೆ ಸದನದಲ್ಲಿ ಉತ್ತರ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

**ಇ) ಸ್ನಾತಕೋತ್ತರ ಕೇಂದ್ರ ಧಾರವಾಡದಲ್ಲಿ ಬೋಧಕ ಮತ್ತು ಬೋಧಕೇತರರನ್ನು ಖಾಯಂ ಆಗಿ ನೇಮಿಸಿಕೊಂಡು ಪ್ರೊಬೇಷನರಿ ಅವಧಿ ಡಿಕ್ಲೇರ್ ಮಾಡದಿರುವ ಬಗ್ಗೆ.**

…….

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ದಿನಾಂಕ:15-11-2017 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಚಾರಕ್ಕೆ ಸದನದಲ್ಲಿ ಉತ್ತರ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು**:- ನಾನು ಸಭೆಯ ಗಮನಕ್ಕೆ ತರುವುದೇನೆಂದರೆ, ಪ್ರಶ್ನೋತ್ತರ ಅವಧಿ ಬಹುಶಃ ನನ್ನ ಈ ಏಳೂವರೆ ವರ್ಷ ಸಭಾಪತಿಯಾಗಿ ಕಾರ್ಯನಿರ್ವಹಿಸಿದ ದಿನಗಳಲ್ಲಿ ಸುಮಾರು ಎರಡು ಮುಕ್ಕಾಲು ಗಂಟೆ ಪ್ರಶ್ನೋತ್ತರ ಅವಧಿ ನಡೆದಿರುವುದು ಇದೊಂದು ದಾಖಲೆಯಾಗಿದೆ. ಆದರೆ ದಾಖಲೆ ಎನ್ನುವ ಪದ ಸರಿಯಾಗುವುದಿಲ್ಲ. ಆದರೆ ಬೇರೆ ಪದ ನನ್ನ ಹತ್ತಿರ ಇಲ್ಲ. ಇದು ಆಗಬಾರದಾಗಿತ್ತು. ದಯಮಾಡಿ ಮಾನ್ಯ ಸದಸ್ಯರುಗಳು ಸಹಕಾರ ಮಾಡದಿದ್ದರೆ ಪ್ರಶ್ನೋತ್ತರವನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸುವುದಕ್ಕಾಗುವುದಿಲ್ಲ. ಬಹಳ ಹಿಂದೆ ನಾನು ಒಂದು ಮಾತನ್ನು ಹೇಳಿದ್ದೆ, ರಾಜ್ಯಸಭಾ ಹೇಗೆ ನಡೆಯುತ್ತದೆ ಎಂಬುದನ್ನು ತಾವೆಲ್ಲರೂ ಗಮನಿಸಿ ನೋಡಿ, ಸಮಯವಾದ ತಕ್ಷಣ ಮುಂದಿನ ಪ್ರಶ್ನೆಗಳೆಲ್ಲಾ laid ಎಂದು ಹೇಳಿ ಪ್ರಶ್ನೋತ್ತರ ಅವಧಿಯನ್ನು ಮುಗಿಸುತ್ತಾರೆ. ಹಾಗೆ ಮಾಡುವುದು ಸರಿಯೇ, ತಪ್ಪೇ ಎನ್ನುವುದರ ಬಗ್ಗೆ ನಾನು ಸದನದಲ್ಲಿ ಚರ್ಚೆಯನ್ನು ಇಟ್ಟಿದ್ದೆ. ನನಗೆ ನೆನಪಿದೆ, ಇದು ಐದು ವರ್ಷಗಳ ಹಿಂದೆ ಹೇಳಿರುವ ಮಾತು. ಗೌರವಾನ್ವಿತ ಸದಸ್ಯರುಗಳೆಲ್ಲರೂ ನಾವು ಸಹಕಾರ ಮಾಡುತ್ತೇವೆ, ಆ ತರಹ ಮಾಡಬೇಡಿ, ಕನಿಷ್ಠ ಎರಡು ನಿಮಿಷ ಅಥವಾ ಮೂರು ನಿಮಿಷ ಒಂದು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದೀರಿ. ಆದರೆ, ಇವತ್ತು ನಾನು ಪದೇಪದೇ ಹೇಳಿದರೂ ಕೂಡ ಆ ಒಂದು ವಿಷಯದ ಬಗ್ಗೆ ವ್ಯಾಖ್ಯಾನಗಳು ನಡೆಯಿತೇ ಹೊರತು pin point ಪ್ರಶ್ನೆಗಳನ್ನು ಕೇಳುವುದಕ್ಕಾಗಲಿಲ್ಲ. ಕೆಲವು ವಿಷಯಗಳು ಈ ತರಹ ಚರ್ಚೆ ಬಂದಾಗ ಕೆಲವು ಸದಸ್ಯರು ನಾವು ಇನ್ನು ಯಾವಾಗ ಪ್ರಶ್ನೆಗಳನ್ನು ಕೇಳಬೇಕು ಎಂದು ಹೇಳುತ್ತಿದ್ದಾರೆ. ನಾನು ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತೇನೆ. ಆ ಸದಸ್ಯರ ಭಾವನೆಗಳನ್ನು ಸರ್ಕಾರ ಗಮನಿಸಬೇಕೆಂದು ನಾನು ಹೇಳುತ್ತಿದ್ದೇನೆ. ಏಕೆಂದರೆ, ಈ ರೀತಿಯ ದಿನಗಳು working days ಜಾಸ್ತಿಯಾದರೆ ಆಗ ಅವರಿಗೆ ಪ್ರಶ್ನೆಗಳನ್ನು ಕೇಳುವುದಕ್ಕೆ, ಮಾತನಾಡುವುದಕ್ಕೆ, ಚರ್ಚೆಗೆ ಅವಕಾಶ ಸಿಗುತ್ತದೆ. ನಮ್ಮ ಸದನ ಬೆಳಗಾವಿ ಅಧಿವೇಶನದ ಇನ್ನು ಉಳಿದ 5 ದಿವಸಗಳು ಸೇರಿದರೆ ಈ ವರ್ಷ 2017ನೇ ಇಸವಿಯಲ್ಲಿ ಎಲ್ಲಾ ಸೇರಿ ಕೇವಲ 40 ದಿವಸ ಮಾತ್ರ ನಡೆದ ಹಾಗೆ ಆಗುತ್ತದೆ. ಅದರಲ್ಲಿ ರಾಜ್ಯಪಾಲರಿಂದ ಭಾಷಣ ಅಥವಾ ಸಂತಾಪ ಸೂಚನೆಗಾಗಿ ಒಂದು ದಿವಸ ಸದನವನ್ನು ಮುಂದೂಡಿರುವುದು, ಇವೆಲ್ಲಾ ಸೇರಿ 40 ದಿವಸ ಆಗುತ್ತದೆ. ಹಾಗಾಗಿ ಇದನ್ನು ಸರ್ಕಾರವೂ ಗಮನಿಸಬೇಕು. ಹೆಚ್ಚಿನ ದಿನಗಳು, ಹೆಚ್ಚಿನ ಸಮಯ ನಡೆಯುವುದಾದರೆ ಎಲ್ಲಾ ಸದಸ್ಯರಿಗೂ ತಮ್ಮ ತಮ್ಮ ಮನಸ್ಸಿನಲ್ಲಿರುವಂತಹ ಸಾಮಾನ್ಯ ಜನರ ಸಮಸ್ಯೆಗಳನ್ನು ಪ್ರತಿಬಿಂಬಿಸುವುದಕ್ಕೆ ಅವಕಾಶ ಆಗುತ್ತದೆ. ಹಾಗೆಯೇ ಪ್ರಶ್ನೋತ್ತರ ಅವಧಿಯನ್ನು ದಯಮಾಡಿ ಎಲ್ಲಾ ಗೌರವಾನ್ವಿತ ಸದಸ್ಯರು ಗೌರವಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಬೇರೆ ಸದಸ್ಯರು ತಮ್ಮ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಕಾಯುತ್ತಿದ್ದಾರೆ. ಆದರೆ ನನಗೆ ಬಹಳಷ್ಟು ಪತ್ರಗಳು ಬಂದಿವೆ. ಇವತ್ತು ಶುಕ್ರವಾರ, 2 ಗಂಟೆ ಆಯಿತು, ನಾವು ಊರುಗಳಿಗೆ ಹೋಗಬೇಕು, ನಮ್ಮನ್ನು ಬಿಟ್ಟುಕೊಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಸದನವನ್ನು ಇನ್ನೂ ನಡೆಸಿ.

**ಸಭಾಪತಿಯವರು**:- ನೀವು ತಯಾರಿದ್ದರೆ ನಾನು ಇನ್ನೂ ಎರಡು ಗಂಟೆ ಕೂರುವುದಕ್ಕೆ ತಯಾರಿದ್ದೇನೆ. ನನಗೇನೂ ಸಮಸ್ಯೆಯಿಲ್ಲ. ನೀವು ಒಬ್ಬರೇ ತಯಾರಿದ್ದರೆ ಆಗುವುದಿಲ್ಲ. ಸದನದ ಎಲ್ಲಾ ಸದಸ್ಯರು ಒಪ್ಪುವುದಾದರೆ ಸದನವನ್ನು ನಡೆಸೋಣ. ನಿನ್ನೆಯ ಕಾರ್ಯಕಲಾಪ ಪಟ್ಟಿಯಲ್ಲಿ ತಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯವನ್ನು ಹಾಕಿದ್ದೆವು. ನಿನ್ನೆ ಒಂದೇ ಒಂದು ವಿಷಯದ ಬಗ್ಗೆ ಮೂರು ಗಂಟೆಗಳ ಕಾಲ ಚರ್ಚೆ ನಡೆಯಿತು. ಮೂರು ಗಂಟೆ ಚರ್ಚೆ ನಡೆದ ಕಾರಣಕ್ಕಾಗಿ ತಮ್ಮ ವಿಷಯವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಹಾಗಾಗಿ ನಾನು ಸಭೆಯನ್ನು ಜಾಸ್ತಿ ಸಮಯ ನಡೆಸುವುದು ಕಷ್ಟವಾಗುತ್ತದೆ. ಈಗ ಎರಡು-ಮೂರು ಸಣ್ಣ ತಾಂತ್ರಿಕ ಕೆಲಸಗಳಿವೆ. ಅದನ್ನು ಮುಗಿಸುತ್ತೇನೆ.

## 5. ವರದಿಗಳನ್ನೊಪ್ಪಿಸುವುದು

**ಅ) ಶ್ರೀ ಮರಿತಿಬ್ಬೇಗೌಡ(ಉಪ ಸಭಾಪತಿಯವರು ಹಾಗೂ ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ):-** ಮಾನ್ಯ ಸಭಾಪತಿಯವರೇ, **ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳ 2017ನೇ ಸಾಲಿನ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215ರ ಮೇರೆಗೆ ಸಮಿತಿಯ ಎರಡನೇ** ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಆ) ಶ್ರೀ ಡಿ.ಎಸ್.ವೀರಯ್ಯ(ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ):-** ಮಾನ್ಯ ಸಭಾಪತಿಯವರೇ, **14ನೇ ವಿಧಾನ ಸಭೆಯ 2016-2017ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಎಂಟನೇ** ವರದಿಯನ್ನು ಸಮಿತಿಯ ಸದಸ್ಯನಾದ ನಾನು ಸದನದಲ್ಲಿ ವರದಿಯನ್ನೊಪ್ಪಿಸುತ್ತಿದ್ದೇನೆ.

**ಇ) ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ):-** ಮಾನ್ಯ ಸಭಾಪತಿಯವರೇ, **ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಸದಸ್ಯನಾದ ನಾನು 14ನೇ ವಿಧಾನ ಸಭೆಯ 2016-2017ನೇ ಸಾಲಿನ ಮುಂದುವರೆದ ಸಮಿತಿಯ ಒಂಭತ್ತನೇ** ವರದಿಯನ್ನು ಸಮಿತಿಯ ಪರವಾಗಿ ವರದಿಯನ್ನೊಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನೊಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ಅರ್ಜಿಗಳನ್ನೊಪ್ಪಿಸುವುದು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಜಪ್ತಿ ಗ್ರಾಮದ ಸರ್ವೆ ನಂ:265ರ ಜಾಗದಲ್ಲಿ ಗಡಿ ಗುರುತಿಸುವಿಕೆ ಹಾಗೂ ಹಂಚಿಕೆಯು ಅಸಮರ್ಪಕವಾಗಿರುವ ಬಗ್ಗೆ;

ಆ) ಉಡುಪಿ ಜಿಲ್ಲೆಯ ಕುಂದಾಪುರ-ಹುಣ್ಸೆಮಕ್ಕಿ-ಮೊಳಹಳ್ಳಿ-ಸೌಡ ಬಿದ್ಕಲ್ ಕಟ್ಟೆ ಮಾರ್ಗವಾಗಿ ಸರ್ಕಾರಿ ಬಸ್ಸಿನ ಸೌಲಭ್ಯವನ್ನು ಒದಗಿಸುವ ಬಗ್ಗೆ;

ಇ) ಉಡುಪಿ ಜಿಲ್ಲೆಯಲ್ಲಿ ಗಣಿ ಇಲಾಖೆಯ ಪರವಾನಗಿ ಪಡೆಯದೇ ಸರ್ಕಾರಿ ಮತ್ತು ಗುತ್ತಿಗೆ ಉದ್ದೇಶಗಳಿಗಾಗಿ ಬಂಡೆಗಳನ್ನು ಬಳಸುತ್ತಿದ್ದರೂ, ಇಲಾಖೆಯು ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಅರ್ಜಿಗಳನ್ನು ಒಪ್ಪಿಸಲಾಯಿತು. ಈಗ ಸದನವನ್ನು 20ನೇ ತಾರೀಖು ಸೋಮವಾರ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡಿತು.**
**ಪುನಃ ದಿನಾಂಕ 20ನೇ ನವೆಂಬರ್ ಮಾಹೆ 2017ರ**
**ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"